ಅಪರಂಜಿ


ತಿಳಿನಗೆಯ ಕಾರಂಜಿ



ಬೆಳ್ಳಿ ಹಬ್ಬದ ವರ್ಷ

ನವಂಬರ್ 2007






ಬಿಡಿ ಪ್ರತಿ: ರೂ.10.00

ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 25

ಸಂಚಿಕೆ - 2

ನವೆಂಬರ್ - 2007

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ.750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003.email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಜಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



ಂ ಪ್ರಕಾಶ್

ದೇಶಸೇವೆ ಮಾಡಲು ನೂರಾರು ರಾಜಕಾರಿಣಿಗಳು ನಾ ಮುಂದು ತಾ ಮುಂದು ಎಂದು ನುಗ್ಗುತ್ತಿರುವುದನ್ನು ನೋಡಿ ಅಪರಂಜಿ ನಲಿದಾಡಿದಳಂತೆ

★★★

ಹಸ್ತಾಂತರ ಮಾಡಲೇಬೇಕಿತ್ತು
- ಜನಾಭಿಪ್ರಾಯ

ಆದನ್ನು ಕಾಂಗ್ರೆಸ್ ಮಾಡುತ್ತಲ್ಲ !!

★★★

ಅಮೆರಿಕದ ವಿಜ್ಞಾನಿಯಿಂದ ಕೃತಕ ಜೀವ ರಚನೆ
- ಸುದ್ದಿ

ಅಯ್ಯೋ, ನಮ್ಮ ಜೀವನವೂ ಅಷ್ಟೆ !!

★★★

ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು
- ಶೀರ್ಷಿಕೆ

ಕೊನೆಗೂ ಠಾಕ್ರೂರರೇ ಬರಬೇಕಾಯಿತು

★★★

ಸರಹದ್ದು ಅಂದರೆ Chain snatcher ಅಂತ ಹೇಳೋದು ಶುದ್ಧ ಕುಹಕ

★★★

ಉತ್ತಮ ರಾಜಕಾರಿಣಿಗಳಾಗಲು ಕರೆ
- ಪತ್ರಿಕೆ

ಆಗಂದ್ರೆ ಏನ್ ಸಾರ್

★★★

ಭಾರತದ ವಿಜಯ - ತಂಡದ ಪ್ರಯತ್ನದಿಂದ
- ದೋನಿ

ರಾಜಕಾರಿಣಿಗಳು ಇದರಿಂದ ಕಲಿಯಲಿ

★★★

ಹಾಡು ಹಗಲಲ್ಲೇ ಲಕ್ಷ ರೂಪಾಯಿ ಮೌಲ್ಯದ ನಗ ನಾಣ್ಯ ಕಳವು
- ಸುದ್ದಿ

ಅಲಕ್ಷ್ಯ ಅಂದರೆ ಇದೇ

★★★


ಧನ್ಯವಾದಗಳು

ಕನ್ನಡ ವಿಜ್ಞಾನ ಪರಿಷತ್ತಿನ 2004 ನೇ ಸಾಲಿನ ರಜತೋತ್ಸವ ಪ್ರಶಸ್ತಿಯನ್ನು ಕೊರವಂಜಿ-ಅಪರಂಜಿ ಟ್ರಸ್ಟ್‌ಗೆ ಅಪರಂಜಿ ಬೆಳ್ಳಿ ಹಬ್ಬದ ಸಮಾರಂಭದಂದು ಪ್ರದಾನ ಮಾಡಲಾಯಿತು. ಕೊರವಂಜಿಯ ಜನಕ ಡಾ|| ಎಂ. ಶಿವರಾಂ ಅವರು ರಚಿಸಿರುವ ವೈದ್ಯ ವಿಜ್ಞಾನ ಪುಸ್ತಕಗಳ ಮರುಮುದ್ರಣಕ್ಕೆ ಹಾಗೂ ಇಂಗ್ಲಿಷ್ ಕೃತಿಗಳ ಕನ್ನಡ ಅನುವಾದಕ್ಕಾಗಿ ಬಳಸಿಕೊಳ್ಳಬಹುದು ಎಂದು ಪ್ರಶಸ್ತಿಯ ಮೊತ್ತವಾದ 25,000/- ರೂಪಾಯಿಗಳನ್ನು ನೀಡುತ್ತಾ ಕನ್ನಡ ವಿಜ್ಞಾನ ಪರಿಷತ್ತಿನ ಸಂಸ್ಥಾಪಕ ಕಾರ್ಯದರ್ಶಿ ಶ್ರೀ ಸು. ಸುಬ್ರಮಣ್ಯಂ ತಿಳಿಸಿದ್ದಾರೆ. ಅಪರಂಜಿ ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸುತ್ತಾಳೆ.

ಕೊರವಂಜಿ-ಅಪರಂಜಿ ಟ್ರಸ್ಟ್‌ಗೆ ದೇಣಿಗೆಯಾಗಿ ಈ ಕೆಳಕಂಡ ಮಹನೀಯರುಗಳು ಒಬ್ಬೊಬ್ಬರೂ 5,000/- ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಪರಂಜಿ ಈ ಇಬ್ಬರಿಗೂ ಆಭಾರಿಯಾಗಿದ್ದಾಳೆ.

ಶ್ರೀ ಎಸ್. ಕೆ. ಹರಿಹರೇಶ್ವರ 4, 3ನೇ ಮುಖ್ಯ ರಸ್ತೆ, 5ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು 570 009 ಫೋನ್: 0821 2544841 ಮೊಬೈಲ್ 98454 7191

ಶ್ರೀ ಬಿ.ಕೆ. ಸುಬ್ಬರಾವ್ - ಬೆಂಗಳೂರು



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯಸಾಹಿತ್ಯ

- ಕು.ಗೋ.

ಬಿ. ಆರ್. ನಾಗೇಶರ ಹೆಸರು ಹೆಚ್ಚಾಗಿ ಕೇಳಿ ಬರುತ್ತಿದ್ದುದು ನಾಟಕ ರಂಗದಲ್ಲಿ. ಹೌದು, ಅವರು ನಾಟಕಗಳನ್ನು ಬರೆದಿದ್ದಾರೆ. ಕೆಲವಷ್ಟು ನಾಟಕಗಳನ್ನು ನಿರ್ದೇಶಿಸಿದ್ದಾರೆ, ರಂಗಭೂಮಿಯ ಬಗ್ಗೆ ಸಂಶೋಧನೆ ಮಾಡಿ 'ಎದ್ದ ಬಿದ್ದ ತೆರೆಗಳು' ಎಂಬ ಪುಸ್ತಕವನ್ನೂ ಬರೆದಿದ್ದಾರೆ. 'ನಚಿಕೇತ' ಎಂಬ ಕಾವ್ಯನಾಮ ಕೈ ಬಿಟ್ಟು ತಮ್ಮ ನಿಜನಾಮದಲ್ಲೇ ಕತೆ ಕಾದಂಬರಿಗಳನ್ನು ಬರೆದು 'ಬಿಸಾಡಿದ್ದಾರೆ.' ಇಂಗ್ಲಿಷ್ ಪ್ರೊಫೆಸರ್ ಆಗಿದ್ದ ನಾಗೇಶರು ಕನ್ನಡಕ್ಕೆ ಕೊಟ್ಟ ಕೊಡುಗೆ ಅಪಾರ. ಸ್ವಲ್ಪ ವಿವಾದಾತ್ಮಕ ವ್ಯಕ್ತಿಯೂ ಆಗಿದ್ದ ನಾಗೇಶರಿಗೆ ಅಭಿಮಾನಿಗಳ ಕೊರತೆ ಇರಲಿಲ್ಲ. ತಮಗೆ ತೋಚಿದ್ದನ್ನು ಧೈರ್ಯವಾಗಿ, ನೇರವಾಗಿ, ಪ್ರಾಮಾಣಿಕವಾಗಿ, ಮನ ಮೆಚ್ಚುವಂತೆ, ಮನ ಚುಚ್ಚುವಂತೆಯೂ ಬರೆದಿದ್ದಾರೆ. ಅವರ 'ದ್ರೌಪದಿ' ಎಂಬ ಕತೆಯನ್ನು ಪ್ರಕಟಿಸಲು ಯಾವ ಪತ್ರಿಕೆಯೂ ಧೈರ್ಯತಾಳಲಿಲ್ಲ ಎಂಬುದು ಉಲ್ಲೇಖನೀಯ.

ನಾಗೇಶರ ಬರಹಗಳಲ್ಲಿ ಎದ್ದು ಕಾಣುವ ಗುಣ ಹಾಸ್ಯ, ವಿಡಂಬನೆ, ಉತ್ಪ್ರೇಕ್ಷೆ, ವಕ್ರ ವಿಶ್ಲೇಷಣೆ ಹಾಗೂ ಫ್ಯಾಂಟಸಿ. ಫ್ಯಾಂಟಸಿ ವಾಸ್ತವ ವೆನ್ನುವಂತೆ ಕತೆಯೊಳಗೆ ತರುವ ಕೌಶಲ್ಯ ಪಡೆದವರಲ್ಲಿ ಶಾಂತಾರಾಮ ಸೋಮಯಾಜಿಯವರನ್ನು ಬಿಟ್ಟರೆ ನಾಗೇಶರೇ ಸರಿ. ಹಾಸ್ಯಲೇಖನಗಳ ಸಂಗ್ರಹ 'ಎಕ್ಸ್‌ಪ್ರೆಸ್ ಸ್ವರ್ಗ'ವನ್ನು ಅವರು ಪ್ರಕಟಿಸಿದ್ದರೂ ಅವರ ಎಲ್ಲ ಕತೆಗಳೂ ಈ ಹಾಸ್ಯ, ವಿಡಂಬನೆ, ಉತ್ಪ್ರೇಕ್ಷೆಗಳ ಸರಮಾಲೆಯೇ ಆಗಿದೆ. ಅವರು ಕತೆಗಳಿಗೆ ಕೊಡುವ ಶಿರೋನಾಮೆಗಳೂ ವಿಚಿತ್ರವಾದವುಗಳೇ - "ರಜನೀಶನಿಗೂ ಅರ್ಥವಾಗದ ಕಚ್ಚೆ", "ಪತಿವ್ರತೆ ಹೆಂಗಸಾದದ್ದು", "ಮನುಪ್ರಣೀತ ಮ್ಯೂಸಿಯಂ", "ಸ್ವರ್ಗದ ಮೂಲಕ ಹಾದು ಹೋದವರು" ಇತ್ಯಾದಿ. ಇವರದು ಸರಾಗವಾಗಿ ಓದಿಸಿ ಕೊಂಡು ಹೋಗುವ, ಲವಲವಿಕೆಯ ಶೈಲಿ. ಅದೇ ಅವರಿಗೆ ಹೆಚ್ಚು ಓದುಗರನ್ನು ದೊರಕಿಸಿ ಕೊಟ್ಟಿದೆ.

ಉಡುಪಿ ಬಿಟ್ಟು ಬೆಂಗಳೂರು ಸೇರಿ, ಅಲ್ಲಿಯೂ ಆಗದೆ ಮುಂಬೈಯಲ್ಲಿ ಸ್ವಂತ ಫ್ಲಾಟ್ ಖರೀದಿಸಿ ಅಲ್ಲೇ ಸ್ವಲ್ಪ ಸಮಯ ಸಾವಿನೊಡನೆ ಹೋರಾಡಿ ಸೋತವರು ನಾಗೇಶರು. ಅಪರಂಜಿಯ ಲೇಖಕರೂ ಆಗಿದ್ದ ನಾಗೇಶರ 'ಒಂದು ಲೆಕ್ಕಾಚಾರ' ಎಂಬ ಬರಹವನ್ನು ಈ ಬಾರಿಯ ಅಪರಂಜಿಗಾಗಿ ಆಯ್ಕೆ ಮಾಡಿದ್ದೇನೆ. ಅವರ ಎಲ್ಲ ಬರಹಗಳನ್ನು ನಮ್ಮ ಓದುಗರು ಓದಿ ಖುಷಿ ಪಡಬೇಕೆಂಬ ಅಪೇಕ್ಷೆ ನನ್ನದು.

ಒಂದು ಲೆಕ್ಕಾಚಾರ

- ಬಿ.ಆರ್. ನಾಗೇಶ್

ಎರಡು ತಿಂಗಳಿನಿಂದ ಯಾವೊಂದು ಹೊಸ ಕತೆಯನ್ನು ಬರೆದಿಲ್ಲ ಎಂಬ ಬೇಸರದಿಂದಲೇ, ದಿನವೂ ರಾತ್ರಿ ದಿಂಬಿಗೆ ತಲೆ ಕೊಡುತ್ತಿದ್ದೆ. ಕತೆಗೆ ವಸ್ತುವೇನೋ ಇತ್ತು - ಕೆಲವು ಘಟನೆಗಳನ್ನು ಮೆಲುಕು ಹಾಕುತ್ತಾ, ಅವುಗಳೊಳಗೆ ಅರ್ಥಪೂರ್ಣ ಕೊಂಡಿಯನ್ನು ಬೆಸೆಯುತ್ತಾ ದಿನದ ಹೆಚ್ಚಿನ ಗಂಟೆಗಳನ್ನು ಕಳೆದರೂ, ಅವು ಯಾವುವೂ ಬರವಣಿಗೆಯ ರೂಪು ತಾಳಲಿಲ್ಲ. ಹಾಗಿರುವಾಗ ಒಂದು ರಾತ್ರಿ ನನಗೊಂದು ಕನಸು ಬಿತ್ತು. ಅದು ಹೀಗಿತ್ತು.

ಯಾವುದೋ ಒಂದು ನದೀ ತೀರ. ಕನಸಿನ ನದಿ ಎಂದರೆ ಅದು ಸುಂದರವಾಗಿದೆ ಎಂದೇ ಲೆಕ್ಕ. ದಡದಿಂದ ಸ್ವಲ್ಪ ದೂರದಲ್ಲಿ ಚಿಕ್ಕ ಚಿಕ್ಕ ದೋಣಿಗಳು - ಅವುಗಳಲ್ಲಿ ಒಂದಿಬ್ಬರಿದ್ದು ಸಣ್ಣಪುಟ್ಟ ಬಲೆಗಳನ್ನು ಉಪಯೋಗಿಸಿ ಮೀನು ಹಿಡಿಯುತ್ತಿದ್ದರು. ಕಾಲ ಯಾವುದೆಂದು ಸರಿಯಾಗಿ ತಿಳಿಯುವಂತಿರಲಿಲ್ಲ. ಮುಂದಾದ ಘಟನೆಗಳಿಂದಾಗಿ ಅದು ಸಂಜೆಯೇ ಆಗಿರಬೇಕೆಂದು ನನ್ನ ಈಗಿನ ಊಹೆ.

ಒಬ್ಬ ತರುಣ ಪ್ಯಾಜಾಮ ಮತ್ತು ನೆಹರೂ ಶರ್ಟ್ ಹಾಕಿಕೊಂಡವ ಕಾಲೆಳೆದುಕೊಳ್ಳುತ್ತಾ ನದಿ ದಡಕ್ಕೆ ಬಂದ. ಆಶ್ಚರ್ಯವೆಂದರೆ ಅವನ ಹಿಂದೆ ನಾನೂ ಇದ್ದೆ - ಅವನಿಗೆ ಕಾಣಿಸದಂತೆ ಹಿಂಬಾಲಿಸುತ್ತಿದ್ದೆ. ಆತನ ನಡಿಗೆಯ ರೀತಿಯನ್ನು ಕಂಡೇ ನನಗೆ ಅನಿಸಿತು - ಜೀವನದಲ್ಲಿ ಈತನಿಗೆ ಜಿಗುಪ್ಸೆ ಹುಟ್ಟಿರಬೇಕೆಂದು. ನದಿ ದಂಡೆಯ ಮೇಲೆ ಅಲ್ಲಲ್ಲಿ ಚೆಲ್ಲಿರುವ ತೆಂಗಿನ ಗರಿಗಳ ನೆರಳಲ್ಲಿ ಆತ ಕುಳಿತ. ನದಿ ನೀರನ್ನೇ ನೋಡತೊಡಗಿದ. ಪ್ಯಾಜಾಮ, ನೆಹರೂ ಶರ್ಟ್ ಹಾಕಿಕೊಂಡವ ನದಿ ನೀರನ್ನು ಎವೆ ಇಕ್ಕದೆ -ನೋಡುವುದೆಂದರೆ, ಅದು ದುರಂತ ಸೂಚಕವೆಂದು ನನಗೆ ಖಚಿತವಾಗತೊಡಗಿತು. ಅಂತೂ ಕೆಲ ಹೊತ್ತು ಅವನು ಅಲ್ಲಿ ಕುಳಿತಿದ್ದ, ನಾನವನ ಹಿಂದೆ ಇದ್ದೆ. ಬಳಿಕ ಆತ ಬಗಲುಕಿಸೆಯಿಂದ ಒಂದು ಬಾಟ್ಲಿಯನ್ನು ಹೊರತೆಗೆದ. ಕೀಟ ಸಂಹಾರಕ - ಫೊಲಿಡಾಲ್ ಅದು, ಎಂದು ನನಗೆ ಕೂಡಲೇ ಗೊತ್ತಾಯಿತು. ಅದನ್ನು ಆತ ನೀರಿಗೆ ಚೆಲ್ಲಲು ತಂದಿರಲಾರ. ಕಾರಣ ಅದರಿಂದ ಅವನಿಗೇನು ಉಪಯೋಗ? ಬಾಟ್ಲಿಯನ್ನು ತನ್ನ ಕಣ್ಣೆದುರಿಗೆ ಹಿಡಿದು ಮದ್ದಿನ ಹೆಸರನ್ನು ಓದಿದ - ಪೊಯಿಸನ್ ಶಬ್ದದ ಸ್ಪೆಲ್ಲಿಂಗ್ ಸರಿ ಇದೆಯೇ ಎಂದು ಮನಸ್ಸಿನಲ್ಲಿಯೇ ಪರೀಕ್ಷಿಸಿರಲೂ ಬೇಕು. ನನಗೆ ನಗು ಬಂತು. ಹೇಗಿದ್ದರೂ ಬಾಟ್ಲಿಯಲ್ಲಿ ಇರುವುದನ್ನು ನುಂಗುವವನಿಗೆ ಪೊಯಿಸನ್ ಶಬ್ದದ ಸ್ಪೆಲ್ಲಿಂಗ್ ಸರಿ ಇದ್ದರೇನು, ಇಲ್ಲದಿದ್ದರೇನು?

ಬಾಟ್ಲಿಯನ್ನು ಕೈಯಲ್ಲಿ ಹಿಡಿದುಕೊಂಡು, ಎಡ ಬಲ ಬದಿಗಳನ್ನು ನೋಡಿದ. ಹಿಂತಿರುಗಿ ನೋಡಿದ. ನಾನಲ್ಲಿ ನಿಂತಿರುವುದು ಅವನಿಗೆ ಕಾಣಿಸಲಿಲ್ಲ - ಕನಸಲ್ಲವೇ? ಇನ್ನೇನು, ಆತ್ಮಹತ್ಯೆಗೆ ತಯಾರಾಗುತ್ತಿದ್ದಾನೆ - ಇನ್ನೇನು ಬಾಟ್ಲಿಯ ಮುಚ್ಚಳ ತೆಗೆಯುತ್ತಾನೆ - ಎಂದು ಊಹಿಸಿಕೊಂಡೇ - ನಾನು ಅವನೊಡನೆ ಮಾತನಾಡಲು ಪ್ರಾರಂಭಿಸಿದೆ.

"ಎಲೈ ಮೂರ್ಖಾ, ಇಂಥ ಸುಂದರ ಸಂಜೆ, ನದಿ ಬದಿಯಲ್ಲಿದ್ದು ಆತ್ಮಹತ್ಯೆಗೆ ಪ್ರಯತ್ನಿಸುತ್ತಿರುವಿಯಲ್ಲ, ನೀನು ಅದಾರು? ನಿನಗೆ ಈ ಕೆಲಸ ಏಕೆ ಬೇಕು? ಈ ಪ್ರಶ್ನೆಗಳಿಗೆ

ಉತ್ತರಿಸು. ನಿನ್ನ ಉತ್ತರ ಸರಿಯಾಗಿದ್ದರೆ, ಫೊಲಿಡಾಲ್ ಸೇವಿಸಲು ಬಿಡುತ್ತೇನೆ. ನಿನ್ನ ಉತ್ತರ ಸಮರ್ಪಕವಾಗಿರದಿದ್ದರೆ ಈಜು ಗೊತ್ತಿರುವ ನಿನ್ನನ್ನು ವ್ಯಾಯಾಮ ಸಹಿತ ನದಿಗೆ ದೂಡಿಬಿಡುತ್ತೇನೆ'' ಎಂದೆ. ನನ್ನ ಮಾತು ಅವನಿಗೆ ಕೇಳಿಸಿತು. ಇದಿಷ್ಟು ನಡೆಯುವಾಗಲೂ ನಾನವನ ಮುಖವನ್ನು ಸ್ಪಷ್ಟವಾಗಿ ನೋಡಿರಲಿಲ್ಲ ಎಂಬುದು ಖಂಡಿತ.

''ಅಯ್ಯಾ ಯಮಧರ್ಮಾ'' ಎಂದು ನನ್ನನ್ನು ಸಂಬೋಧಿಸಿ ಆತ ಹೇಳಲು ಪ್ರಾರಂಭಿಸಿದ. ''ಅಯ್ಯಾ, ನಾನೀಗ ಆತ್ಮಹತ್ಯೆ ಮಾಡಿಕೊಳ್ಳಲೆಂದು ಇಲ್ಲಿಗೆ ಬಂದದ್ದು ನಿಜ. ಆದರೆ ನಾನು ಈ ಕೆಲಸಕ್ಕೆ ಯಾಕೆ ಇಳಿದೆ ಎಂದು ನಿನಗೆ ಗೊತ್ತೇ? ಒಂದು ವೇಳೆ ನೀನು ನನ್ನ ಸ್ಥಿತಿಯಲ್ಲಿ ಇರುತ್ತಿದ್ದರೆ ಯಮಧರ್ಮರಾಯನಾಗಿದ್ದರೂ ನೀನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ. ಸದ್ಯ, ನಾನು ಸಾಯುವ ಮೊದಲು ನನ್ನ ಕತೆ ಕೇಳಲು ನೀನೊಬ್ಬ ಸಿಕ್ಕಿದ್ದೀಯಲ್ಲಾ! ಕೇಳು ನನ್ನ ಕತೆ. ಹಿಂದಿ ಕನ್ನಡ ಸಿನಿಮಾಗಳನ್ನು ನೋಡಿ, ತಮಿಳು, ತೆಲುಗು ಚಿತ್ರಗಳಲ್ಲಿರುವ ಡಾನ್ಸ್‌ಗಳನ್ನು ನೋಡಿ ನೋಡಿ ನಾನೊಂದು ಹುಡುಗಿಯನ್ನು ಪ್ರೀತಿಸಲೇಬೇಕೆಂದು ದೇವರೆದುರಿಗೆ ಆಣೆ ಹಾಕಿಕೊಂಡೆ. ಸರಿ, ನನ್ನ ಅನ್ವೇಷಣೆ ಶುರುವಾಯಿತು. ನಿನಗೆ ಗೊತ್ತಿರಬಹುದು - ನಾನಾಗ ಎಂ.ಎಸ್ಸಿ.ಯಲ್ಲಿ ಗಣಿತದ ವಿದ್ಯಾರ್ಥಿಯಾಗಿದ್ದೆ. ನಾನು ಗಣಿತದಲ್ಲಿ ಹೆಚ್ಚಿನ ಲೆಕ್ಕಾಚಾರಕ್ಕಾಗಿ ಅಮೆರಿಕಕ್ಕೋ ಇಂಗ್ಲೆಂಡಿಗೊ ಹೋಗುವವನಿದ್ದೆ. ಆಗಲೇ ಯಾರನ್ನಾದರೂ ಲವ್ ಮಾಡಬೇಕೆಂದು ನನಗೆ ಅನಿಸಿದ್ದು. ನನ್ನ ತರಗತಿಯಲ್ಲಿ ಯಾರಾದೀತು ಎಂದು ನೋಡಿದೆ. ಗಣಿತ ಕಲಿಯುವ ಯಾವ ಹುಡುಗಿಗೂ ರೂಪ ಆಕಾರ ಇರುವುದಿಲ್ಲ. ಫಿಸಿಕ್ಸ್ ಕಡೆ ಕಣ್ಣು ಹಾಯಿಸಿದೆ - ಪ್ರಯೋಜನವಾಗಲಿಲ್ಲ. ಬರಿಯ ದೇಹ ಬೆಳೆಸಲಿಕ್ಕೆಂದೇ ಬರುವ ಹಲವಾರು ಹುಡುಗಿಯರು ಎಂ.ಎ. ಚರಿತ್ರೆಯ ವಿದ್ಯಾರ್ಥಿನಿಯರಿಗಾಗಿ ಅವಳಲ್ಲಿ ಒಬ್ಬಳಾಗಿ ಬರಬಲ್ಲ ನನ್ನ ಪ್ರೇಯಸಿಗಾಗಿ ದಿನದಿನವೂ ಕಾದೆ. ಒಂದಷ್ಟು ಸಿಗರೇಟು ಉರಿಸಿದೆ. ಕಾಫಿ ಕುಡಿದೆ. ಚರಿತ್ರೆಯೇ ಹಾಗೆ, ಒಂದು ಹೆಣ್ಣಿಗಾಗಿ ರಾಜ ರಾಜ್ಯ ನುಚ್ಚು ನೂರಾಗಿ ಹೋದದ್ದು ಎಂದಿದೆ. ಹಾಗಿರುವಾಗ ಇಲ್ಲಿಯ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದಲ್ಲಿರುವ ಹೆಣ್ಣುಗಳ ಹಿಂದೆ ಮುಂದೆ ಎಷ್ಟು ಮಹಾರಾಜರು - ಯುವರಾಜರು ತಿರುಗುವುದಿಲ್ಲ, ಹೇಳು.

ನನ್ನ ಮುಖ ಗಣಿತಜ್ಞ ರಾಮಾನುಜಂ ಮುಖದಂತಿದೆ ಎಂದು ನನ್ನೊಬ್ಬ ಗೆಳೆಯ ಹೇಳಿದ್ದ. ಅವನಿಗೆ ಒಂದು ಕಣ್ಣು ಸರಿ ಕಾಣಿಸುತ್ತಿರಲಿಲ್ಲ. ಚರಿತ್ರೆಯ ಯಾವ ವಿದ್ಯಾರ್ಥಿನಿಗೂ ನನ್ನ ಮತ್ತು ರಾಮಾನುಜಂ ಒಳಗಿರುವ ಏಕರೂಪತೆ ಯಾಕೆ ಕಾಣಿಸಲಿಲ್ಲ? ಮುಂದೊಂದು ದಿನದಲ್ಲಿ ನಾನೊಬ್ಬ ಜಗತ್‌ವಿಖ್ಯಾತ ಗಣಿತಜ್ಞನಾಗುತ್ತೇನೆಂದು ಈ ಚರಿತ್ರೆಯ ಹೆಣ್ಣು ಮಕ್ಕಳಿಗೆ ಯಾಕೆ ತಿಳಿಯಲಿಲ್ಲ.

ಕೊನೆಗೂ ನನಗೆ ಪ್ರೇಯಸಿಯಾಗಿ ಸಿಕ್ಕಿದವಳು ಕೆಮಿಸ್ಟ್ರಿ ಎಂ.ಎಸ್ಸಿ. ಮಾಡುತ್ತಿದ್ದ ಕಡ್ಡಿಯಾಕಾರದ ಒಂದು ಹುಡುಗಿ. ದೇಹವಿಡೀ ಕಡ್ಡಿಯಂತಿದ್ದರೂ, ಮುಖ ಒಳ್ಳೆ ಲಕ್ಷಣವಾಗಿತ್ತು. ನನಗೆ ಬಹಳ ಇಷ್ಟವಾದದ್ದು ಅವಳ ಹುಬ್ಬುಗಳು ಮತ್ತು ಕಣ್ಣುಗಳು. ಒಂದು ದಿನ ಯುನಿವರ್ಸಿಟಿಯಿಂದ ಪೇಟೆಗೆ ಬರಲೆಂದು ಅವಳು ಬಸ್‌ಸ್ಟ್ಯಾಂಡಿನಲ್ಲಿ ನಿಂತಿದ್ದಳು - ನಾನೂ ಅಲ್ಲಿಗೆ ತಲುಪಿದೆ. ಅವಳನ್ನು ಕಂಡೆ - ಕಾಣುವಂಥದ್ದು ಅವಳಲ್ಲಿ ಏನೂ

ಇರಲಿಲ್ಲವೆನ್ನು, ಧರ್ಮರಾಯಾ, ಅವಳು ನಕ್ಕಳು, ಅದಾದರೋ ಅದ್ಭುತವಾಗಿತ್ತು. ನಾನು ಕಂಡ ಯಾವ ಸಿನಿಮಾ ತಾರೆಯವರಿಗೂ ಆ ರೀತಿ ನಗಲು ತಿಳಿದಿರಲಿಲ್ಲ, ಯುನಿವರ್ಸಿಟಿ ಕ್ಯಾಂಪಸ್ ಒಳಗಿನ ವಿದ್ಯಾರ್ಥಿಗಳಾಗಿದ್ದ ನಮ್ಮಿಬ್ಬರೊಳಗೆ ಮಾತುಕತೆ ಬೆಳೆಯಿತು. ಅಷ್ಟರಲ್ಲಿ ಅವಳ ಮನೆಯಿಂದ ಕಾರು ಬಂತು. ಡ್ರೈವರ್ ಇದ್ದ. ನಾನು ಪೇಟೆಗೆ ಹೋಗುವವನಿದ್ದೇನೆ ಎಂದು ತಿಳಿದು ನನಗೊಂದು ಲಿಫ್ಟ್ ಕೊಟ್ಟಳು – ಪ್ರೀತಿಗೂ ಲಿಫ್ಟ್ ಸಿಕ್ಕಿತು.

ಒಂದು ವರ್ಷದಿಂದ ಅವಳೂ ಒಬ್ಬ ಪ್ರಿಯಕರನ ಹೊಂಚಿನಲ್ಲಿದ್ದಳು. ನಾನೂ ಒಬ್ಬಾಕೆಯ ಹುಡುಕಾಟದಲ್ಲಿದ್ದೆ – ಸರಿ. ನನ್ನ ಗಣಿತ ಮತ್ತು ಅವಳ ರಸಾಯನ ಶಾಸ್ತ್ರ ಒಟ್ಟಾಗತೊಡಗಿತು. ಏನು ಗಾಳಿ ಸಂಚಾರ, ಏನು ತಾತ್ವಿಕ ವಿಚಾರ ಚರ್ಚೆ, ಏನು ಸಿನಿಮಾ ಕುರಿತಾದ ವಿಮರ್ಶೆ, ಏನು ಉಪಾಧ್ಯಾಯರ ಕುರಿತು ಟೀಕೆ – ಟಿಪ್ಪಣಿಗಳು, ಏನು ಜಾಣ ಜಾಣೆಯರಂತೆ ಮಾತನಾಡಿದ್ದು. ಅವಳು ನನಗೆ ಸಿಗುವವಳಲ್ಲ ಎಂದು ಮೊದಲೇ ನನಗೆ ಗೊತ್ತಾಗಬೇಕಿತ್ತು. ಅವಳ ಅಪ್ಪನ ಮೂರು ಕಾರುಗಳ ಹನ್ನೆರಡು ಟಯರ್‌ಗಳಷ್ಟು ಕಿಮ್ಮತ್ತು ಇಲ್ಲದ ನನಗೆ ಅವಳನ್ನು ಲವ್ ಮಾಡಲು ಬುದ್ಧಿ ಬಂದದ್ದಾದರೂ ಹೇಗೆ?

ನೋಡು ಯಮಧರ್ಮಾ, ಒಂದೂವರೆ ವರ್ಷ ಕಳೆದ ಬಳಿಕ, ಹೋದ ತಿಂಗಳಷ್ಟೆ ನಮ್ಮ ಫಲಿತಾಂಶ ಬಂದಿತ್ತು: ನಾನು ಯಾವಾಗಲೂ ಬುದ್ಧಿವಂತ ವಿದ್ಯಾರ್ಥಿಯಾಗಿದ್ದೆ. ಹಾಗಾಗಿ ಡಿಸ್ಟಿಂಕ್ಷನ್‌ನಲ್ಲಿ ಪಾಸಾದೆ. ಅವಳೂ ಫಸ್ಟ್ ಕ್ಲಾಸಿನಲ್ಲಿ ಪಾಸಾದಳು. ಫಲಿತಾಂಶ ಬಂದು ಒಂದು ವಾರದೊಳಗಾಗಿ, ಅವಳದೇ ಡಿಪಾರ್ಟ್‌ಮೆಂಟಿನ ಲೆಕ್ಚರರೊಂದಿಗೆ – ಅವರಿಗೊಂದು ಕೆಂಪು ಮಾರುತಿಕಾರು ಇದೆ – ಮದುವೆ ನಿಶ್ಚಯವಾಯಿತು. ಇವತ್ತು ಮಧ್ಯಾಹ್ನ ಮದುವೆಯೂ ಆಗಿದೆ. ಇನ್ನು ನನ್ನ ಬಾಳಿನ ಯಾವ ಲೆಕ್ಕಾಚಾರಕ್ಕೂ ಅರ್ಥವಿಲ್ಲವೆಂದು ತಿಳಿದು. ಆತ್ಮಹತ್ಯೆಯೇ ಪರಿಹಾರ ಎಂಬ ತೀರ್ಮಾನಕ್ಕೆ ಬಂದಿರುತ್ತೇನೆ. ಪ್ರೀತಿಯಲ್ಲಿ ಸೋತ ನಾನು. ಈ ಸೋಲು ನನ್ನ ಇಡಿಯ ಜೀವಮಾನದಲ್ಲಿ ನೆಗೆಟಿವ್ ಮೌಲ್ಯಗಳನ್ನೇ ತುಂಬುತ್ತಾ ಹೋಗಬಹುದು ಎಂಬ ಹೆದರಿಕೆಯಿಂದ. ಫ್ರೊಲಿಡಾಲ್ ಕುಡಿದು ಪ್ರಾಣ ಬಿಡಲು ನಿರ್ಧರಿಸಿದ್ದೇನೆ'' ಎಂದ. ನನಗೆ ಕನಿಕರವಾಯಿತು.

''ಎಲೋ ಬಚ್ಚಾ, ಮನುಷ್ಯರು ಒಮ್ಮೆ ಪ್ರೀತಿಸಲು ಮಾತ್ರ ಶಕ್ತರು ಎಂದಾಗಿರುತ್ತಿದ್ದರೆ, ಈಗ ಈ ಲೋಕದಲ್ಲಿ ಯಾರೂ ಉಳಿಯುತ್ತಿರಲಿಲ್ಲ. ಪ್ರೇಮ ಮಾಡಬೇಕು. ಕಡ್ಡಿ ತಪ್ಪಿದರೆ ಗುಡಾಣ, ಗುಡಾಣ ತಪ್ಪಿದರೆ ಟೆಂಟು, ಟೆಂಟು ತಪ್ಪಿದರೆ ಇನ್ನೇನೋ. ಪ್ರೇಮ ಪ್ರಕರಣವೆಂದರೆ ಹೀಗೆ, ನಿನಗೆ ಕಡ್ಡಿ ತಪ್ಪಿ ಹೋಯಿತು ಬಿಡು. ಅದಕ್ಕಾಗಿ ಫ್ರೊಲಿಡಾಲ್ ಬೇಡ. ಮುಂದಕ್ಕೆ ನಿನಗೆ ಗುಡಾಣ ಸಿಗಲೂಬಹುದು.....'' ಎಂದು ನಾನು ಅನ್ನುವುದರಲ್ಲಿ ಕನಸು ಮುರಿದು ಬಿತ್ತು. ಅವನ ಮುಖವನ್ನು ನೋಡಲಾಗಲಿಲ್ಲವಲ್ಲಾ ಎಂಬ ವ್ಯಥೆಯಿಂದ, ರಾತ್ರಿಯಲ್ಲಿ ಉಳಿದ ಅರ್ಧ ಗಂಟೆಯನ್ನು ಬೇರೆ ಬೇರೆ ಹೆಂಗಸರ ಮುಖ ಊಹಿಸಿಕೊಂಡು ಕಳೆದೆ.

ಮರುದಿನ ಬೆಳಿಗ್ಗೆ ಎದ್ದವನೇ, ಟೀ ಮುಗಿಸಿದ ಬಳಿಕ, ಹಿಂದಿನ ದಿನ ರಾತ್ರಿಯ ಕನಸನ್ನು ವಿಶ್ಲೇಷಿಸಲು ತೊಡಗಿದೆ. ಸಣ್ಣವನಿದ್ದಾಗ ಫ್ರಾಯ್ಡ್‌ನ ಕೆಲವು ಪುಸ್ತಕಗಳನ್ನು ಓದಿದ್ದೆ. ಯೂಂಗ್‌ನದ್ದು ಕೂಡಾ. ಆದರೆ ಈ ಬಗೆಯ ಕನಸನ್ನು ವಿಶ್ಲೇಷಿಸಲು ಬೇಕಾಗುವ ಸಾಮಗ್ರಿ

ಈ ಪುಸ್ತಕಗಳಲ್ಲಿ ಇದ್ದಿರಲಾರದು ಎಂದು ನನ್ನ ಒಳಮನಸ್ಸೇ ಹೇಳಿತು. ಬೆಳಗ್ಗಿನ ತಿಂಡಿ ಸಮಯದಲ್ಲಿಯೂ ಇದೇ ಯೋಚನೆ ಮುಂದುವರಿಯಿತು. ನಾವು ತಿನ್ನುವ ತಿಂಡಿಗಳಿಂದ, ಕುಡಿಯುವ ಪಾನೀಯಗಳಿಂದ ಕೆಲವು ವಿಶೇಷ ಕನಸುಗಳು ಬೀಳಲು ಸಾಧ್ಯ ಎಂದು ಹಿಂದಿನವರು ಹೇಳಿದ್ದು ನೆನಪಿಗೆ ಬಂತು. ಸರಿ, ಹಿಂದಿನ ದಿನ ನಾನು ತಿಂದಿದ್ದ ವಿಶೇಷ ವಸ್ತು ಯಾವುದೆಂದು ನೆನಪಿಸಲು ತೊಡಗಿದೆ. ಆಗಲೇ ಟಮ್ಮಂತ ಹೊಳೆದು ಬಿಟ್ಟಿತು. ಸಂಜೆ ತಿರುಗಾಟ ಮುಗಿಸಿ ಹಿಂತಿರುಗುವಾಗ ಎದುರಾಗಿ ಸಿಕ್ಕಿದ ಬೇಕರಿಯಿಂದ ಆಗಷ್ಟೇ ತಯಾರಾಗಿ ಬಂದಿದ್ದ ವೆಜಿಟೇಬಲ್ ಪಫ್ ತಂದು ಮನೆಯಲ್ಲಿ ತಿಂದದ್ದು - ಅದೂ ಸಾಸಿನ ಜತೆಗೆ. ಇನ್ನು ಸಂಶಯವೇ ಉಳಿಯಲಿಲ್ಲ. ವೆಜಿಟೇಬಲ್ ಪಫ್‌ನ್ನು ಸಾಸಿನೊಡನೆ ತಿಂದರೆ ಈ ಬಗೆಯ ಆತ್ಮಹತ್ಯೆಯ ಕನಸುಗಳೇ ಬೀಳಬಹುದು ಎಂಬ ಸಿದ್ಧಾಂತಕ್ಕೆ ಬಂದು ತಲುಪಿದೆ. ಆದರೆ ಈ ಸಿದ್ಧಾಂತವನ್ನು ಪರೀಕ್ಷೆಗೆ ಒಳಪಡಿಸಲು ತಿಂಗಳೊಂದನ್ನು ಕಳೆದೆ.

ಆ ದಿನವೂ ಹಾಗೆಯೇ, ತಿರುಗಾಟ ಮುಗಿಸಿ ಬರುವಾಗ ವೆಜಿಟೇಬಲ್ ಪಫ್ ತಂದು, ಮನೆಯಲ್ಲಿ ತಿಂದೆ. ಇವತ್ತು ಒಂದು ಕನಸು ಬೀಳಲೇಬೇಕು. ಅದೂ ಆತ್ಮಹತ್ಯೆಗೆ ಸಂಬಂಧಿಸಿದ್ದೆ ಆಗಬೇಕಾ ಎಂಬ ಹಟದಿಂದ ಬೇಗನೇ ರಾತ್ರಿ ಊಟ ಮುಗಿಸಿ, ಹಾಸುಗೆಯಲ್ಲಿ ಬಿದ್ದುಕೊಂಡೆ. ಸಾಕಷ್ಟು ಆತುರ ಕಾತರಗಳು ಮನಸ್ಸಿನಲ್ಲಿದ್ದುದರಿಂದ ರಾತ್ರಿ ಮೂರರ ತನಕವೂ ನಿದ್ದೆ ಬರಲಿಲ್ಲ, ಕನಸೂ ಬೀಳಲಿಲ್ಲ. ಇನ್ನು ಮುಂದೆ ವೆಜಿಟೇಬಲ್ ಪಫ್ ಪ್ರಯೋಗ ನಿಲ್ಲಿಸಿ ಬಿಡುವುದೆಂದು ತೀರ್ಮಾನಿಸುತ್ತಿದ್ದಂತೆಯೇ ನಿದ್ದೆ ಬಂತು.

ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಕನಸು ಬಿದ್ದೇ ಬಿದ್ದಿತು. ಅದೂ ಆತ್ಮಹತ್ಯೆಯದೇ, ಒಂದು ಹಳೆಯ ಮನೆ. ಕತ್ತಲು ಕತ್ತಲಾಗುತ್ತಿರುವ ಬೆಳಕು. ಮನೆಯ ಎದುರು ಜಗಲಿ ಮೇಲೆ ಗೋಡೆಗೆ ಒರಗಿ ಕುಳಿತಿದ್ದಾನೆ ಅವ - ಹಿಂದಿನವನೇ. ಆದರೆ ವೇಷ ಭೂಷಣ ಮಾತ್ರ ಬೇರೆ. ಈಗ ಸ್ವಚ್ಛವಾದ ಒಂದು ಪಂಚೆಯನ್ನು ಉಟ್ಟು, ಅದರ ಮೇಲೆ ಬಿಳಿಯಾದ ಶರ್ಟು ತೊಟ್ಟು, ಶರ್ಟಿನ ತೋಳನ್ನು ಒಂದು ಬಾರಿ ಮಾತ್ರ ಮಡಚಿಟ್ಟುಕೊಂಡು ಹೆಗಲ ಮೇಲೆ ಚಿಕ್ಕ ಟವೆಲನ್ನು ಏರಿಸಿಕೊಂಡು ಕುಳಿತಿದ್ದಾನೆ. ಕತ್ತಲಾಗಲು ತೊಡಗಿದ್ದರಿಂದ ಆತನ ಮುಖ ನನಗೆ ಕಾಣಿಸಲಿಲ್ಲ. ಆದರೆ ನನ್ನ ಒಳ ಮನಸ್ಸು ಇದು ಅವನೇ ಎಂಬ ಸೂಚನೆಯನ್ನು ದೃಡಪಡಿಸಿತು.

ನಾನು ಮೆಲ್ಲನೆ ಅವನ ಬಳಿ ಸರಿದು ಕುಳಿತೆ. ಈ ಬಾರಿ ಫೊಲಿಡಾಲ್ ಬಾಟ್ಲಿ ಇದೆಯೇ ಎಂದು ಪರೀಕ್ಷಿಸಿದೆ - ಇರಲಿಲ್ಲ ಬದಲಾಗಿ ಇವನ ಬಲಗೈಯಲ್ಲಿ ಹೊಸತಾಗಿ, ಇನ್ನೂ ಪ್ಯಾಕ್ ಒಡೆಯದ ಬ್ಲೇಡು. ನನ್ನನ್ನು ಕಂಡೊಡನೆ ಬಹಳ ಗುರುತಿನವನಂತೆ ಬಳಿ ಕರೆದ. ನಾನು ಹೆದರುತ್ತಾ ಅವನೆಡೆಗೆ ಒತ್ತಿಕೊಂಡೆ. ಆತನ ಮೊಗ ಇನ್ನೂ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. "ಹೆದರಬೇಡಿ. ನಾನು ನಿಮಗೇನೂ ಮಾಡುವುದಿಲ್ಲ. ಇಲ್ಲಿರುವ ಬ್ಲೇಡ್ ಉಂಟಲ್ಲಾ, ಅದನ್ನು ಉಪಯೋಗಿಸಿ, ನನ್ನ ಕುತ್ತಿಗೆಯಲ್ಲಿರುವ ಮತ್ತು ಮಣಿಗಂಟಿನಲ್ಲಿರುವ ರಕ್ತನಾಳಗಳನ್ನು ಕತ್ತರಿಸುತ್ತೇನೆ. ಆಗ ರಕ್ತ ದೇಹದಿಂದ ಹೊರಗೆ ಹರಿಯಲು ಪ್ರಾರಂಭಿಸುತ್ತದೆ. ಸ್ವಲ್ಪ ಸಮಯದಲ್ಲಿಯೇ ತೂತಾದ ಪಾತ್ರೆಯಿಂದ ಎಲ್ಲಾ ನೀರು ಸೋರಿ ಹೋಗುವಂತೆ ದೇಹದಿಂದ ರಕ್ತವೂ ಹರಿದು ಹೋಗುತ್ತದೆ. ಆಗ ನಾನು ಸಾಯುತ್ತೇನೆ. ಚರಿತ್ರೆಯ ಕಾಲದಲ್ಲಿ ಮಹಾರಾಣಿಯರು ಇದೇ ರೀತಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರಂತೆ." ಎನ್ನುತ್ತಾ ಬ್ಲೇಡನ್ನು ಪ್ಯಾಕಿನಿಂದ ಹೊರತೆಗೆದ.

"ಅಲ್ಲೋ ಮಹಾರಾಯ, ಹೋದ ಸರ್ತಿ ಫೊಲಿಡಾಲ್ ತೆಗೆದುಕೊಂಡು ಸಾಯಲು ಹೊರಟವ ನೀನು. ಆದರೆ ನೀನು ಅಂದು ಖಂಡಿತವಾಗಿಯೂ ಸತ್ತಿರಲಾರೆ. ಕಾರಣ ಈಗ ನನ್ನ ಕಣ್ಣೆದುರಿಗೆಯೇ ಇದ್ದಿಯಲ್ಲಾ. ಈ ಸರ್ತಿ ಈ ಬ್ಲೇಡ್. ಯಾಕೆ ಹೀಗೆ ಜೀವದೊಡನೆ ಆಟವಾಡುತ್ತೀ? ಹಾಗೆ ಸಾಯಲೇಬೇಕೆಂದಾದರೆ ಎಕ್ಸ್‌ಪ್ರೆಸ್ ಬಸ್ಸಿನಡಿ ಬೀಳಬಹುದಲ್ಲಾ. ಅದು ಸುಲಭ, ಮತ್ತು ನೀನು ಸತ್ತ ಕೂಡಲೇ ನಿನ್ನ ಸುತ್ತು ಜನ ಸೇರುವ ಸಂದರ್ಭ. ನಿನ್ನ ಹೆಣದ ಮೇಲೆಯೇ ನಿನ್ನ ಗುಣಗಾನ ಮಾಡುವ ಒಂದು ಕಾಲ ಆಗ ಬರುತ್ತದೆ. ಅದು ಬಿಟ್ಟು ಈ ಬ್ಲೇಡು, ಫೊಲಿಡಾಲ್ ಎಲ್ಲಾ ಯಾಕೆ? ಹೋಗಲಿ - ಇವತ್ತು ನೀನು ಆತ್ಮಹತ್ಯೆಗೆ ಹೊರಟಿದ್ದಾದರೂ ಯಾವ ಕಾರಣಕ್ಕೆ? ಹಿಂದಿನ ನಿನ್ನ ಪ್ರೇಮಿ ತನ್ನ ಗಂಡನನ್ನು ಬಿಟ್ಟು ನಿನ್ನ ಬಳಿ ಬಂದಳೇ? ಅದಕ್ಕಾಗಿ ಈ ಆತ್ಮಹತ್ಯೆಯೇ?" ಎಂದು ಅವನಿಂದ ಕೊಂಚ ಕೊಂಚವೇ ದೂರ ಸರಿಯುತ್ತಾ ಪ್ರಶ್ನಿಸಿದೆ.

"ಅಯ್ಯೋ ಮೂರ್ಖಾ, ಮೂರ್ಖಾ, ಸತ್ತ ಪ್ರೇಮ ಎಂದಾದರೂ ಗೋರಿಯಿಂದ ಮೇಲೆ ಬಂದದ್ದಿದೆಯೇ? ಖಂಡಿತವಾಗಿಯೂ ಇಲ್ಲ. ಈ ಸರ್ತಿಯ ಆತ್ಮಹತ್ಯೆಗೆ ಕಾರಣ ಬೇರೆ, ಆರ್ಥಿಕ. ನೋಡು, ನನ್ನ ತಂದೆ ತಾಯಂದಿರು ಬಹಳ ಕಷ್ಟಪಟ್ಟು ನನಗೆ ಓದಿಸಿದರು. ನನ್ನ ತಂದೆಯವರಿಗೆ ಇದ್ದದ್ದು ಸ್ವಲ್ಪ ಭೂಮಿ ಕಾಣಿಕೆ ಮತ್ತು ಒಂದೆರಡು ಬಾಡಿಗೆಗೆ ಕೊಟ್ಟ ಅಂಗಡಿ. ಅವರು ಸತ್ತುಹೋದ ಕೂಡಲೇ, ನನ್ನ ಚಿಕ್ಕಪ್ಪ ಆ ಎಲ್ಲಾ ಭೂಮಿ ಕಾಣಿಕೆಯನ್ನು ತನ್ನವೇ ಎಂದು ಸಾಧಿಸಿದ್ದಾನೆ: ಅಷ್ಟಕ್ಕೂ ಬರಬಹುದಾದ ಬೆಲೆಯನ್ನು ನನ್ನ ತಂದೆಯವರು ಸಾಲ ಮಾಡಿದ್ದು ನನ್ನ ವಿದ್ಯಾಭ್ಯಾಸಕ್ಕೆ, ನಾಲ್ಕು, ತಂಗಿಯರ ಮದುವೆಗೆ. ಅದಕ್ಕೆ ಬದಲಾಗಿ ಈ ಎಲ್ಲಾ ಜಮೀನು ನನ್ನ ಕೈ ಬಿಟ್ಟು ಹೋಗಿದೆ. ಪೈಸೆಕಾಸು ಕೈಯಲ್ಲಿ ಉಳಿದಿಲ್ಲ. ನಾನಿರುವ ಮನೆಯಿಂದ ನನ್ನನ್ನು ಇವತ್ತು ಸಂಜೆ ಹೊರದಬ್ಬಿದ್ದಾನೆ. ಏನು ಮಾಡಲೂ ತೋಚದೆ. ಈ ಬ್ಲೇಡಿನ ಮೊರೆ ಹೊಕ್ಕಿದ್ದೇನೆ" ಎಂದ.

"ಅಯ್ಯಾ ಪುಣ್ಯಾತ್ಮ - ಈ ಜಗತ್ತು ಎಷ್ಟು ನಶ್ವರ ಎಂದು ನಿನಗೆ ಗೊತ್ತೇ? ಈ ಮಣ್ಣು ಈ ಹಣ್ಣು ಈ ಕಣ್ಣು ಎಲ್ಲಾ ನಶ್ವರ. ಹಾಗಿರುವಾಗ ನಿನ್ನ ತಂದೆಯ ಆಸ್ತಿ ಹೋದದ್ದಕ್ಕೆ ನೀನು ಯಾಕೆ ಬೇಸರ ಮಾಡುತ್ತೀ? ಆತ್ಮಹತ್ಯೆಗೆ ಯಾಕೆ ಹೊರಟಿದ್ದಿ? ಪುರಂದರದಾಸರು ಸಾವಿರ ಸಾವಿರ ಬಾರಿ ಹೇಳಿಲ್ಲವೇ - ಇದು ನಶ್ವರಾ ಅಂತ ಹಾಗೆ ತಿಳಿದುಕೊ. ಹೋಗಲಿ - ಆಸ್ತಿ ಹೋಗಲಿ - ನಿನ್ನ ಆತ್ಮಕ್ಕೆ ಏನೂ ಅಪಾಯವಿಲ್ಲ ತಾನೇ. ಬಹುಶಃ ನಿನ್ನ ಭವಿಷ್ಯ..."

"ನನ್ನ ಭವಿಷ್ಯ ಎನ್ನುವಾಗ ನೆನಪಾಯಿತು. ನನಗೆ ಇಂಗ್ಲೆಂಡಿನ ಒಂದು ಯೂನಿವರ್ಸಿಟಿಯಲ್ಲಿ ಗಣಿತದ ಹೆಚ್ಚಿನ ಅಭ್ಯಾಸ ಮಾಡಲಿಕ್ಕೆಂದು ಕರೆ ಬಂದಿದೆ. ನನ್ನೆಲ್ಲಾ ಖರ್ಚು ಅವರೇ ಕೊಡುತ್ತಾರಂತೆ"

"ನೋಡಿದೆಯಾ, ಈ ಸಣ್ಣ ಬ್ಲೇಡು ನಿನ್ನ ಮಣಿಗಂಟು ಮತ್ತು ಕುತ್ತಿಗೆಯನ್ನು ಇದಿಷ್ಟರಲ್ಲಿಯೇ ಗೀರುತ್ತಿದ್ದರೆ. ನಿನ್ನ ಇಂಗ್ಲೆಂಡ್ ಎಲ್ಲಿರುತ್ತಿತ್ತು? ವೀರ ಮಾನವಾ ಎದ್ದೇಳು. ಬ್ಲೇಡ್ ಬಿಸಾಕು ನಿಲ್ಲು" ಎನ್ನುತ್ತಾ ನಾನು ನಿಲ್ಲತೊಡಗಿದಂತೆಯೇ, ನಮ್ಮ ಮನೆಯ ನಾಯಿ ಬೊಬ್ಬಿಡಲು ತೊಡಗಿತು. ನನಗೆ ಎಚ್ಚರವಾಯಿತು.

ಕನಸಿನಲ್ಲಿ ಬಂದಿದ್ದವನ ಮೇಲೆ ನನಗೇನೂ ಅನುಕಂಪವಿರಲಿಲ್ಲ. ಅವನಿಗೆ ನಾಲ್ಕು

ಸಮಾಧಾನದ ಮಾತುಗಳನ್ನು ಆಡಿರಬಹುದು. ಅದೂ ಕನಸಿನಲ್ಲಿ. ಎಲ್ಲಕ್ಕೂ ಮೇಲಾಗಿ ಎರಡು ಕುತೂಹಲಕಾರಿ ಅಂಶಗಳು ನನ್ನ ಒಳಗನ್ನು ಕೊರೆಯತೊಡಗಿದ್ದವು. ಒಂದು ಆತನ ಮುಖವನ್ನು ಇನ್ನೂ ನಾನು ನೋಡದಿರುವುದು; ಎರಡು-ಎರಡು ಬಾರಿಯ ಆತ್ಮಹತ್ಯೆಯ ಅಂಚಿನಲ್ಲಿದ್ದವ ಇನ್ನೂ ಬದುಕಿ ಉಳಿದಿರುತ್ತಾನೆಯೇ ಎನ್ನುವುದು. (ಆತ್ಮಹತ್ಯೆ, ಅಂಚು ಮೊದಲಾದ ಶಬ್ದಗಳು ಬಂದೊಡನೆ ಭೈರಪ್ಪನವರ ನೆನಪಾಗುತ್ತದೆ; ಯಾವತ್ತೂ ಬಂದೊಡನೆ ಕಾರಂತರ, ಪರಾಕು ಬಂದೊಡನೆ ಅಡಿಗರ ನೆನಪಾಗುತ್ತದೆ. ಈ ಬರಹಗಾರರು ಒಂದೊಂದು ಶಬ್ದದ ಮೇಲೆ ಹೇಗೆ ಅಧಿಕಾರ ಚಲಾಯಿಸುತ್ತಾರೆ ನೋಡಿ) ಸರಿ. ಈ ಎರಡು ಕೊರತೆಗಳನ್ನು ನಿವಾರಿಸುವ ಬಗೆಯೂ ನನಗೆ ಗೊತ್ತಿತ್ತು. ಮತ್ತದು ಸುಲಭದ್ದೂ ಆಗಿತ್ತು. ಅದೇ, ತಿರುಗೊಮ್ಮೆ ವೆಜಿಟೇಬಲ್ ಪಫ್ ಕೊಂಡುಕೊಂಡು ತಿಂದೆ. ಅಂದೇ ರಾತ್ರಿ ಅವ ತಿರುಗಿ ಬರಬೇಕೆ?

ಈ ಬಾರಿಯ ಕನಸಿನಲ್ಲಿ ಅವನ ವೇಷಭೂಷಣ ಬದಲೇ ಬದಲಾಗಿತ್ತು. ಈಗ ತಾನೇ ಇಂಗ್ಲೆಂಡಿನ ಪ್ರಸಿದ್ಧ ಯುನಿವರ್ಸಿಟಿಯಿಂದ ಹೊರ ಬಂದವನಂತೆ. ತ್ರಿಪೀಸ್ ಸೂಟ್ ತೊಟ್ಟುಕೊಂಡಿದ್ದ, ಟೈ ಕಟ್ಟಿಕೊಂಡಿದ್ದ. ಆದರೆ ಅಂಥಾ ವೇಷಭೂಷಣಕ್ಕೆ ಏನೇನೂ ಒಗ್ಗದಂತೆ ಅವನ ಕೈಯಲ್ಲಿ ದಪ್ಪಗಿನ ನೈಲಾನ್ ಹಗ್ಗವಿತ್ತು. ಬಹುಶಃ ಐದು ಮೀಟರ್ ಉದ್ದವಾಗಿತ್ತು ಅದು. ಈ ಬಾರಿಯ ಕನಸಿನಲ್ಲಿಯೂ ಮೊದಲಾಗಿ ಆತ ಮೊಗ ತೋರಲಿಲ್ಲ. ನನ್ನನ್ನು ಕಂಡವನೇ, ಕೈಯಲ್ಲಿದ್ದ ನೈಲಾನ್ ಹಗ್ಗವನ್ನು ಮೇಲಕ್ಕೆತ್ತಿ, ನಾನದನ್ನು ಪರಿಪೂರ್ಣವಾಗಿ ಕಾಣುವಂತೆ ಆಚೀಚೆ ಅಲುಗಾಡಿಸಿ, ಬಳಿಕ ಮಾತನಾಡಲು ತೊಡಗಿದ.

''ಎಲೈ ಜಂತುವೇ, ಯಾಕೆ ನನ್ನನ್ನು ಈ ರೀತಿಯಾಗಿ ಹಿಂಬಾಲಿಸುತ್ತೀ? ನಾನು ಸಾವಿನ ಅಂಚಿಗೆ ಹೋಗಿ ತಲುಪುವಾಗಲೆಲ್ಲಾ ಸಾಕ್ಷಿ ಪ್ರಜ್ಞೆಯಾಗಿ ನೀನು ಬರುತ್ತೀ. ಎರಡು ವರ್ಷಗಳ ಹಿಂದೆ ಹೀಗಾದದ್ದು ನಿನಗೆ ನೆನಪಿದೆಯೇ? ನಿನ್ನಿಂದಾಗಿ ನನಗೆ ಆತ್ಮಹತ್ಯೆ ಗುಟ್ಟಾಗಿ ನಡೆಯಲಾರದು. ಯಾರೊಬ್ಬನೂ ಆಗ ಎದುರಿಗೆ ಇರಬಾರದು. ಯಾರಾದರೂ ಎದುರಿಗಿದ್ದರೆ ಅದು ಆತ್ಮಹತ್ಯೆಯಾಗುವುದಿಲ್ಲ, ಕೊಲೆಯಾಗುತ್ತದೆ. ನಾನು ಕೊಲೆಯಾಗಲು ಇಚ್ಛಿಸುವುದಿಲ್ಲ. ಆತ್ಮಹತ್ಯೆ ಮಾಡಿಕೊಳ್ಳಲು ಇಚ್ಛಿಸುತ್ತೇನೆ'' ಎನ್ನುತ್ತಾ ಅತ್ತಿತ್ತ ನೋಡ ತೊಡಗಿದ. ಎಲ್ಲಾದರೂ ಮರ ಸಿಗುತ್ತದೆಯೇ ಎಂದು ಪರೀಕ್ಷಿಸಿದ. ಆದರೆ ಮರುಭೂಮಿಯಂತೆ ಇದ್ದ ಆ ಸ್ಥಳದಲ್ಲಿ ಇವನಿಗಾಗಿ ಯಾರು ಮರ ನೆಟ್ಟಿದ್ದಾರು? ಯಾರು ಮರಕ್ಕೆ ನೀರು ಹಾಕಿ ಬೆಳೆಸಿದ್ದಾರು? ಅದೇ ಸಂದರ್ಭವನ್ನು ಬಳಸಿಕೊಂಡು ನಾನು ಅವನಲ್ಲಿ ಮಾತು ಬೆಳೆಸಿದೆ.

'' ಈ ಹಿಂದೆ ನೀನು ಎರಡು ಬಾರಿ ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಿದ್ದರೂ ಇನ್ನೂ ಬದುಕಿ ಉಳಿದಿರುವೆಯಲ್ಲಾ - ಅದು ಆಶ್ಚರ್ಯಕರ. ಇರಲಿ ಆದದ್ದು ಆಗಿ ಹೋಯಿತು. ಈಗ ನೈಲಾನ್ ಹಗ್ಗಕ್ಕೆ ನಿನ್ನ ಕುತ್ತಿಗೆ ಕೊಡುವಂಥದ್ದು ಏನಾಗಿದೆ?'' ಎಂದು ಕೇಳಿದೆ.

ಆತ ನೈಲಾನ್ ಹಗ್ಗದ ತುದಿಯನ್ನು ಉರುಳು ಮಾಡುತ್ತಾ, ಅದನ್ನು ಪರೀಕ್ಷಿಸುತ್ತಾ ಹೀಗೆಂದ: ''ನೋಡು, ಇಂಗ್ಲೆಂಡಿನಲ್ಲಿ ಓದು ಮುಗಿಸಿ ಬಂದೊಡನೆಯೆ, ಊರಿನವರೆಲ್ಲರೂ ನನಗೆ ಸಂಬಂಧಿಕರಾದರು. ಹುಡುಗಿ ನಿಶ್ಚಯಿಸಿದರು. ನಿನ್ನೆಯೆ ಮದುವೆ ಮಾಡಿದರು. ರಾತ್ರಿ

ನಾವಿಬ್ಬರೂ ಏನು ಮಾಡಬೇಕಿತ್ತೋ ಅದನ್ನು ಮಾಡದೆ ಹೋದೆವು. ಅಥವಾ ಇಬ್ಬರಿಂದಲೂ ಅಂಥದ್ದು ಸಾಧ್ಯವಾಗದೆ ಹೋಯಿತು. ನನಗೆ ದುಃಖ, ಬೇಸರ, ಜುಗುಪ್ಸೆ ನನ್ನ ದೇಹದ ಮೇಲೆಯೇ ಸಿಟ್ಟು ಬಂತು. ಅಂಥಾ ಒಂದು ಪರಿಪಕ್ವ ದೇಹ ನನ್ನ ಬಳಿ ಇರುವಾಗ, ನನ್ನಲ್ಲೇಕೆ ಲೈಂಗಿಕ ಬಿಸಿ ಹುಟ್ಟಲಿಲ್ಲ? ನನ್ನ ದೇಹಭಾಗ ಯಾಕೆ ಕೆಲಸ ಮಾಡಲಿಲ್ಲ? ಅರ್ಥವಾಗಲಿಲ್ಲ. ಅವಳು ಏನೇನೋ ಪ್ರಯತ್ನಿಸಿದಳು. ಆದರೂ ಊಹ್ಞೂಂ..... ಬೆಳಗ್ಗಿನ ಜಾವ ಆಯಾಸದಿಂದ ನನಗೆ ಜೊಂಪು ಹತ್ತಿತು. ಎದ್ದು ನೋಡಿದಾಗ ಅವಳು ಇರಲಿಲ್ಲ. ಹೊರ ಬಂದು ನೋಡಿದೆ. ಇಲ್ಲ. ನಾನಿದ್ದ ಮನೆಯವರಲ್ಲಿ ಕೇಳಿದೆ. ಅವರಿಗೂ ಗೊತ್ತಿರಲಿಲ್ಲ. ಕೊನೆಗೆ ಒಂದೆರಡು ಗಂಟೆಗಳ ಹುಡುಕಾಟದ ಬಳಿಕ ಅವಳ ಹೆಣ ಬಾವಿಯಲ್ಲಿ ಸಿಕ್ಕಿತು. ಆಗಲೇ ನಾನು ನಿರ್ಧರಿಸಿದೆ. ನಾನಿನ್ನು ಬದುಕಿ ಇರುವುದರಲ್ಲಿ ಅರ್ಥವಿಲ್ಲ ಎಂದು. ಅದಕ್ಕೆ ಸರಿಯಾಗಿ ಇವತ್ತು ನಾನು ಹುಟ್ಟಿದ ದಿನವೂ ಹೌದು. ನಾನು ಹುಟ್ಟಿದ್ದು ನವೆಂಬರ್ ಐದನೆಯ ತಾರೀಕು ಸಂಜೆ ಏಳೂವರೆ ಗಂಟೆಗೆ ಎಂದು ಅಮ್ಮ ಹೇಳುತ್ತಿದ್ದುದು ಥಕ್ಕನೆ ನೆನಪಾಯಿತು. ಈ ಭೂಮಿಗೆ ನಾನು ಯಾವ ದಿನ ಎಷ್ಟು ಗಂಟೆಗೆ ಬಂದಿದ್ದೆನೋ, ಅದೇ ದಿನ ಅದೇ ಗಂಟೆಗೆ ಇಲ್ಲಿಂದ ಹೊರಟು ಬಿಡಬೇಕು ಎಂಬ ನಿರ್ಧಾರದಿಂದ ಮನೆಯವರೊಡನೆ ಈಗ ಬರುತ್ತೇನೆಂದು ಸೂಚಿಸಿ, ಪೇಟೆ ಅಂಗಡಿಯಿಂದ ನೈಲಾನ್ ಹಗ್ಗ ತಂದು. ಒಂದು ದೊಡ್ಡ ಗಟ್ಟಿ ಮರವನ್ನು ಹುಡುಕುತ್ತಾ ಇದಿಷ್ಟು ದೂರ ಬಂದು ನಿಂತಿದ್ದೇನೆ. ಇಡೀ ದಿನ ನಡೆಯುತ್ತಲೇ ಇದ್ದುದರಿಂದ ಈಗ ಆಯಾಸವಾಗಿದೆ. ಈಗ ಗಂಟೆ ಏಳು. ಇನ್ನು ಸರಿಯಾಗಿ ಮೂವತ್ತು ನಿಮಿಷದಲ್ಲಿ ನಾನು ಸಾಯಲೇಬೇಕು. ಥೂ ಇದು ಏನು ಜಾಗವೋ ಒಂದು ಮರವೂ ಕಾಣಿಸುವುದಿಲ್ಲ. ಹ್ಞಾಂ, ಮುಂದೆ ನೇರವಾಗಿ, ಒಂದು ಗೀಟಿನಂತೆ ಕಾಣುವ ನ್ಯಾಶನಲ್ ಹೈವೇ ಕಾಣಿಸುತ್ತದೆ. ಅದರ ಅಕ್ಕಪಕ್ಕದಲ್ಲಾದರೂ ಒಂದು ಮರ ಸಿಕ್ಕೀತು'' ಎನ್ನುತ್ತಾ ನನ್ನತ್ತ ಸಂಪೂರ್ಣ ತಿರುಗಿ, ಅವನ ಮೊಗವನ್ನು ನನಗೆ ಸ್ಪಷ್ಟವಾಗಿ ತೋರಿಸಿದ.... ಮಾರ್ಗ ಕಾಣಿಸಿತು... ಕನಸು ಮುರಿಯಿತು.

ಅಷ್ಟರಲ್ಲಿ ಬೆಳಗಾಗಿತ್ತು. ಬೆಳ್ಳಂಬೆಳಗ್ಗೆ ಬಿದ್ದ ಕನಸು ನನಸಾಗುತ್ತದೆ ಎಂದು ಹಿಂದೆ ಯಾರೋ ಹೇಳಿದ್ದನ್ನು ನಾನು ಕೇಳಿದ್ದೆ. ಸಧ್ಯ ನಂಬಬೇಕಿರುವ ವಿಚಾರ ಇದರೆಡೆಯಲ್ಲಿ ಝುಗ್ ಅಂತ ಹೊಳೆದೇ ಬಿಟ್ಟಿತು. ನನ್ನ ಕನಸಿನಲ್ಲಿ ಮೂರು ಬಾರಿ ಬಂದವ ಮತ್ತಾರೂ ಆಗಿರಲಿಲ್ಲ. ಕೆಲವು ವರ್ಷಗಳ ಹಿಂದೆ ಕಾಲೇಜ್‌ನಲ್ಲಿ ಕಲಿಯುತ್ತಿದ್ದಾಗ ನನ್ನ ಸಹಪಾಠಿಯಾಗಿದ್ದ ನರಸಿಂಹ ಭಟ್ಟ. ಕಲಿಯುತ್ತಿರುವಾಗಲಿಂದಲೂ ಅವನಿಗೆ ಸಂಖ್ಯೆಗಳ ಲೆಕ್ಕಾಚಾರಗಳ ಮೇಲೆ ವಿಶ್ವಾಸ. ವಿಶ್ವದ ಎಲ್ಲದರ ಹಿಂದೆಯೂ ಒಂದು ಲೆಕ್ಕಾಚಾರವಿದೆ. ನಾವು ಯೋಚಿಸುವ ಯೋಚನೆಗಳೂ ಯಾವುದೋ ಒಂದು ನಿಯಮಬದ್ಧ ಗಣಿತ ಕ್ರಿಯೆಯ ಭಾಗ ಎಂದು ವಿದ್ಯಾರ್ಥಿಯಾಗಿರುವಾಗಲೇ ಏನೇನೋ ಹೇಳುತ್ತಿದ್ದ. ನಮ್ಮ ಉಪನ್ಯಾಸಕರಿಗೂ ಆತ ಹೇಳುತ್ತಿದ್ದುದು ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಅವನನ್ನು ನೋಡದೆ ಕೆಲವು ವರ್ಷಗಳೇ ಸಂದಿವೆ. ಆತ ಕಾಲೇಜ್ ಮುಗಿಸಿದ ಬಳಿಕ ಯೂನಿವರ್ಸಿಟಿಗೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ಹೋದದ್ದು ಗೊತ್ತಿತ್ತು. ಹಾಗೆಯೇ ಕೆಲವು ವರ್ಷಗಳಾದ ಬಳಿಕ ಯಾವುದೋ ಪಾಶ್ಚಾತ್ಯ ದೇಶದ ಯೂನಿವರ್ಸಿಟಿಯೊಂದು ಆತನನ್ನು ತನ್ನಲ್ಲಿಗೆ ಕರೆಯಿಸಿಕೊಂಡದ್ದು ದಿನಪತ್ರಿಕೆಯಲ್ಲಿ ಅವನ ಚಿತ್ರ ಸಹಿತ ಪ್ರಕಟವಾಗಿದ್ದ ವಾರ್ತೆಯಿಂದ

ತಿಳಿದಿತ್ತು. ಆದರೆ ಆತನ ಮದುವೆ ಗೊತ್ತಿರಲಿಲ್ಲ. ಏನೇ ಇರಲಿ. ಆತ ಊರಲ್ಲಿಯೇ ಇದ್ದರೆ, ನನ್ನ ಕನಸು ಬೆಳ್ಳಂಬೆಳಗ್ಗೆ ಬಿದ್ದದ್ದು ಹಾಗಾಗಿ ಸತ್ಯವೇ ಆಗಿರಬೇಕು. ಆತನನ್ನು ಕಂಡುಬಿಡೋಣ ಮತ್ತು ನನ್ನ ಮೂರು ಕನಸುಗಳನ್ನು ಅವನೆದುರಿಗೆ ತೆರೆದಿಟ್ಟು ವಿಶ್ಲೇಷಣೆ ನಡೆಸೋಣ. ಬದುಕಿಗೂ ಕನಸಿಗೂ ವಿಶೇಷ ಅಂತರವಿರಲಾರದು ಎಂಬ ತೀರ್ಮಾನಕ್ಕೆ ಬರೋಣ ಅಥವಾ ಪ್ರತಿ ಕನಸಿನ ಹಿಂದೆಯೂ ಯಾವುದೋ ಎಂದು ಬಗೆಯ ಲೆಕ್ಕಾಚಾರ ಇದ್ದೀತೇ? ಎಂದು ಕೇಳೋಣ. ಎಂಬ ನೂರಾರು ವಿಚಾರಗಳನ್ನು ತಲೆಗೆ ತುಂಬಿ ಅವನ ಹಳೆಯ ಮನೆಗೆ ಹೋದೆ. ಅಲ್ಲಿ ಇದ್ದದ್ದು ಅವನ ಚಿಕ್ಕಪ್ಪನಾಗಿರಬೇಕು. ಸಧ್ಯ ನರಸಿಂಹ ಒಂದು ಬಾಡಿಗೆ ಮನೆಯಲ್ಲಿ ಇದ್ದಾನೆಂದು ತಿಳಿಸಿ, ಅಲ್ಲಿ ಹೋಗುವ ದಾರಿ ಸೂಚಿಸಿದರು.

ಅದೊಂದು ದೇವಸ್ಥಾನ, ಪುರಾತನ ಕಾಲದ್ದು. ಅದರ ಬದಿಯಲ್ಲಿಯೇ ಸಾಲು ಸಾಲಾಗಿರುವ ಮನೆಗಳು. ದೇವಸ್ಥಾನದಿಂದ ಮೂರನೆಯ ಮನೆಯಲ್ಲಿ ನರಸಿಂಹ ಭಟ್ಟ ಇದ್ದ. ಹೋಗಿ ಬಾಗಿಲು ತಟ್ಟಿದೆ. ಮೈ ಜುಮ್ಮೆಂದಿತು. ನರಸಿಂಹ ಭಟ್ಟ ನನ್ನ ಕನಸಿನಲ್ಲಿ ಮೂರು ಸರ್ತಿ ಬಂದವ. ಮೂರು ಬಾರಿ ಆತ್ಮಹತ್ಯೆಗೆಂದು ತಯಾರಿ ನಡೆಸಿದವ, ನನ್ನೆದುರಿಗೆಯೇ ಬಂದು ನಿಂತಿದ್ದಾನೆ. ನಿನ್ನೆಯ ಕನಸಿನಲ್ಲಿ ನಾನು ಕಂಡಂತೆಯೇ ಇದ್ದಾನೆ. ಬಟ್ಟೆ ಬರೆ ಮಾತ್ರ ಬೇರೆ. ನನ್ನ ಪರಿಚಯ ಅವನಿಗಾಗಲಿಲ್ಲ, ಸ್ವಾಭಾವಿಕವದು. ಇಂಗ್ಲೆಂಡಿನಲ್ಲಿ ಎರಡು ವರ್ಷಗಳಿದ್ದು ಬಂದವ ತಾನೇ! ನಾನೇ ನನ್ನ ಹೆಸರು ಹೇಳಿಕೊಂಡೆ. ಕಾಲೇಜ್‌ನಲ್ಲಿ ನಾವು ಸಹಬೆಂಚಿಗರಾಗಿದ್ದೆವು ಎಂದು ನೆನಪಿಸಿದೆ. ಆಗ ಆತನಿಗೆ ಒಮ್ಮೆಲೇ ಎಲ್ಲವೂ ಕಾಣಿಸಿದಂತಾಯಿತು. ಅದು ತನಕ ಬಾಗಿಲಲ್ಲೇ ನಿಂತಿದ್ದ ನನ್ನನ್ನು ಒಳ ಬರಲು ಸೂಚಿಸಿದ. ಚಿಕ್ಕ ಮನೆಯಾದರೂ ಚೊಕ್ಕವಾಗಿತ್ತು. ಕೋಣೆಯ ಮೂಲೆಯೊಂದರಲ್ಲಿ ಬಣ್ಣದ ಹಾಗೂ ಚಿತ್ರಗಳಿದ್ದ ಪ್ಲಾಸ್ಟಿಕ್ ಹಾಳೆ ಹಾಸಿಕೊಂಡ ಮೇಜಿತ್ತು. ಅದರ ಮೇಲೆ ಎದ್ದು ಕಾಣುವಂತೆ ಇರಿಸಿದ್ದ ಫೊಲಿಡಲ್ ಬಾಟ್ಲಿ, ಬ್ಲೇಡು ಮತ್ತು ನೈಲಾನ್ ಹಗ್ಗ.

ನಾನು ಆ ಈ ಮಾತನಾಡುತ್ತಾ, ಆ ಮೂರು ವಸ್ತುಗಳ ಕುರಿತು ಪರೋಕ್ಷ ಪ್ರಶ್ನೆಗಳನ್ನು ಎಸೆಯ ತೊಡಗಿದೆ. ನನ್ನ ಪ್ರಶ್ನೆಗಳಿಗೆ ಅವನು ಕೊಟ್ಟ ಉತ್ತರದಿಂದ ಈ ಕೆಳಗಿನ ಭಾಗವನ್ನು ಬರೆಯುತ್ತಿದ್ದೇನೆ.

ಕೆಲವು ದಿನಗಳ ಹಿಂದೆ ಅವನಿಗೆ ಮದುವೆಯಾದದ್ದೂ ಹೌದು. ಮದುವೆಯ ಮರುದಿನವೇ ಅವನ ಹೆಂಡತಿ ಬಾವಿಗೆ ಹಾರಿ ಪ್ರಾಣ ಕಳೆದುಕೊಂಡದ್ದೂ ಹೌದು. ಆ ದಿನದಂದೇ. ಎಂದರೆ ನವೆಂಬರ್ ಐದರಂದೇ ಆತ್ಮ ಹತ್ಯೆಗೆ ಕಡೆಯ ಪ್ರಯತ್ನ ಮಾಡಬೇಕೆಂದು ನಿರ್ಣಯಿಸಿದ. ಈ ಹಿಂದೆ ಎರಡೂ ಬಾರಿಯೂ ಲೆಕ್ಕಾಚಾರದಂತೆ ಆತ್ಮಹತ್ಯೆಗೆ ಪ್ರಾರಂಭಿಸಿದ್ದ. ಎರಡು ಬಾರಿಯೂ ತಾನು ಹುಟ್ಟಿದ ದಿನವನ್ನೇ ಆರಿಸಿಕೊಂಡಿದ್ದ. ಅವನದು ಒಂದು ಲೆಕ್ಕಾಚಾರ: ನವೆಂಬರ ಐದರಂದು ರಾತ್ರಿ ಏಳೂವರೆಗೆ ಒಂದು ಜೀವ ಸಾಯಬೇಕಿತ್ತು. ಆ ಜೀವ ಅವನದೇ ಆಗಿರಬೇಕಿತ್ತು. ಅದೇಕೆ ಅದೇ ದಿನ. ಅದೇ ಗಂಟೆ ಜೀವನಾಶ ಮಾಡಿಕೊಳ್ಳಬೇಕು? ಅದಕ್ಕೆ ಅವನಿಂದ ಬಂದ ಉತ್ತರ ನನ್ನನ್ನು ದಿಗ್ಭ್ರಮೆಗೊಳಿಸಿತು. ಈ ವಿಶ್ವದಲ್ಲಿ ಅಡಗಿರುವ ಒಂದು ಗೂಢ ನಿಯಮದಂತೆ ಯಾವ ವ್ಯಕ್ತಿ ತಾನು ಹುಟ್ಟಿದ ದಿನ ಮತ್ತು ಗಳಿಗೆಯಲ್ಲಿ ಸಾಯುತ್ತಾನೋ ಅವನಿಗೆ ಗಣಿತಾನಂದಕ್ಕೆ

ಮೀರಿದ ಸುಖ ಸಿಗುವ ಒಂದು ಸ್ಥಾನ ದೊರಕವುದಂತೆ. ಅಂದರೆ ಗಣಿತದ ಮೂಲಕ ಗಣಿತಕ್ಕೂ ಮೀರಿದ ಒಂದು ಆನಂದದ ಸ್ಥಿತಿಗೆ ತಲುಪಲು ಆತನ ಪ್ರಯತ್ನ ಎಂದಾಯಿತು.

ನೈಲಾನ್ ಹಗ್ಗ ಹಿಡಿದು, ಉದ್ದನೆ ಗೀಟಿನಂತೆ ಕಾಣುವ (ಬೆಳಗಾಮ್ - ಪೂನಾ ರಸ್ತೆ) ರಸ್ತೆಯಲ್ಲಿ ಒಂದು ಮರವನ್ನು ಹುಡುಕುತ್ತಾ ಹೋಗುತ್ತಿದ್ದನಂತೆ. ಗಂಟೆ ಏಳೂವರೆಯಾಗಲು ಇನ್ನು ಐದು ನಿಮಿಷಗಳಿವೆ ಎನ್ನುವಾಗ ಮಾರ್ಗದ ಬದಿಯಲ್ಲಿ ಬಿದ್ದಿದ್ದ, ಬಹಳ ಕೊಳಕಾಗಿ ಮನುಷ್ಯನಾಗಿದ್ದರೂ ಮನುಷ್ಯನಂತಿಲ್ಲದಿದ್ದ ಒಬ್ಬ ಹುಚ್ಚನನ್ನು ಕಂಡನಂತೆ. ಬಹುಶಃ ತನ್ನ ಬದುಕನ್ನು ಏಳೂವರೆಗೆ ಕೊನೆಗಳಿಸಲೆಂದು ಹೊರಟಿರುವ ನರಸಿಂಹನ ಭಟ್ಟನಿಗೆ, ಆ ಹುಚ್ಚನ ಬದುಕಿಗೆ ಪೂರ್ಣ ವಿರಾಮ ಹಾಕುವುದು ಮಾನವೀಯವಾಗಿ, ಅಗತ್ಯವಾಗಿ ಕಂಡಿತು. ಹಾಗಾಗಿ, ಆಗ ರಸ್ತೆಯಲ್ಲಿ ಯಾರೂ ಇರದಿದ್ದುದನ್ನು ಕಂಡು, ಕೊಳಕು ಹುಚ್ಚನ ಬಳಿ ಸಾರಿ, ಏಳೂವರೆ ಗಂಟೆಗೆ ಸರಿಯಾಗಿ ನೈಲಾನ್ ಹಗ್ಗ ಅವನ ಕೊರಳು ಸುತ್ತಿ ಉಸಿರು ನಿಲ್ಲಿಸಿದ. ಅವನಿಂದ ಇಷ್ಟು ವಿಚಾರಗಳನ್ನು ಕೇಳಿದ ಮೇಲೆ ನಾನೊಬ್ಬ ಕೊಲೆಗಡುಕನೊಡನೆ ಮಾತನಾಡುತ್ತಿದ್ದೇನೆಂಬ ಹೆದರಿಕೆಯಿಂದ ಮೇಲೆದ್ದೆ. ಹೋಗುತ್ತೇನೆ ಎಂದೆ. ನನ್ನನ್ನು ನಿಲ್ಲಲು ಹೇಳಿದ. ಕಾಫಿ ತರುತ್ತೇನೆಂದು ಒಳ ಹೋದವ ತಿರುಗಿ ಬಂದು, ಮೇಜಿನ ಮೇಲಿದ್ದ ಪೊಲಿಡಾಲ್, ಬ್ಲೇಡ್, ನೈಲಾನ್ ಹಗ್ಗಗಳನ್ನು ತೆಗೆದುಕೊಂಡು, ನನ್ನನ್ನು ಕಂಡು ನಕ್ಕು ತಿರುಗೊಮ್ಮೆ ಒಳಹೋದ. ನಾನು ಬೆವರುತ್ತಾ ಕುಳಿತೆ. ಆತ ತರುವ ಕಾಫಿಯನ್ನು ಕುಡಿಯಬೇಕೇ - ಬೇಡವೇ ಎಂಬ ತಾಕಲಾಟದಲ್ಲಿದ್ದು ನಡುಗುತ್ತಿರುವಾಗಲೇ ಎರಡು ಲೋಟಗಳನ್ನು ಕೈಯಲ್ಲಿ ಹಿಡಿದುಕೊಂಡು ಹೊರಬಂದ. ಬಲಗೈಯಲ್ಲಿದ್ದ ಲೋಟವನ್ನು ನನ್ನೆಡೆಗೆ ಚಾಚಿದ. ನಾನು ಸಂಶಯಗ್ರಸ್ಥನಾಗಿ ಅವನನ್ನು ಕಂಡೆ. ಲೋಟದ ಕಡೆಗೆ ಕೈ ಚಾಚದೆ "ಆ ಪಾಪದ ಹುಚ್ಚನನ್ನು ಕೊಂದು ಬಿಟ್ಟೆ, ಅವನಿಗೆ ಗಣಿತಾನಂದಕ್ಕಿಂತ ಮಿಕ್ಕಿದ ಸುಖ ಸಿಕ್ಕಿತೆಂದು ಹೇಗೆ ಹೇಳುತ್ತೀ?" ಎಂದು ಕೇಳಿದೆ.

"ನನ್ನ ಒಳ ಮನಸ್ಸು ಹೇಳಿದಂತೆ ನಾನು ಮಾಡಿದೆ. ಏಳು ಇಪ್ಪತ್ತಮೂರಕ್ಕೆ ನಾನವನ ಬಳಿ ನಿಂತಿದ್ದಾಗ ಆತ ಹೇಳುತ್ತಿದ್ದ ಮಾತು, ಮದುವೆಯಾದ ಮೊದಲ ರಾತ್ರಿ ತಾನು ಸೋತು ಹೋದೆ. ಸೋತು ಹೋದೆ ಎಂದಾಗಿತ್ತು. ಆತ ಮಲೆಯಾಳಿ ಭಾಷೆಯಲ್ಲಿ ಹೇಳುತ್ತಿದ್ದನಾದರೂ ಮಾತು ಸ್ವಚ್ಛವಾಗಿತ್ತು. ನನಗೆ ಅರ್ಥವಾಗುವಂತಿತ್ತು. ನಾನೂ ಅದೇ ಸ್ಥಿತಿಯಲ್ಲಿದ್ದವ. ನನ್ನ ಲೆಕ್ಕಾಚಾರದಂತೆ ಇಬ್ಬರ ಮನಸ್ಸಿನಲ್ಲಿ ಏಕಕಾಲದಲ್ಲಿ ಒಂದೇ ಯೋಚನೆ ಹುಟ್ಟಿಕೊಂಡರೆ, ಅವರಿಬ್ಬರ ಈ ನಿನ್ನೆಯೇ ಆಗಿತ್ತ ಎಂಬುದು ನನ್ನ ಲೆಕ್ಕಾಚಾರ. ಅದೇ ಲೆಕ್ಕಾಚಾರದಂತೆ ಆತ ಈಗ ಗಣಿತಾನಂದವನ್ನು ಮೀರಿ ಸುಖಿಸಬಲ್ಲ ವಿಶ್ವದ ಯಾವುದೋ ಒಂದು ಮೂಲೆಯಲ್ಲಿರುವ ಗ್ರಹದಲ್ಲಿ ಹುಟ್ಟಿರುತ್ತಾನೆ" ಎಂದ. ನಾನವನ ಕಾಫಿಯನ್ನು ಕುಡಿಯದೆ ಮನೆ ಬಿಟ್ಟು ಹೊರ ಓಡಿಬಂದೆ.


ಮುಂದೊಂದು ದಿನ ವೆಜಿಟೇಬಲ್ ಪಫ್ ತಿಂದು "ನರಸಿಂಹ ಭಟ್ಟ ಲೋಟೆಯಲ್ಲಿದ್ದ ಕಾಫಿಗೆ ಪೊಲಿಡಾಲ್ ಸೇರಿಸಿ ಕುಡಿದು ಸತ್ತ" ಎಂಬ ಕನಸು ಕಾಣಲೇಬೇಕೆಂಬ ಹಟದಿಂದ, ಮೂರು ವೆಜಿಟೇಬಲ್ ಪಫ್‌ಗಳನ್ನು ಒಮ್ಮೆಲೇ ತಿಂದು ಮಲಗಿದೆ; ಆ ರಾತ್ರಿ ನಾನೇ ಆತ್ಮಹತ್ಯೆಮಾಡಿಕೊಂಡ ಕನಸು ಬೀಳಬೇಕೇ?

❖❖❖

ಶರಲೇಖನ ಸಾಹಸ

ಅಣು ವಿಜ್ಞಾನಿಯ ಖಾಸಗೀ ರಹಸ್ಯ

- ವತ್ಸನ



"ಇಂತಹದೇ ಅಂತ ಸ್ಪಷ್ಟವಾಗಿ ಪಿನ್ ಪಾಯಿಂಟ್ ಮಾಡುಕ್ಕಾಗ್ತಾ ಇಲ್ಲ ಇವರ ವಿಚಾರದಲ್ಲಿ, ಹಾಗಾಗಿ ದೂರದ ಬೆಂಗಳೂರಿನಿಂದ ನಿಮ್ಮನ್ನ ಕರೆಸಿ ನಿಮಗೆ ತೊಂದರೆ ಕೊಡಬೇಕಾಯಿತು ಶರಲೇಖ ಅವರೇ. ಅಂದಹಾಗೆ ಇಲ್ಲಿ ನಿಮಗೆ ಎಲ್ಲ ಅನುಕೂಲವಾಗಿದೆ ತಾನೆ" ಎಂದು ಇನ್ಸ್ಪೆಕ್ಟರ್ ಕಥ್‌ಬರ್ಟ್ ಸೌಜನ್ಯದಿಂದ ವಿಚಾರಿಸಿಕೊಂಡ.

"ಓಹೋ, ಎಲ್ಲ ಫಸ್ಟ್‌ಕ್ಲಾಸ್, ಮನೆಯೊಡತಿ ಮಿಸೆಸ್ ಕ್ಲಾರಾ, ಚೆನ್ನೈ ದೋಸಾದಿಂದ ತರಿಸಿದ ಮಸಾಲೆ ದೋಸೆಯನ್ನ ಮೈಕ್ರೋವೇವ್ ಮಾಡಿ ಬೆಳಗಿನ ಉಪಹಾರ ನೀಡಿದರು. ಚಿಕ್ಕಂದಿನಲ್ಲಿ ಫೊರೆನ್ಸಿಕ್ ವಿಜ್ಞಾನ ಓದುತ್ತಾ ಇದ್ದಾಗ ನಾನು ಈ ಊರಿನಲ್ಲಿದ್ದದ್ದು. ಲಂಡನ್ನಿನ ಮರುಪರಿಚಯ, ಅದಕ್ಕೂ ಹೆಚ್ಚಾಗಿ ಇಲ್ಲಿನ ಪರಿಸರದಲ್ಲಿ ಪತ್ತೇದಾರಿ ಕೆಲಸ ಮಾಡುವ ಅವಕಾಶ ಸಿಕ್ಕಿರುವುದು ನಿಜಕ್ಕೂ ಸಂತೋಷ ಆಗ್ತಾ ಇದೆ ಇನ್ಸ್ಪೆಕ್ಟರ್ ಕಥ್‌ಬರ್ಟ್...."

"ಇಲ್ಲ, ಇಲ್ಲ, ಇಲ್ಲ, ಜಿಮ್, ... ಜಿಮ್ ಅಂತ ಕರೀರಿ ನನ್ನ. ನನ್ನ ಸಹೋದ್ಯೋಗಿಗಳೆಲ್ಲಾ ನನ್ನನ್ನ ಹಾಗೇ ಕರೆಯೋದು."

"ಆಯ್ತು, ಇದು ನನ್ನ ಗೆಳೆಯ ಹಾಗೂ ಸಹಾಯಕ, ಡಾ|| ವತ್ಸನ. ಈಗ ಎಲ್ಲಾ ವಿವರವಾಗಿ ಹೇಳಿ. ನಮ್ಮಿಂದ ಎಂತಹ ಸಹಕಾರದ ಅಪೇಕ್ಷೆ ಇದೆ ನಿಮಗೆ? ಯಾವ ರೀತಿ ನಾವು ನಿಮಗೆ ನೆರವಾಗಬಹುದು? ಯಾರ ವಿಚಾರದಲ್ಲಿ ಏನನ್ನ ಪಿನ್ ಪಾಯಿಂಟ್ ಮಾಡುಕ್ಕಾಗ್ತಾ ಇಲ್ಲ?"

"ಹೇಳ್ತೀನಿ. ಇದೆಲ್ಲಾ ಬಹು ಗೌಪ್ಯ ವಿಷಯ ಅಂತ ಪ್ರತ್ಯೇಕವಾಗಿ ಹೇಳಲೇಬೇಕಾಗಿಲ್ಲ ಅಲ್ಲವೇ. ನಾನು ಹೇಳ್ತಾ ಇರೋದು ನಮ್ಮ ನಾಡಿನ ಖ್ಯಾತ ಅಣು ವಿಜ್ಞಾನಿ ಡಾ|| ಲು ಅವರ ವಿಷಯ. ಅವರ ಸಂಶೋಧನೆಯ ಕೆಲಸ ಬಹು ಮಹತ್ವದ್ದು. ಆದ್ದರಿಂದ ನಮ್ಮ ಸಿಬ್ಬಂದಿಗಳು ಅವರ ಮೇಲೆ ನಿಗಾ ಇಡುವಂತೆ ನಮ್ಮ ಹಿರಿಯಧಿಕಾರಿಗಳು ಆಣತಿ ನೀಡಿದ್ದರು. ಇತ್ತೀಚೆಗೆ ಅವರ ಸಂಶಯಾಸ್ಪದ ನಡವಳಿಕೆ ನೋಡಿ ನಮ್ಮ ಅಧಿಕಾರಿಗಳಿಗೆ ಅನುಮಾನ ಬಂದು, ಅವರಿಂದ ನಮ್ಮ ಅಣು ರಹಸ್ಯಗಳಿಗೆ ಏನೂ ಧಕ್ಕೆ ಇಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳುವ ಕೆಲಸವನ್ನು ನನಗೆ ವಹಿಸಿದ್ದಾರೆ. ಹಾಗಾಗಿ ನಾನು ನಿಮ್ಮ ಸಹಾಯ ಕೋರಬೇಕಾಯಿತು."

"ನಿಮ್ಮ ಡಾ|| ಲು ಅವರು ಚೀನೀಯರೇನು?"

"ಇಲ್ಲ, ಇಲ್ಲ, ಅವರು ಭಾರತ ದೇಶದವರು. ಮೂಲತಃ ಹೈದರಾಬಾದಿನವರೆಂದು ದಾಖಲೆಗಳು ಹೇಳುತ್ತವೆ. ಇಲ್ಲಿ ನೋಡಿ ಅವರ ಪಾಸ್‌ಪೋರ್ಟ್ ಕಾಪಿ..."

ಜಿಮ್‌ನಿಂದ ಪಾಸ್‌ಪೋರ್ಟ್ ಪ್ರತಿಯನ್ನು ಪಡೆದು ಶರಲೇಖ ಅದನ್ನು ಸೂಕ್ಷ್ಮವಾಗಿ

ಪರಿಶೀಲಿಸಿದ. ಅನಂತರ ಜೋರಾಗಿ ನಗುತ್ತಾ ಆ ಪ್ರತಿಯನ್ನು ನನ್ನೆಡೆಗೆ ಚಾಚಿದ. ಅವನಿಂದ ನಾನು ಅದನ್ನು ಪಡೆದು ಕಣ್ಣುಹಾಯಿಸಿದೆ. ಹೆಸರು ಎಂಬ ಸ್ಥಳದಲ್ಲಿ ಗುಡಪಲ್ಲಿ ವೆಂಕಟೇಶ್ವರಲು ಎಂದು ಬರೆದಿದ್ದು ಕಂಸಗಳಲ್ಲಿ ಜಿ.ವಿ.ಲು ಎಂದಿತ್ತು.

''ಇಂಡಿಯನ್ ಕನೆಕ್ಷನ್ ಈಗ ಅರ್ಥವಾಯಿತು. ನಿಮ್ಮ ಡಾ|| ಲು, ಸಂಶಯಾಸ್ಪದವಾಗಿ ಏನು ಮಾಡಿದ್ದಾರೆ?''

''ಅದನ್ನ ಹೇಳುಕ್ಕೆ ಮುಂಚೆ ಅವರ ಹಿನ್ನೆಲೆಯನ್ನು ನಿಮಗೆ ಸ್ವಲ್ಪ ತಿಳಿಸಬೇಕು. ಡಾ|| ಲು ಅವರು ಕೇಂಬ್ರಿಡ್ಜಿನ ಅಣು ವಿಜ್ಞಾನದ ಸಂಶೋಧನಾ ಕೇಂದ್ರದ ನಿರ್ದೇಶಕರು. ಕಳೆದ ಇಪ್ಪತ್ತು ವರ್ಷಗಳಿಂದ ಇಲ್ಲಿಯೇ ನೆಲೆಸಿದ್ದಾರೆ. ಹೆಂಡತಿ ಮತ್ತು ಒಬ್ಬ ಮಗಳೊಡನೆ ಕೇಂಬ್ರಿಡ್ಜಿನಲ್ಲಿಯೇ ವಾಸ. ಮಗಳು ವಿಮೆನ್ಸ್ ಸ್ಟಡೀಸ್‌ನಲ್ಲಿ ಬಿ.ಎ. ಮಾಡುತ್ತಿದ್ದಾಳೆ. ಸಾಮಾನ್ಯವಾಗಿ ಇವರ ಓಡಾಟವೆಲ್ಲಾ ಮನೆಯಿಂದ ಯೂನಿವರ್ಸಿಟಿ ಕಾಲೇಜಿಗೆ ಮತ್ತೆ ಅಲ್ಲಿಂದ ಮನೆಗೆ ಅಷ್ಟೇ. ಕಳೆದ ಎರಡು ತಿಂಗಳುಗಳಿಂದ ಪ್ರತಿ ಶನಿವಾರ ಅವರು ಲಂಡನ್ನಿಗೆ ಬಂದು ದಕ್ಷಿಣ ಏಷ್ಯನ್ನರೇ ತುಂಬಿರುವ ಈಸ್ಟ್‌ಹ್ಯಾಮಿನಲ್ಲಿ ಒಂದು ಪುಟ್ಟ ಮನೆಗೆ ತಪ್ಪದೇ ಭೇಟಿ ನೀಡುತ್ತಿದ್ದಾರೆ....''

''ಆ ಮನೆಯಲ್ಲಿ ಯಾರ್ಯಾರು ವಾಸ?'' ಶರಲೇಖನ ಪ್ರಶ್ನೆ ಹರಿತವಾದ ಬಾಣದಂತೆ ಮೂಲಕ್ಕೆ ತಗುಲಿತು.

''ಅಲ್ಲಿರುವುದು ಒಬ್ಬನೇ ಒಬ್ಬ. ವೆಸ್ಟ್‌ಮಿನ್ಸ್ಟರಿನ ಪೋಸ್ಟ್ ಆಫೀಸಿನಲ್ಲಿ ಆತ ಒಬ್ಬ ಕ್ಲಾರ್ಕ್. ಹೆಸರು ವಿಶ್ವನಾಥನ್. ಸಾಧು ಪ್ರಾಣಿ. ತಾನಾಯಿತು ತನ್ನ ಕೆಲಸವಾಯಿತು. ಇಂತಹನೊಡನೆ ಖ್ಯಾತ ಅಣು ವಿಜ್ಞಾನಿಗೆ ಎಂತಹ ಸಂಬಂಧ ಎಂಬುದೇ ಅರ್ಥವಾಗುತ್ತಿಲ್ಲ. ಅವರನ್ನು ನೇರವಾಗಿ ಕೇಳುವುದಂತೂ ಸಾಧ್ಯವಾಗದ ಮಾತು. ಕೋಪಿಸಿಕೊಂಡು ಇವರು ಕೆಲಸ ಬಿಟ್ಟರೆ ನಮ್ಮ ಸಂಶೋಧನೆಯ ಕೆಲಸಕ್ಕೆ ಆಗುವ ಹಾನಿಯ ಜೊತೆಗೆ ಇವರು ಅಮೆರಿಕಾಕ್ಕೆ ವಲಸೆ ಹೋದರೆ ಅಲ್ಲಿನ ವಿಜ್ಞಾನಿಗಳಿಗೆ ಇಲ್ಲಿನ ಸಂಶೋಧನೆಯ ಫಲವೆಲ್ಲಾ ದೊರಕುವಂತಾದೀತು. ಹಾಗಾಗಿ ಭಾಷೆ ಬಲ್ಲ, ಸಂಸ್ಕೃತಿ ತಿಳಿದ ಯಾರಾದರೂ ಪತ್ತೇದಾರರನ್ನು ಹುಡುಕುವಂತೆ ನಮ್ಮ ನಿರ್ದೇಶಕರು ಹೇಳಿದರು. ನಾನು ಭಾರತದಲ್ಲಿ ನಮ್ಮ ಹೈಕಮಿಷನ್‌ಗೆ ಮೊರೆಹೋದೆ. ಅವರು ಸ್ವಲ್ಪ ವಿಚಾರಿಸಿ ನಿಮ್ಮನ್ನು ಕೇಳುವಂತೆ ಸೂಚಿಸಿದರು. ಇಗೋ ಇಲ್ಲಿ ನೋಡಿ ಈ ಫೋಲ್ಡರಿನಲ್ಲಿ ಈ ಕೇಸಿನ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಹೆಚ್ಚಿನ ಮಾಹಿತಿ ಬೇಕಾದರೆ ನನ್ನನ್ನು ಮೊಬೈಲ್‌ನಲ್ಲಿ ಸಂಪರ್ಕಿಸಿ. ಫೋಲ್ಡರಿನಲ್ಲೇ ಒಂದು ತಿಂಗಳ ಟ್ರಾವಲ್ ಪಾಸ್ ಹಾಗೂ ಕ್ರೆಡಿಟ್ ಕಾರ್ಡ್ ಇರಿಸಿರುವೆ. ಪಿನ್ ನಂಬರ್ ಜೋಪಾನ. ನೆನಪಿನಲ್ಲಿಟ್ಟು ಚೀಟಿ ಹರಿದುಹಾಕಿಬಿಡಿ. ಇನ್ನೇನಾದರೂ ಬೇಕಾಗಿತ್ತೇ?'' ಜಿಮ್ಮಿಯ ಅಚ್ಚುಕಟ್ಟು ಕೆಲಸ ನನಗೆ ಬಹಳ ಹಿಡಿಸಿತು. ಶರಲೇಖ, ''ಔಷಧಿ?'' ಅಂತ ಒಂದೇ ಪದದಲ್ಲಿ ತನ್ನ ಪ್ರಶ್ನೆಯನ್ನು ರೂಪಿಸಿದ. ಜಿಮ್ಮಿ ಅದನ್ನೂ ಯೋಚಿಸಿದ್ದು ತಕ್ಷಣ ವಿದಿತವಾಯಿತು. ''ಫೋಲ್ಡರಿನ ಕೊನೆಯ ಹಾಳೆಯಲ್ಲಿ ಹತ್ತಿರದ ಜಿ.ಪಿ. ಕ್ಲಿನಿಕ್ಕಿನ ವಿಳಾಸ ಇದೆ. ನಿಮ್ಮಿಬ್ಬರಿಗೂ ಅಲ್ಲಿ ತಾತ್ಕಾಲಿಕ ರಿಜಿಸ್ಟ್ರೇಷನ್ ಇದೆ. ನೆಗಡಿ ಕೆಮ್ಮು ಅಲ್ಲಿಗೆ ಹೋಗಿ ಕ್ಯೂನಲ್ಲಿ ನಿಂತು ಡಾಕ್ಟರಿಂದ ಪ್ರಿಸ್ಕ್ರಿಪ್ಷನ್ ಪಡೆದು ಹತ್ತಿರದ ಫಾರ್ಮಸಿಗೆ ಹೋಗಿ ಔಷಧಿ ಪಡೆಯಬಹುದು. ಮತ್ತಿನ್ನೇನಾದರೂ?''

''ತುಂಬಾ ಧನ್ಯವಾದಗಳು. ನಾನು ಈಗಲೇ ಕೆಲಸ ಶುರು ಹಚ್ಚುತ್ತೇನೆ. ನಿಮಗೂ ಅನೇಕ ತುರ್ತಿನ ಕೆಲಸಗಳಿರಬಹುದು. ಹೋಗಿಬನ್ನಿ, ಹ್ಯಾವ್ ಎ ಗುಡ್ ಡೇ.''

ಜಿಮ್ಮಿ ಹೊರಟ ತಕ್ಷಣ ಶರಲೇಖ ''ವತ್ಸನ ಬೇಗ ಸಿದ್ಧವಾಗು. ಈಗಲೇ ಆಕ್ಸ್‌ಫರ್ಡ್ ಸರ್ಕಸ್ಸಿಗೆ ಹೋಗಬೇಕು...''

''ಡಾ|| ಲು ಇರೋದು ಕೇಂಬ್ರಿಡ್ಜಿನಲ್ಲಲ್ಲವೇ?''

''ಹೌದು, ಆದರೆ ನಾವು ಹೋಗಬೇಕಾಗಿರೋದು ಲಂಡನ್ನಿನ ಸಿಟಿ ಸೆಂಟರಿಗೆ. ಅಲ್ಲೇ ನಾಟಕದ ಥಿಯೇಟರುಗಳಿರೋದು. ಇಂದು ಸಂಜೆ ಮಾಮಮಿಯಾ ಅಂತ ಒಂದು ಒಳ್ಳೇ ನಾಟಕ ಇದೆ. ಬೇಗ ಹೋದರೆ ಟಿಕೆಟ್‌ನ ಮುಂಗಡವಾಗಿ ಬುಕ್ ಮಾಡಬಹುದು.''

ನಾವಿದ್ದ ಜಾಗದಿಂದ ಎರಡು ಬಾರಿ ಟ್ಯೂಬ್ ಟ್ರೇನ್ ಬದಲಾಯಿಸಿ ಆಕ್ಸ್‌ಫರ್ಡ್ ಸರ್ಕಸ್ ಸೇರಿದೆವು. ನಾಟಕ ಪ್ರಿನ್ಸ್ ಆಫ್ ವೇಲ್ಸ್ ಥಿಯೇಟರಿನಲ್ಲಿತ್ತು. ಸಂಜೆ ಏಳೂವರೆ ಷೋಗೆ ಟಿಕೆಟ್‌ಗಳನ್ನು ಕೊಂಡು, ಶರಲೇಖ ನನ್ನನ್ನ ಬ್ರಿಟಿಷ್ ಮ್ಯೂಸಿಯಂಗೆ ಕರೆದೊಯ್ದ. ಅಂತೂ ದಿನವನ್ನೆಲ್ಲಾ ಮಜವಾಗಿ ಕಳೆದು ಸಂಜೆ ನಾಟಕ ಮುಗಿಸಿಕೊಂಡು ನಮ್ಮ ಕೊಠಡಿಗೆ ಹಿಂತಿರುಗಿದೆವು. ಮಾರನೆಯ ಬೆಳಗ್ಗೆ ನಾನು ಏಳುವ ಹೊತ್ತಿಗಾಗಲೇ ಶರಲೇಖ ಕೆಲಸದ ಮೇಲೆ ಹೊರಟು ಹೋಗಿದ್ದ. ನಾನು ನಿಧಾನವಾಗಿ ನಾಷ್ಟಾ ಮುಗಿಸಿ ಕವೆಂಟರ್ ಗಾರ್ಡನ್ನಿಗೆ ಹೋಗಿ ಅಲ್ಲಿನ ಪೆಟ್ಟಿಗೆ ಅಂಗಡಿಗಳನ್ನು ನೋಡುತ್ತಾ ಸ್ವಲ್ಪ ಕಾಲ ಕಳೆದೆ. ಆಮೇಲೆ ನದೀತೀರದಲ್ಲಿ ಪಾರಿವಾಳಗಳನ್ನು ನೋಡುತ್ತಾ ಕಲ್ಲುಬೆಂಚಿನ ಮೇಲೆ ಕುಳಿತಿದ್ದಾಗ ಮೊಬೈಲ್ ರಿಂಗಾಯಿತು.

ಜಿಮ್ ಲೈನಿನಲ್ಲಿದ್ದ ''ಶರಲೇಖ ಮೊಬೈಲ್ ತೆಗೀತಾ ಇಲ್ಲ, ನಿಮಗೇನಾದರೂ ಗೊತ್ತೆ ಅವರೆಲ್ಲಿದ್ದಾರೆ ಅಂತ'' ಅಂತ ಅವ ನನ್ನನ್ನ ಕೇಳಿದ. ನಾನೇನು ಹೇಳಲಿ. ''ಕೆಲಸದ ಮೇಲೆ ಹೋಗ್ತೀನಿ ಅಂತ ಹೇಳಿದ್ದರು. ಎಲ್ಲಿದ್ದಾರೋ ಗೊತ್ತಿಲ್ಲವಲ್ಲಾ'' ಅಂತ ಉತ್ತರಿಸಿದೆ. ನಿನ್ನೆ ನಾಟಕ ಚೆನ್ನಾಗಿತ್ತು ಅಂತೇನೂ ಹೇಳಲಿಲ್ಲ. ಅನಗತ್ಯ ಮಾಹಿತೀನ ಪೋಲೀಸಿನೋರಿಗೆ ಕೊಡಬೇಡ ಅಂತ ಲಾಯರ್ ಲಕ್ಷ್ಮೀಪತಿ ಹಿಂದೊಮ್ಮೆ ಹೇಳಿದ್ದು ನೆನಪಿನಲ್ಲಿತ್ತು.

ಟ್ರಫಾಲ್ಗರ್ ಚೌಕವನ್ನೆಲ್ಲಾ ಸುತ್ತಾಡಿ, ಜಾಕೆಟ್ ಪೊಟಾಟೋ ಮೆದ್ದು ಮನೆ ಸೇರಿದಾಗ ರಾತ್ರಿ ಹತ್ತೂವರೆ. ಶರಲೇಖ ಟಿವಿ ನೋಡುತ್ತಾ ಕೂತಿದ್ದ.

''ಏನಾದರೂ ಪ್ರಗತಿ ಆಗಿದೆಯೇ ಕೇಸಿನಲ್ಲಿ?'' ಅಂತ ಕೇಳಿದೆ.

''ಪ್ರಗತಿ ನಿರಾಶಾದಾಯಕವಾಗೇನಿಲ್ಲ. ಈಸ್ಟ್‌ಹ್ಯಾಮಿಗೆ ಹೋಗಿ ವಿಶ್ವನಾಥನ್ ಬಗ್ಗೆ ಹಲವು ಮಾಹಿತಿ ಸಂಗ್ರಹಿಸಿದೆ. ನಾನು ಅವನ ಮನೆಗೆ ಹೋದಾಗ ಆತ ಮನೆಯಲ್ಲಿರಲಿಲ್ಲ. ಅವನ ಮೇಲ್ ಬಾಕ್ಸ್‌ನಲ್ಲಿ ಒಂದು ಪತ್ರ ಹಾಕಿ ಬಂದಿದ್ದೇನೆ ಮೀನು ಗಾಳ ಕಚ್ಚಿದರೆ ನಮ್ಮ ಕೇಸು ಮುಗಿದಂತೆಯೇ ಲೆಕ್ಕ. ಈಗಿನ ಹಂತದಲ್ಲಿ ಇದಕ್ಕಿಂತ ಹೆಚ್ಚಿಗೆ ವಿವರಗಳನ್ನ ನನ್ನಿಂದ ಕೇಳಬೇಡ'' ಎಂದ ಶರಲೇಖ. ಟೆಲ್ಲಿಯಲ್ಲಿ (ಇಲ್ಲಿನ ಸ್ಥಳೀಕರು ಟಿ.ವಿ.ಗೆ ಟೆಲ್ಲಿ ಅಂತಾರೆ) ಒಂದು ನರ್ತನದ ಕಾರ್ಯಕ್ರಮ ಬಿತ್ತರವಾಗುತ್ತಿತ್ತು. ಸ್ಟ್ರಿಕ್ಟ್‌ಲಿ ಕಮ್ ಡಾನ್ಸಿಂಗ್ ಎಂಬ ಈ

ಷೋನಲ್ಲಿ ಒಬ್ಬ ಕ್ರೀಡಾ ಖ್ಯಾತಪಟು, ಒಬ್ಬ ಪ್ರೊಫೆಷನಲ್ ನರ್ತಕಿಯೊಂದಿಗೆ ಜೋಡಿ ನರ್ತನ ಮಾಡುವ ಕಾಂಪಿಟಿಷನ್. ಬಹು ಚೆನ್ನಾಗಿ ನರ್ತಿಸಿದ ಜೋಡಿಗೆ ಬಹುಮಾನ ಬೇರೆ.

"ನಿನ್ನೆ ಸಂಜೆ ಸಹಾ ಇದೇ ಕಾರ್ಯಕ್ರಮ ನೋಡಿದೆ. ಗಮನವಿಟ್ಟು ನೋಡು ವತ್ಸನ" ಎಂದ ಶರಲೇಖ. ಸುಂದರ ಮೈಮಾಟದ ತರುಣಿಯರೊಂದಿಗೆ ನೀಳದೇಹದ ಕ್ರೀಡಾಪಟುಗಳ ಶರವೇಗದ ಜೋಡಿ ನರ್ತನವನ್ನು ಗಮನವಿಟ್ಟು ನೋಡುವುದು ನನಗೆ ಏನೇನೂ ಕಷ್ಟವಾಗಲಿಲ್ಲ. ಶರಲೇಖ ಏಕೆ ಹಾಗೆಂದನೋ ನನಗಂತೂ ತಿಳಿಯಲಿಲ್ಲ.

ಮಾರನೆಯ ದಿನ ಬೆಳಗ್ಗೆ ಜಿಮ್ ಬಂದು ಶರಲೇಖನನ್ನು ಎಲ್ಲಿಗೋ ಕರೆದುಕೊಂಡುಹೋದ. ನಾನು ವಿಂಪೋಲ್ ಸ್ಟ್ರೀಟಿನಲ್ಲಿನ ರಾಯಲ್ ಸೊಸೈಟಿ ಆಫ್ ಮೆಡಿಸನ್‌ಗೆ ಹೋಗಿ ನನ್ನ ಪರಿಣತಿಯ ಕ್ಷೇತ್ರದಲ್ಲಿ ಇತ್ತೀಚಿನ ಪ್ರಗತಿಯ ಬಗ್ಗೆ ಮಾಹಿತಿ ಪಡೆಯಲೆತ್ನಿಸಿದೆ. ಸಂಜೆ ನಾನು ಮನೆಗೆ ಬಂದು ಮಲಗುವ ವೇಳೆಯಾದರೂ ಶರಲೇಖ ಮನೆಗೆ ಬಂದಿರಲಿಲ್ಲ.

ಮಾರನೆಯ ದಿನ ಶನಿವಾರ, ಶರಲೇಖ ಬಹಳ ಉತ್ಸಾಹದಿಂದಿದ್ದ. ಬೆಳಗ್ಗೆ ಹತ್ತು ಘಂಟೆಗೆ ಜಿಮ್ ಕೂಡ ಮನೆಗೆ ಬಂದು ನಮ್ಮೊಡನೆ ಟೀ ಕುಡಿದ. ಅನಂತರ ಶರಲೇಖ ಜಿಮ್‌ನನ್ನು ಕುರಿತು "ಈಗ ಒಬ್ಬ ಮುಖ್ಯ ಅತಿಥಿಯೊಬ್ಬರು ಮನೆಗೆ ಬರುತ್ತಾರೆ. ಅವರು ಬಂದಾಗ ನೀನು ಮರೆಯಲ್ಲಿರೋದು ವಾಸಿ. ಇಲ್ಲೇ ಒಳಗಿನ ಕೊಠಡಿಯಲ್ಲಿ ಕೂತಿರು. ನಾನು ಕರೆದಾಗ ಹೊರಗೆ ಬಂದರಾಯಿತು." ಎಂದು ಹೇಳಿ ಜಿಮ್‌ನ ಒಳಕ್ಕೆ ಕಳಿಸಿದ. ಕೇವಲ ಕೆಲವೇ ನಿಮಿಷಗಳಲ್ಲಿ ಬಾಗಿಲ ಹೊರಗಣ ಕರೆಘಂಟೆ ಬಾರಿಸಿತು. ಮನೆಯೊಡತಿ ಕ್ಲಾರಾ ಬಾಗಿಲು ತೆರೆದು ಬಂದ ಆಗಂತುಕರನ್ನು ವೆರಾಂಡದಲ್ಲಿ ಕುಳ್ಳಿರಿಸಿ ಒಳಕ್ಕೆ ಬಂದು ಶರಲೇಖನಿಗೆ ಆತ ನೀಡಿದ್ದ ಭೇಟಿ ಚೀಟಿಯನ್ನು ಕೊಟ್ಟಳು. ಶರಲೇಖ "ಒಳಕ್ಕೆ ಕಳಿಸಿ" ಎಂದ ನಂತರ ಕ್ಲಾರಾ ಆತನನ್ನು ಕರೆತರಲು ಕೊಠಡಿಯಿಂದ ಹೊರಕ್ಕೆ ಹೋದಳು.

ನಮ್ಮ ಕೊಠಡಿಯನ್ನು ಪ್ರವೇಶಿಸಿದ ವ್ಯಕ್ತಿವಿಶೇಷದ ಚಹರೆಗಳನ್ನು ನಿಮಗೆ ಪರಿಚಯಿಸುವ ಕೆಲಸ ಬಹು ಸುಲಭ. ಜಯಚಾಮರಾಜ ಒಡೆಯರ್ ನಿಮಗೆ ತಿಳಿದಿರಬಹುದಲ್ಲವೇ. ವ್ಯಕ್ತಿಗತವಾಗಲ್ಲದಿದ್ದರೂ ಅವರ ಫೋಟೋಗಳನ್ನು ಖಂಡಿತ ನೀವು ನೋಡೇ ಇರುತ್ತೀರ. ಅವರ ಅಂತಹ ಒಂದು ಫೋಟೋವನ್ನು ಚಿತ್ರಗ್ರಾಹಕ ಡೆವೆಲಪ್ ಮಾಡೋದು ಮರೆತು ನಿಮಗೆ ನೆಗೆಟಿವ್ ಕೊಟ್ಟುಬಿಟ್ಟಿದ್ದ ಅಂತ ಊಹಿಸಿ. ಒಳಕ್ಕೆ ಬಂದ ವ್ಯಕ್ತಿ ಆ ನೆಗೆಟಿವ್‌ನ ತದ್ರೂಪು. ಕಪ್ಪಗೆ ತೀರಾ ದಪ್ಪಗಿದ್ದ. ಅಲ್ಲ ಅಲ್ಲ ತೀರಾ ಕಪ್ಪಗೆ ತೀರಾ ದಪ್ಪಗಿದ್ದ. ಆ ವ್ಯಕ್ತಿ ಪ್ರವೇಶಿಸಿದೊಡನೆಯೇ ಶರಲೇಖ ಲಗುಬಗೆಯಿಂದ ಸೋಫಾದಿಂದ ಎದ್ದು ನಿಂತು, "ರಾಂಡಿ, ರಾಂಡಿ ವೇಂಕಟೇಶ್ವರಲುಗಾರು. ಕೂರ್ಚ್ಚೋಂಡಿ" ಎಂದು ಬಹು ಆತ್ಮೀಯತೆಯಿಂದ ಅವರನ್ನ ಬರಮಾಡಿಕೊಂಡ. ಸ್ವಲ್ಪಕಾಲ ಲೋಕಾಭಿರಾಮವಾಗಿ ಮಾತುಕತೆಗಳಾದ ಮೇಲೆ ನಮ್ಮ ಅಣು ವಿಜ್ಞಾನಿ ಮುಖ್ಯ ವಿಷಯಕ್ಕೆ ಬಂದರು.

"ಗೆಳೆಯ ವಿಶ್ವನಾಥನ್ ನಿಮ್ಮ ಪರಿಚಯ ಕೊಟ್ಟರು. ನಿಮ್ಮ ಮಗ ಆಕ್ಸ್‌ಫರ್ಡಿನಲ್ಲಿ

ಡಾಕ್ಟರೇಟ್ ಮಾಡುತ್ತಿದ್ದಾನೆ ಅಂತ ತಿಳಿಯಿತು. ನನ್ನ ಮಗಳು ನೇಹಾ ಕೇಂಬ್ರಿಡ್ಜಿನಲ್ಲಿ ಬಿ.ಎ. ಮಾಡುತ್ತಿದ್ದಾಳೆ. ಇಗೋ ಇಲ್ಲಿ ಅವಳ ಜಾತಕ ಮತ್ತು ಫೋಟೋ ಇದೆ. ವಿಶ್ವನಾಥನ್ ಅವರ ಕೈಲೇ ಈ ಜಾತಕ ಬರೆಸಿದ್ದೇನೆ. ನಿಮ್ಮ ಮಗನ ಜಾತಕವನ್ನೂ ಸಹಾ ಅವರಿಗೇ ಕೊಟ್ಟು ತಾಳೆ ಹಾಕಿಸಬಹುದು'' ಎನ್ನುತ್ತಾ ಆತ ಶರಲೇಖನ ಕೈಗೆ ಒಂದು ಲಕ್ಕೋಟೆ ನೀಡಿದರು. ಶರಲೇಖ ಈ ಸಂದಿಗ್ಧ ಪರಿಸ್ಥಿತಿಯಿಂದ ಹೇಗೆ ಹೊರಬರುತ್ತಾನೆ ಎಂದು ನಾನು ಆತಂಕ ಮಿಶ್ರಿತ ಕುತೂಹಲದಿಂದ ನೋಡುತ್ತಿದ್ದೆ. ಶರಲೇಖ ಪ್ರಾಮಾಣಿಕ ನಮ್ರತೆಯಿಂದ,

''ವೆಂಕಟೇಶ್ವರಲು ಅವರೇ, ನಿಮ್ಮಂತಹ ಮಹಾನುಭಾವರನ್ನ ಮಾವರನ್ನಾಗಿ ಪಡೆಯುವ ಅದೃಷ್ಟವುಳ್ಳ ಮಗ ನನಗಿರುವಷ್ಟು ನಾನು ಭಾಗ್ಯವಂತನಲ್ಲ. ಮದುವೆಯೂ ಆಗಿಲ್ಲದ ಭಾಗ್ಯಹೀನ ಬ್ರಹ್ಮಚಾರಿ ನಾನು. ಜೀವನೋಪಾಯಕ್ಕಾಗಿ ಪತ್ತೇದಾರಿ ಕೆಲಸ ಮಾಡಿಕೊಂಡಿದ್ದೇನೆ. ಅಣು ವಿಜ್ಞಾನದಲ್ಲಿ ತಮಗಿರುವ ಪರಿಣತಿಯ ಬಗ್ಗೆ ಈ ದೇಶದಲ್ಲಿ ತಮ್ಮ ಬಗ್ಗೆ ಅತೀವ ಗೌರವ ಇದೆ. ವರಾನ್ವೇಷಣೆಯ ತರಾತುರಿಯಲ್ಲಿ ತಾವು ಅಲ್ಲಿ ಇಲ್ಲಿ ಓಡಾಡುತ್ತಿರುವುದರಿಂದ ತಮ್ಮ ಸುರಕ್ಷತೆಯ ಬಗ್ಗೆ ಇಲ್ಲಿನ ಪೋಲೀಸರು ಬಹು ಆತಂಕ ಪಟ್ಟುಕೊಂಡಿದ್ದಾರೆ. ನಿಮಗೇ ತಿಳಿದಿರುವ ಹಾಗೆ ಲಂಡನ್ನಿನಲ್ಲಿ ಆತಂಕವಾದಿಗಳು ತಮ್ಮ ಹಾವಳಿಯನ್ನು ಈಗಾಗಲೇ ಶುರು ಮಾಡಿದ್ದಾರೆ. ತಮಗೇನಾದರೂ ಹಾನಿಯಾದರೆ ವಿಜ್ಞಾನ ಕ್ಷೇತ್ರಕ್ಕೆ ಆಗುವ ನಷ್ಟ ಅಪಾರ. ಈ ವಿಷಯವನ್ನ ತಮ್ಮ ಮನನೋಯಿಸದ ಹಾಗೆ ತಮಗೆ ತಿಳಿಸಲು ಇಲ್ಲಿನ ಪೋಲೀಸರು ನನ್ನ ಸಹಾಯ ಕೋರಿದ್ದಾರೆ. ಒಂದು ಸುಳ್ಳುಹೇಳಿ ತಮ್ಮನ್ನ ಇಲ್ಲಿಗೆ ಬರುವಂತೆ ಮಾಡಿದ್ದಕ್ಕೆ ನನ್ನ ಅನಾಂತನಂತ ಕ್ಷಮಾಪಣೆಗಳು. ಇಗೋ ನಿಮ್ಮ ಲಕ್ಕೋಟೆ'' ಎನ್ನುತ್ತಾ ಶರಲೇಖ ತನ್ನ ಕೈಲಿದ್ದ ಲಕ್ಕೋಟೆಯನ್ನ ಹಿಂತಿರುಗಿಸಲು ನೋಡಿದ.

ಆಹಾ, ವಾಟ್ ಎ ಮಾಸ್ಟರ್‌ಫುಲ್ ಪರ್ಫಾರ್ಮೆನ್ಸ್ ಅಂದುಕೊಂಡೆ.

ವೆಂಕಟೇಶ್ವರಲು ಬಹು ಬೇಗ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡರು. ''ಬೇಡ, ಬೇಡ, ಲಕ್ಕೋಟೆ ನಿಮ್ಮ ಬಳಿಯೇ ಇರಲಿ. ಬೆಂಗಳೂರಿನಲ್ಲಿ ನಿಮ್ಮ ಪರಿಚಿತರು ಯಾರಾದರೂ ಇದ್ದರೆ ತಿಳಿಸಿ. ಈಗ ಇಲ್ಲಿನ ಪೋಲೀಸಿನೋರಿಗೆ ನಿಜವಾದ ವಿಷಯ ತಿಳಿಸುವ ಬಗೆ?''

''ಅದರದ್ದೇನೂ ಕಾಳಜಿ ಬೇಡ ನಿಮಗೆ. ಜಿಮ್, ಸ್ವಲ್ಪ ಹೊರಕ್ಕೆ ಬರಲಾದೀತೆ?''

ಹೊರಕ್ಕೆ ಬಂದ ಜಿಮ್ ಆಶ್ಚರ್ಯದಿಂದ ಮೂಕನಾಗಿದ್ದ. ಹದಿನೆಂಟು ತುಂಬಿದ ತಕ್ಷಣ ಮನೆಯಿಂದ ಮಕ್ಕಳನ್ನು ಹೊರಗಟ್ಟುವ ಸಂಸ್ಕೃತಿಯೆಲ್ಲಿ, ಮಕ್ಕಳಿಗೆ ಎಷ್ಟು ವಯಸ್ಸಾದರೂ ಹೊಕ್ಕಳುಬಳ್ಳಿಯನ್ನು ಕತ್ತರಿಸಿದೇ ಉಳಿಸಿಕೊಳ್ಳುವ ಸಂಸ್ಕೃತಿಯೆಲ್ಲಿ, ಮಗಳ ಮದುವೆಗೆ ತಂದೆಯರು ಇಷ್ಟು ಕಷ್ಟಪಡುವುದು ಜಿಮ್‌ಗೆ ಒಂದು ನವನೂತನ ಅನುಭವ.

''ನೀವೇನೂ ಯೋಚನೆ ಮಾಡಬೇಡಿ ಡಾಕ್ಟರ್. ಎಲ್ಲವೂ ಸರಿಯಾಗಿದೆ ಅಂತ ನನ್ನ ರಿಪೋರ್ಟ್ ತಿಳಿಸುತ್ತೆ. ಇಲ್ಲಿಗೆ ಹೇಗೆ ಬಂದಿದ್ದೀರಾ? ಸ್ಟೇಷನ್ನಿಗೆ ಬಿಡಲೇ'' ಎಂದು ಸೌಜನ್ಯದಿಂದ ಕೇಳಿ ಜಿಮ್ ಡಾ|| ಲು ಅವರನ್ನು ಕರೆದುಕೊಂಡು ಹೊರಟ. ನಾನು ಯಥಾಪ್ರಕಾರ ಶರಲೇಖನ ವಿವರಣೆಗೆ ಕಾದೆ. ಅದು ಬರುವುದು ಅಷ್ಟೇನೂ ತಡವಾಗಲಿಲ್ಲ.

''ವತ್ಸನ, ನಾವು ಇಲ್ಲಿಗೆ ತಲುಪಿದ ರಾತ್ರಿಯೇ ನಾನು ಒಂದು ಟಿವಿ ಕಾರ್ಯಕ್ರಮ ನೋಡುವ ಅವಕಾಶ ಲಭಿಸಿತು. ಮಾರನೆಯ ರಾತ್ರಿ ಅದನ್ನ ನಿನಗೂ ನೋಡಲು ಹೇಳಿದೆ. ಆ ನರ್ತನ ಕಾರ್ಯಕ್ರಮದಲ್ಲಿ ಭಾಗವಹಿಸಿದವರಲ್ಲಿ ಕೇವಲ ಬಿಳಿಯರು, ಆಫ್ರಿಕನ್ನರು ಇದ್ದರೇ ಹೊರತಾಗಿ ಒಂದು ಏಷ್ಯನ್ ಪುರುಷ ಅಥವಾ ಮಹಿಳೆ ಇರಲಿಲ್ಲ. ಆರು ದಶಕಗಳಷ್ಟು ಕಾಲ ಈ ನೆಲದಲ್ಲಿ ನೆಲಸಿದರೂ ಸ್ವಲ್ಪ ಮಟ್ಟಿಗೂ ಇಲ್ಲಿನ ಸಂಸ್ಕೃತಿಯನ್ನು ಮೈಗೂಡಿಕೊಳ್ಳದೇ ತಮ್ಮ ಹುಟ್ಟು ಸಂಸ್ಕೃತಿಯನ್ನೇ ಕಾಪಾಡಿಕೊಂಡು ಬಂದಿದ್ದಾರಲ್ಲಾ ಇಲ್ಲಿನ ಏಷ್ಯನ್ ಜನ ಅಂದುಕೊಂಡೆ. ಮಾರನೆಯ ದಿನ ಡಾ|| ಲು ಪ್ರಸ್ತಾಪ ಬಂದಾಗ ಅವರಿಗೆ ಮದುವೆಗೆ ಬಂದ ಮಗಳಿದ್ದಾಳೆಂದೂ ತಿಳಿಯಿತು. ಅವರ ಈಸ್ಟ್‌ಹ್ಯಾಮ್ ಓಡಾಟಕ್ಕೆ ಒಂದು ಅರ್ಥ ಕಲ್ಪಿಸಿಕೊಂಡೆ. ಮಾರನೆಯ ದಿನ ಅಲ್ಲಿಗೆ ಹೋಗಿ ಅಲ್ಲಿನ ಮುರುಗನ್ ಟೆಂಪಲಿನಲ್ಲಿ ವಿಚಾರಿಸಿದಾಗ ವಿಶ್ವನಾಥನ್ ಒಬ್ಬ ಜ್ಯೋತಿಷಿಯಾಗಿಯೂ ಕೆಲಸ ನಿರ್ವಹಿಸುತ್ತಿರುವುದು ತಿಳಿಯಿತು. ಮಗ, ತೆಲುಗು, ಡಾಕ್ಟರೇಟ್, ಆಕ್ಸ್‌ಫರ್ಡ್ ಎಂದು ಬರೆದು ನನ್ನ ವಿಳಾಸ ಬರೆದು ಅವನ ಅಂಚೆ ಪೆಟ್ಟಿಗೆಯಲ್ಲಿ ಹಾಕಿದೆ. ಮಿಕ್ಕದ್ದೆಲ್ಲಾ ನೀನೇ ನೋಡಿದೆಯಲ್ಲಾ''

''ಮುಂದೇನು?'' ಅಂದ ಕೇಳಿದೆ.

''ವಿಕ್ಟೋರಿಯಾ ಆಲ್ಬರ್ಟ್ ಮ್ಯೂಸಿಯಂನಲ್ಲಿ ಡ ವಿಂಚಿಯ ಕಲಾ ಪ್ರದರ್ಶನ ಇದೆಯಂತೆ. ಡ ವಿಂಚಿ, ಕೇವಲ ಕಲೆಗಾರ ಮಾತ್ರ ಅಲ್ಲ, ಖ್ಯಾತ ಇಂಜಿನಿಯರ್ ಸಹಾ. ಅಲ್ಲಿಗೆ ಹೋಗೋಣ'' ಅಂದ.

ನಾನು ''ಸರಿ'' ಎಂದು ಹೊರಡಲು ಅನುವಾದೆ.

❖❖❖

ಮಾಡಲೇಬೇಕೆಂದಿಲ್ಲ!

ಅದೊಂದು ಐಷಾರಾಮ ಹೋಟೆಲ್. ಎಲ್ಲ ಭಾರಿ ಭಾರಿ ರೂಮ್‌ಗಳು. ಜನಪ್ರಿಯವಾದ್ದರಿಂದ ಗಿರಾಕಿಗಳಿಂದ ಅಪಾರ ಬೇಡಿಕೆ. 'ಜಾಗ ಇಲ್ಲ' ಎನ್ನುವ ಜಾಯಮಾನ ಆಡಳಿತ ವರ್ಗದ್ದಲ್ಲ. ಒಮ್ಮೆ ವೃದ್ಧ ದಂಪತಿಗಳು ಆ ಹೋಟೆಲ್‌ನಲ್ಲಿ ಇಳಿದುಕೊಳ್ಳಲು ಬಂದರು. ರೂಮ್‌ಗಳೆಲ್ಲ ಭರ್ತಿ ಆಗಿದ್ದು ಹನಿಮೂನ್ ದಂಪತಿಗಳಿಗಾಗಿ ನಿರ್ಮಿಸಿದ್ದ ಕೋಣೆ ಖಾಲಿ ಇದ್ದು ಅದನ್ನೇ ಅವರಿಗೆ ತೋರಿಸಲಾಯಿತು. ಆ ಭವ್ಯ ರೂಮ್ ನೋಡಿದ ಆ ವೃದ್ಧ ಗಂಡ 'ಬಾಪ್‌ರೆ, ಈ ರೂಮ್‌ನಲ್ಲಿ ನಾನೇನು ಮಾಡಲಿ?' ಎಂದು ಉದ್ಗರಿಸಿದರು.

ಆಗ ಚಾಣಾಕ್ಯ ಸೇಲ್ಸ್‌ಮನ್ ಎಂದೇ ಹೆಸರು ಪಡೆದಿದ್ದ ಮೇನೇಜರ್ ಹೇಳಿದರು: ಸಾರ್, ನಿಮಗೆ ball room ತೋರಿಸಿದರೆ ಅಲ್ಲಿ ಡಾನ್ಸ್ ಮಾಡಲೇಬೇಕೆಂದಿಲ್ಲವಲ್ಲ!''

- ಗಣೇಶ್ ಶೈಲಿ (ಸಂಡೆ ಹೆರಾಲ್ಡ್)

ಅಪರಂಜಿ ಬೆಳ್ಳಿ ಹಬ್ಬ

- ಎಚ್. ಗೋಪಾಲಕೃಷ್ಣ

ಅಕ್ಟೋಬರ್ 2ರ ಬೆಳಿಗ್ಗೆ ಇಡೀ ರಾಜಧಾನಿ ಗಾಂಧಿ ಜಯಂತಿಯ ಸಂಭ್ರಮದಲ್ಲಿ ಮುಳುಗಿತ್ತು. ಬೆಳಗಿನ ನಸು ನಸು ಛಳಿಯಲ್ಲಿ ಬೆಂಗಳೂರಿನ ಹಿರಿಯ ಪ್ರಜೆಗಳು ಗಾಂಧಿ ತಾತನನ್ನು ನೆನೆಸಿಕೊಳ್ಳುತ್ತ ವೈಷ್ಣವ ಜನತೋ ತೇನೇ ಕಹೀಯೇ ಯೇ ಪೀರ ಪರಾಯೀ ಜಾನೇರೇ ಅಂತ ಹಾಡುತ್ತಿದ್ದರು. ಇತ್ತ ಭಾರತೀಯ ವಿದ್ಯಾಭವನದಲ್ಲಿ ಮತ್ತೊಂದು ರೀತಿಯ ಸಂಭ್ರಮ ಎದ್ದು ತೋರುತ್ತಿತ್ತು. ಅಂದು ಅಪರಂಜಿಯ ಬೆಳ್ಳಿ ಹಬ್ಬಕ್ಕೆ ಚಾಲನೆ ನೀಡಲು ನಾಡಿನ ಹಿರಿಯ ಕಿರಿಯ ಹಾಸ್ಯಸಾಹಿತಿಗಳು, ಹಾಸ್ಯಾಸಕ್ತರು ಬೈಗಿನಿಂದಲೇ ಸೇರಲು ಆರಂಭಿಸಿದ್ದರು. ಸುಮಾರು ಜನ ಮನೆ ಹತ್ತಿರದಲ್ಲಿ ಗಾಂಧಿಯನ್ನು ನೆನೆದು ಇತ್ತ ಓಡಿ ಬಂದಿದ್ದರು. ಕೊರವಂಜಿ ಅಪರಂಜಿ ಟ್ರಸ್ಟ್ ಹಾಗೂ ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಅಪರಂಜಿ ಪತ್ರಿಕೆಯ 25ನೇ ಬೆಳ್ಳಿ ಹಬ್ಬವನ್ನು ಅಂದು ಆಚರಿಸಲು ಮತ್ತು ಇಡೀ ವರ್ಷ ಈ ಹಬ್ಬಕ್ಕೆ ಚಾಲನೆ ನೀಡಲು ಅಪರಂಜಿಯ ಅಭಿಮಾನಿಗಳು ನೆರೆದಿದ್ದರು.

ಹಾಸ್ಯಬ್ರಹ್ಮ ಮತ್ತು ಕೈಗಾರಿಕಾ ರಂಗದ ಸಾಹಿತ್ಯ ವೇದಿಕೆಯ ಬೆಂಬಲದೊಂದಿಗೆ ಹದಿನೈದು ವರ್ಷಗಳ ಹಿಂದೆ ಇದೇ ಭವನದಲ್ಲಿ ಅಪರಂಜಿಯ ಹತ್ತನೇ ವರ್ಷದ ಹುಟ್ಟುಹಬ್ಬ ಹಾಗೂ ನಂತರ ಮೊದಲನೇ ಹಾಸ್ಯೋತ್ಸವ ಆಚರಿಸಿದ ಸವಿನೆನಪನ್ನು ಮೆಲುಕು ಹಾಕುತ್ತಿದ್ದವರು ಹಲವರು ಹೀಗೆ ಮೆಲುಕು ಹಾಕುತ್ತಿರುವಾಗಲೇ ಗಡಿಯಾರದ ಮುಳ್ಳು ಹತ್ತು ಗಂಟೆ ತೋರಿಸುತ್ತಿರುವಂತೆ ಗಣ್ಯರನ್ನು ವೇದಿಕೆಗೆ ಆಹ್ವಾನಿಸಿದರು ಬೇಲೂರು ರಾಮಮೂರ್ತಿ. ಅಪರಂಜಿಯ ಯಾವುದೇ ಸಮಾರಂಭವಾದರೂ ಸಮಯಕ್ಕೆ ಸರಿಯಾಗಿ ಆರಂಭಿಸುವುದು ನಾವು ಬೆಳೆಸಿಕೊಂಡು ಬಂದಿರುವ ಒಂದು ಪರಿಪಾಠ. ಇದಕ್ಕೆ ಕಾರಣವೆಂದರೆ ಅಪರಂಜಿಯ ಮೊದಮೊದಲಿನ ಸುಮಾರು ಕಾರ್ಯಕ್ರಮಗಳನ್ನು ಪ್ರಾಯೋಜಿಸಿದವರು ಎಚ್ ಎಂ ಟಿ ಕಾರ್ಖಾನೆಯವರು. ಎಚ್ ಎಂ ಟಿ ಕೈಗಡಿಯಾರದ ಕಾರ್ಖಾನೆಯ ಒಂದು ಥೀಂ ವಾಕ್ಯವೆಂದರೆ ದೇಶದ ಸಮಯ ಪಾಲಕರು ನಾವು ಎಂಬುವುದು! ಬಹುತೇಕ ಕರ್ಖಾನೆ ಹಾಗೂ ಬ್ಯಾಂಕುಗಳಲ್ಲಿ ಕೆಲಸ ಮಾಡುವವರೇ ಇಂದಿನ ಹಾಸ್ಯ ಬರಹಗಾರರಾಗಿರುವುದು ವೃತ್ತಿಯಲ್ಲಿನ ಸಮಯಪಾಲನೆ ಪ್ರವೃತ್ತಿಯಲ್ಲೂ ಹಾಸು ಹೊಕ್ಕಾಗಿದೆ. ಕಾರ್ಖಾನೆ ಯಾ ಬ್ಯಾಂಕುಗಳಲ್ಲಿ ಹೇಗೆ ಸಮಯಕ್ಕೆ ಸರಿಯಾಗಿ ಕಾರ್ಯ ನಿರ್ವಹಿಸುತ್ತೀವೋ ಅದೇ ರೀತಿಯಲ್ಲಿಯೇ ಸಭೆ ಸಮಾರಂಭಗಳಲ್ಲೂ ಸಮಯವನ್ನು ಕಾಪಾಡಿಕೊಂಡು ಬಂದು ಇಂಡಿಯನ್ ಸ್ಟ್ಯಾಂಡರ್ಡ್ ಟೈಂ ಮೇನ್‌ಟೇನಿಸುತ್ತಾ ಬಂದಿದೆ ಅಪರಂಜಿ ಬಳಗ.

ಶ್ರೀ ರಂಗನಾಥರಾವ್ ಅವರಿಂದ ಪ್ರಾರ್ಥನೆಯ ನಂತರ ಚಲನಚಿತ್ರ ನಟ ರಮೇಶ್ ಅರವಿಂದ್ ಅವರು ಜ್ಯೋತಿಬೆಳಗಿಸಿ ಕಾರ್ಯಕ್ರಮವನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದರು.



ಮನುಷ್ಯನ ಬಹುಮುಖ ಪ್ರತಿಭೆಗಳು ಬೆಳಕಿಗೆ ಬರಬೇಕಾದರೆ ಹಾಸ್ಯ ಪ್ರವೃತ್ತಿಯನ್ನು ಬೆಳಸಿಕೊಳ್ಳಲೇ ಬೇಕು, ಒಂದು ನಗೆ ಸಾವಿರ ಸ್ನೇಹಿತರನ್ನು ಹುಟ್ಟುಹಾಕುತ್ತದೆ, ಅದರಲ್ಲೂ ಹಾಸ್ಯ ಸಾಹಿತಿಗಳು ನಗೆ ಚೆಲ್ಲುವ ಕಾರ್ಯವನ್ನು ಮಾಡುತ್ತಿರುವುದು ಯಾವುದೇ ದೊಡ್ಡ ಸಮಾಜಸೇವೆಗಿಂತಲೂ ಮಿಗಿಲಾದದ್ದು ಎಂದು ರಮೇಶ್ ನುಡಿದರು. ಇದೇ ಸಂದರ್ಭದಲ್ಲಿ ಅಪರಂಜಿ ಬೆಳ್ಳಿ ಹಬ್ಬದ ವಿಶೇಷಾಂಕ, ರಾಶಿಯವರ ''ಕೊರವಂಜಿಯ ಪಡುವಣ ಯಾತ್ರೆ'' ಮತ್ತು ಮೊಟ್ಟಮೊದಲಬಾರಿಗೆ ಪ್ರಕಟಗೊಂಡಿರುವ ರಾಶಿಯವರ ''ವೈಭೋಗದ ಕ್ಲಬ್ಬಿನಲ್ಲಿ'' ಗ್ರಂಥಗಳನ್ನು ಬಿಡುಗಡೆಗೊಳಿಸಲಾಯಿತು.

ನಂತರ ನೂತನ ತಂತ್ರಜ್ಞಾನದ ಒಂದು ಝಲಕ್ ಪ್ರೇಕ್ಷಕರಿಗೆ ಕಾದಿತ್ತು. ಅಪರಂಜಿ ಶಿವು ಅವರು ಕೊರವಂಜಿ-ಅಪರಂಜಿ ನಡೆದು ಬಂದ ದಾರಿ ಕುರಿತಂತೆ ಕೊರವಂಜಿ ಕಾಲದಿಂದ ಹಿಡಿದು ಅಪರಂಜಿಯ ನಿನ್ನೆಯ ಸಂಚಿಕೆವರೆಗೆ ಹೆಚ್ಚು ಜನ ಮನ್ನಣೆ ಗಳಿಸಿದ್ದ ವ್ಯಂಗ್ಯ ಚಿತ್ರಗಳನ್ನು ಪವರ್ ಪಾಯಿಂಟ್ ಪ್ರೆಸೆಂಟೇಶನ್ ಮೂಲಕ ಪರಿಚಯಿಸಿದರು. ಅಂದ ಹಾಗೆ ಅಪರಂಜಿಯ ವಿಶೇಷತೆ ಎಂದರೆ ಜಗತ್ತಿನ ವೈಜ್ಞಾನಿಕ ಬೆಳವಣಿಗೆಗೆ ಯಾವಾಗಲೂ ಕಿವಿಕೊಟ್ಟು ನಿಂತಿರುವುದು. ನಂತರ ಅದೇ ರೀತಿಯಲ್ಲಿ ಡಾ॥ ಓಂ ಪ್ರಕಾಶ್ ಅವರು ಅಪರಂಜಿ ಕಿಡಿಯ ಬಗ್ಗೆ ಪ್ರೆಸೆಂಟೇಶನ್ ನೀಡಿದರು. ಅಪರಂಜಿ ಬರಹಗಾರರಲ್ಲಿಯೂ ಮತ್ತು ಓದುಗರಲ್ಲಿಯೂ ಸುಮಾರು ಜನ ಜಗತ್ತಿನ ನಾಗಾಲೋಟಕ್ಕೆ ಸ್ಪಂದಿಸುತ್ತಿರುವವರೇ ಆಗಿರುವುದರಿಂದ ಪವರ್‌ಪಾಯಿಂಟ್ ಪ್ರೆಸೆಂಟೇಶನ್ ನಮಗೆ ಹೊಸದು ಎಂದು ಅನಿಸದು! ಆದರೂ ಕನ್ನಡದ ಒಂದು ಪುಟ್ಟ ಪ್ರಸಾರದ ಪತ್ರಿಕೆಯ ಈ ಕಾರ್ಯವನ್ನು ಮೆಚ್ಚಲೇಬೇಕು.

ಕೊರವಂಜಿಯ ಹಿರಿಯ ಬರಹಗಾರ ಹಾಗೂ ಅಪರಂಜಿಯ ಹುಟ್ಟಿಗೆ ಕಾರಣರಾದ ಹಿರಿಯ ಹಾಸ್ಯ ಸಾಹಿತಿ ಶ್ರೀ ಅ.ರಾ.ಸೇತೂರಾಮರಾಯರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಅ.ರಾ.ಸೇ. ಅವರು ಸನ್ಮಾನಕ್ಕೆ ಉತ್ತರಿಸುತ್ತಾ ತಮ್ಮ ಹಾಗೂ ರಾಶಿಯವರ ನಡುವಿನ ಸಂಬಂಧವನ್ನು ನೆನೆಸಿಕೊಂಡರಲ್ಲದೇ ಅಪರಂಜಿಯ ಆರಂಭದಲ್ಲಿ ಅದನ್ನು ಭರಮಸಾಗರದಿಂದ ಹೊರತರುತ್ತಿದ್ದುದನ್ನು ಅದರ ಕಷ್ಟ ಸುಖವನ್ನು ಹೇಳಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀ ಚಂದ್ರಶೇಖರ ಕಂಬಾರರು ಅಪರಂಜಿಗೆ ಶುಭ ಹಾರೈಸಿ ತಾವು ಜಿ.ಬಿ. ಜೋಶಿಯವರ ಅಟ್ಟದ ಮೇಲೆ ಕೂತು ಸಂಗಡಿಗರೊಂದಿಗೆ ಕೊರವಂಜಿ ಮತ್ತು ರಾಶಿಯವರನ್ನು ಕುರಿತು ಆಡಿದ ಹಲವು ನೆನಪನ್ನು ಬಿಚ್ಚಿದರು. ಶ್ರೀ ಶ್ರೀನಿವಾಸ ವೈದ್ಯ ಅಪರಂಜಿ ಜತೆಗಿನ ತಮ್ಮ ನಂಟನ್ನು ಬಿಚ್ಚಿಡುತ್ತಾ ಈಗಿನ ಹಲವಾರು ಹಾಸ್ಯಬರಹಗಾರರ ಲೇಖನಗಳಲ್ಲಿನ ಹಾಸ್ಯವನ್ನು ವಿಶ್ಲೇಷಿಸಿದರು. ಅಪರಂಜಿಯ ಬಹುತೇಕ ಲೇಖಕರನ್ನು ವೈದ್ಯ ನೆನಪಿನಲ್ಲಿರಿಸಿ ಹೇಳಿದ್ದು ವಿಶೇಷವೆನಿಸಿದರೆ ನನ್ನಂಥಹವರಿಗೆ ನಾವೇ ಬರೆದು ಮರೆತು ಹೋಗಿದ್ದ ಲೇಖನಗಳು ಇನ್ನೂ ಇವರ ನೆನಪಿನಲ್ಲಿದೆಯಲ್ಲಾ ಅನಿಸಿತು!

ಕೊರವಂಜಿ ಪತ್ರಿಕೆಯಲ್ಲಿ ಬರೆಯುತ್ತಿದ್ದ ಹಾಗೂ ಅಪರಂಜಿ ಪತ್ರಿಕೆಯ ಪ್ರಥಮ ಅಭಿಮಾನಿ ಮತ್ತು ಭಾರತೀಯ ವಿದ್ಯಾಭವನದ ಅಧ್ಯಕ್ಷರಾದ ಶ್ರೀ ಎನ್. ರಾಮಾನುಜ ಅವರು ಈ ಕಾರ್ಯಕ್ರಮದ ರೂವಾರಿಯಾಗಿದ್ದು ಅವರು ತಮ್ಮ ಹಾಗೂ ಕೊರವಂಜಿ ಮತ್ತು ಅಪರಂಜಿಯ ಸವಿ ನೆನಪನ್ನು ಹಂಚಿಕೊಂಡದ್ದೇ ಅಲ್ಲದೇ ಮೊದಲ ಹಾಸ್ಯೋತ್ಸವದ ಸಿಹಿ ಪ್ರಸಂಗಗಳನ್ನು ಹರವಿದರು.

ಇದಕ್ಕೆ ಮುನ್ನ ರಂಗ ಪ್ರವೀಣೆ, ಕಿರುತೆರೆ ಮತ್ತು ಹಿರಿತೆರೆಯ ಕಲಾವಿದೆ ಶ್ರೀಮತಿ ಬಿ. ಜಯಶ್ರೀ ಅವರು ರಂಗಗೀತೆಗಳನ್ನು ತಮ್ಮ ಸಂಗಡಿಗರೊಂದಿಗೆ ಹಾಡಿದರು. ಇದರ ಪರಿಣಾಮ ಹೇಗಿತ್ತು ಎಂದರೆ ಸಭಿಕರು ಬೇರೊಂದು ಲೋಕಕ್ಕೆ ಕಾಲಿಟ್ಟ ಅನುಭವ ವಾಯಿತು, ಇಡೀ ಸಭಾಂಗಣ ವೈಬ್ರೇಟ್ ಆಯಿತು ಮತ್ತು ನಮ್ಮ ಅರಿವಿಲ್ಲದ ಹಾಗೆ ನಮ್ಮ ತಲೆ, ಕೈಕಾಲು ನಡು ಕುಣಿದವು. ಜಯಶ್ರೀ ಅವರು ಕಾರ್ಯಕ್ರಮ ಮುಗಿಸಿಕೊಂಡು ಪುಣೆಗೆ ಹೋಗಬೇಕು ಎಂದು ಹೇಳಿದಾಗ ಅ.ರಾ. ಮಿತ್ರ ಸಿಡಿಸಿದ ಜೋಕು-ಪೂನಾಗೆ ಏತಕ್ಕೆ ಹೋಗ್ತೀರೀ? ಇಲ್ಲಿಂದಲೇ ಹೇಳಿಬಿಡಿ, ಅಲ್ಲಿಗೂ ಅದು ಕೇಳಿಸುತ್ತೆ!

ಅಪರಂಜಿಗೆ ಶುಭ ಹಾರೈಸಿ ಶ್ರೀ ಡುಂಡಿರಾಜ್ ಮಾತನಾಡಿ ಕೆಲವು ಹನಿಗವನಗಳನ್ನು ಹೇಳಿದರು. ಶ್ರೀ ಬೇಲೂರು ಕಾರ್ಯಕ್ರಮ ನಿರ್ವಹಣೆ ಮಾಡಿದರೆ ಶ್ರೀ ಎಚ್. ಗೋಪಾಲ ಕೃಷ್ಣ ವಂದನಾರ್ಪಣೆ ಮಾಡಿದರು. ನಂತರ ಎಂದಿನ ಹಾಗೆ ಒಳ್ಳೆಯ ಊಟ ಕಾದಿತ್ತು. ಅಪರಂಜಿಯ 25ರ ಹಬ್ಬ ಎಲ್ಲರ ಮನಸ್ಸಿನಲ್ಲಿ ಸವಿನೆನಪಾಯಿತು.

❖❖❖

ಕಡಲೀಚೆಯ ಕುಡಿನೋಟ

- ಶಿವು

ಶ್ರೀಲಂಕನ್ ಏರ್‌ಲೈನ್ಸ್ ವಿಮಾನ ಲಂಡನ್ ಪಟ್ಟಣದ ವಾಯುಪ್ರದೇಶವನ್ನು ಪ್ರವೇಶಿಸಿದಾಗ ಆ ದಿನ ಬೆಳಗ್ಗೆ ಒಂಭತ್ತು ಘಂಟೆ. ವಿಮಾನದ ಕಿಟಕಿಯಿಂದ ಹೊರಗೆ ಕಣ್ಣು ಹಾಯಿಸಿದರೆ ಕಣ್ಣಿಗೆ ರಾವು ಬಡಿಯುವಂತಹ ಬಿಸಿಲಿತ್ತು. ಪರವಾಗಿಲ್ಲವೇ, ಅಕ್ಟೋಬರ್ ತಿಂಗಳಲ್ಲೂ ಈ ದೇಶದಲ್ಲಿ ಇಷ್ಟು ಬಿಸಿಲು ಇದೆಯಲ್ಲಾ ಅಂತ ಸ್ವಲ್ಪಮಟ್ಟಿಗೆ ಸಂತೋಷವೂ ಆಯಿತೆನ್ನಿ. ಅಷ್ಟರಲ್ಲಿ ವಿಮಾನ ಕೆಳಗಿದ್ದ ಮೋಡಗಳ ಪದರಕ್ಕೆ ಇಳಿದುದರಿಂದ ಕಿಟಕಿಯಾಚೆ ಮಂಜು ಕವಿದಂತಾಯಿತು. ಸುಮಾರು ನಿಮಿಷಗಳ ಕಾಲ ಕಣ್ಣು ಕತ್ತಲೆಗಟ್ಟುವ ಮೋಡಗಳ ಮಧ್ಯೆ ಹಾದು ಕೊನೆಗೆ ಮೋಡಗಳ ತೆಕ್ಕೆಯಿಂದ ಬಿಡಿಸಿಕೊಂಡು ವಿಮಾನ ಕೆಳಕ್ಕೆ ಇಳಿದಾಗ ನನ್ನ ಪರಿಚಿತ ಲಂಡನ್ ಕಣ್ಣಿಗೆ ಬಿತ್ತು. ಬೆಳಗ್ಗೆ ಒಂಭತ್ತು ಘಂಟೆಯಲ್ಲೂ ದಟ್ಟವಾದ ಮೋಡಗಳ ಕೆಳಗಿದ್ದ ಮಂಕು ಬೆಳಕಿನಲ್ಲಿ ಹೀಥ್ರೋ ನಿಲ್ದಾಣದ ಕಟ್ಟಡಗಳು ಆಟದ ಗೊಂಬೆಗಳಂತೆ ಕಂಡವು. ವಿಮಾನದ ಧ್ವನಿವರ್ಧಕದಲ್ಲಿ ಮೂಡಿಬಂದ "ಹೊರಗಿನ ತಾಪಮಾನ ಹದಿಮೂರು ಡಿಗ್ರಿ ಸೆಲ್ಸಿಯಸ್" ಎಂಬ ಸಂದೇಶ ಕೇಳಿಸಿದ ತಕ್ಷಣ "ಈಗಲೇ ಹೀಗಾದರೆ ಇನ್ನು ರಾತ್ರಿಹೊತ್ತು ಹೇಗಪ್ಪಾ" ಎಂದು ಆತಂಕಪಟ್ಟುಕೊಂಡೇ ಇಳಿಯಲು ಅನುವಾದೆ.

ಹವಾಮಾನ ಅಂದಾಗ ನೆನಪಿಗೆ ಬರುತ್ತೆ ನೋಡಿ. ನಾನು ಮೊಟ್ಟಮೊದಲ ಬಾರಿ ಈ ಊರಿಗೆ ಬಂದಾಗ ಗೆಳೆಯ ಸತ್ಯ ಇಲ್ಲಿನ "ವೆದರ್" ಬಗ್ಗೆ ಬಹು ಉಪಯುಕ್ತ ಮಾಹಿತಿ ನೀಡಿದ್ದ. "ನೋಡು ಶಿವು, ಈ ಊರಿನಲ್ಲಿ ಇರೋದು ಒಂದೇ ಹವಾಮಾನ. ಛಳಿ ಮಿಶ್ರಿತ ಮಳೆ, ಅಥವಾ ಮಳೆ ಮಿಶ್ರಿತ ಛಳಿ. ಅದನ್ನೇ ಇಲ್ಲಿನೋರು ನಾಲ್ಕು ಋತುಗಳನ್ನಾಗಿ ವಿಂಗಡಿಸಿದ್ದಾರೆ. ಸಮ್ಮರಿನಲ್ಲಿ ತಂಪಾದ ಹವೆ, ಆಟಮ್ಮಿನಲ್ಲಿ ನಡುಗುವ ಛಳಿ, ವಿಂಟರಿನಲ್ಲಿ ಕೊರೆಯುವ ಛಳಿ, ಮತ್ತೆ ಸ್ಪ್ರಿಂಗಿನಲ್ಲಿ ವಿಂಟರಿನ ಹವಾಮಾನ ಮುಂದುವರಿದಿರುತ್ತೆ. ಮಳೆ ಮಾತ್ರ ಯಾವ ಕಾಲದಲ್ಲಿ ಬೇಕಾದರೂ ಜಿನುಗುತ್ತಿರಬಹುದು. ಸ್ವಲ್ಪ ಮಳೆ ನಿಂತರೆ ಸಾಕು, ಯಾರಾದರೂ ಸ್ಥಳೀಕರು ಸಿಕ್ಕರೆ ವಾಟ್ ಎ ಫೈನ್ ವೆದರ್ ಅನ್ನಬೇಕು. ಒಂದು ನೊಂದ ಜೀವಕ್ಕೆ ಮುದ ತಂದ ಪುಣ್ಯ ಬರುತ್ತೆ" ಸತ್ಯ ಎಂದೋ ಹೇಳಿದ್ದ ಈ ಮಾತುಗಳು ಇಂದಿಗೂ ಅಷ್ಟೇ ಸತ್ಯವಾಗಿರುವುದು ನನಗೆ ಅನುಭವದಿಂದ ಬಂದ ಜ್ಞಾನ.

ಮೊನ್ನೆ ಇವರ ನೆರೆ ರಾಷ್ಟ್ರ ಫ್ರಾನ್ಸ್ ದೇಶದೊಂದಿಗೆ ಇಂಗ್ಲೆಂಡಿನ ರಗ್ಬಿ ಟೀಮಿನವರು ಸೆಣೆಸಾಡಿದರು. ಭಾರತದಲ್ಲಿ ಕ್ರಿಕೆಟ್ಟಿಗಿರುವ ಜನಪ್ರಿಯತೆ ಇಲ್ಲಿ ರಗ್ಬಿ ಆಟಕ್ಕಿದೆ. ಇದೊಂದು ತರಹದ ಫುಟ್‌ಬಾಲ್ ಆಟ. ಆದರೆ ಇದರಲ್ಲಿ ಬಾಲನ್ನು ಒದೆಯುವುದಕ್ಕಿಂತ ಕೈಯಲ್ಲಿ ಹಿಡಿದು ದೌಡಾಯಿಸುವುದೇ ಹೆಚ್ಚು. ಹೀಗೆ ಒಬ್ಬ ಧಾಂಡಿಗ ಓಡಲು ಪ್ರಾರಂಭಿಸಿದರೆ, ಎದುರಾಳಿ ಟೀಮಿನ ಹತ್ತು ಹಲವಾರು ಧಾಂಡಿಗರು ಇವನ ಮೇಲೆ ಬಿದ್ದು ಒಬ್ಬರ ಮೇಲೆ ಒಬ್ಬರು ಹೊರಳಾಡಿ ಪಜೀತಿ ಎಬ್ಬಿಸಿ ಬಿಡುತ್ತಾರೆ. ಈ ಗಲಾಟೆಯಲ್ಲಿ ಅಲ್ಲೆಲ್ಲೋ ಬಿದ್ದಿರುವ ಚೆಂಡನ್ನು ಯಾವನೋ ಆಟಗಾರ ಹೆಕ್ಕಿಕೊಂಡು ಮತ್ತೆ ದೌಡಾಯಿಸಲು ಶುರು ಮಾಡುತ್ತಾನೆ. ಅವನ ಗುರಿ ಎದುರಾಳಿ ಟೀಮಿನ ಗೋಲ್ ರೇಖೆಯನ್ನು ಚೆಂಡಿನ ಸಮೇತ ದಾಟುವುದು.

ಅಥವಾ ಎರಡು ಎತ್ತರವಾದ ಗೋಲ್ ಕಂಭಗಳ ನಡುವೆ ಚೆಂಡನ್ನು ಒದ್ದು ಹಾಯಿಸುವುದು. ಇವರಲ್ಲಿ ಅವನು ಕೃತಾರ್ಥನಾದರೆ ಪುನಃ ಅವನ ಟೀಮಿನವರೇ ಅವನ ಮೇಲೆ ಬಿದ್ದು ಹೊರಳಾಡಿ ತಮ್ಮ ಮೆಚ್ಚುಗೆ ಸೂಚಿಸುವುದು ಈ ಆಟದ ಸಂಪ್ರದಾಯ. ಕಳೆದ ಶನಿವಾರ ನಡೆದ ಈ ಪಂದ್ಯದಲ್ಲಿ ಇಂಗ್ಲೆಂಡ್ ಟೀಮಿನವರು ಗೆದ್ದರು. ಮೂರು ನಾಲ್ಕು ಆಟಗಾರರಿಗೆ ಬಲವಾಗಿಯೇ ಪೆಟ್ಟುಗಳಾಗಿದ್ದರೂ ಸಂತಸದಿಂದ ನಗುತ್ತ ತಮ್ಮ ಜಯವನ್ನು ಸವಿಯುತ್ತಿದ್ದರು. ಮುಂದಿನ ಶನಿವಾರ ಸೌತ್ ಆಫ್ರಿಕಾ ಟೀಮಿನೊಂದಿಗೆ ಇವರ ಫೈನಲ್ಸ್ ಸೆಣಸಾಟ. ಇದರ ಫಲಿತಾಂಶಕ್ಕಾಗಿ ನಾಡಿಗೆ ನಾಡೇ ಉತ್ಸುಕತೆಯಿಂದ ತುದಿಗಾಲಿನಲ್ಲಿ ಕಾಯುತ್ತಿದೆ.

ಇಂಗ್ಲೆಂಡ್ ಒಂದು ಮಲ್ಟಿ ಕಲ್ಚರಲ್ ಸಮಾಜ. ದಕ್ಷಿಣ ಏಷ್ಯಾದವರು, ಚೀನೀಯರು, ಕ್ಯಾರೇಬಿಯನ್ನರು, ಆಫ್ರಿಕನ್ನರು, ಪೂರ್ವ ಯೂರೋಪಿಯನ್ನರು ಇವರೆಲ್ಲ ವಿವಿಧ ಕಾಲಗಳಲ್ಲಿ ಈ ದೇಶಕ್ಕೆ ವಲಸೆ ಬಂದು ಇಲ್ಲಿಯೇ ನೆಲಸಿ ಸಂತೃಪ್ತಿಯ ಜೀವನಕ್ಕಾಗಿ ಹೆಣಗಾಡುತ್ತಿದ್ದಾರೆ. ಇಲ್ಲಿನ ಮಣ್ಣಿನ ಮಕ್ಕಳಾದ ಬಿಳಿಯರು, ಶಾಂತಿಯುತ ಸಹಬಾಳ್ವೆಯ ಆದರ್ಶಕ್ಕೆ ಕಟ್ಟುಬಿದ್ದು ಒಂದು ರೀತಿಯ ಇಬ್ಬಂದಿಯಲ್ಲಿ ಸಿಲುಕಿ ಅಸಮಾಧಾನದ ಹಿನ್ನೆಲೆಯ ನಡುವೆ ಸಮಾಧಾನದ ಅನ್ವೇಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಯತ್ನದ ಒಂದು ನಿದರ್ಶನ ಇದೇ ತಿಂಗಳು ಇಪ್ಪತ್ತೆಂಟರಂದು ಲಂಡನ್ನಿನ ಟ್ರಫಾಲ್ಗರ್ ಚೌಕದಲ್ಲಿ ಯೋಜಿಸಿರುವ ದೀಪಾವಳಿ ಸಂಭ್ರಮ. ಲಂಡನ್ನಿನ ಮೇಯರ್ ನೇತೃತ್ವದಲ್ಲಿ ನಡೆಯಲಿರುವ ಈ ಹಬ್ಬದ ಪ್ರಧಾನ ಪ್ರಾಯೋಜಕರು ಟಿಲ್ಡಾ. ಬಾಸ್‌ಮತಿ ಅಕ್ಕಿಯನ್ನು ಆಮದು ಮಾಡಿ ವ್ಯವಹಾರ ನಡೆಸುತ್ತಿರುವ ಟಿಲ್ಡಾ ಈ ನಾಡಿನ ಪ್ರಮುಖ ವಾಣಿಜ್ಯ ಸಂಸ್ಥೆ. ಇಡೀ ದಿನ ಸಂಗೀತ, ನರ್ತನಗಳ ಕಾರ್ಯಕ್ರಮಗಳನ್ನು ಇಲ್ಲಿನ ವಿವಿಧ ಸಾಂಸ್ಕೃತಿಕ ಸಂಘಗಳು ನಡೆಸಿಕೊಡುತ್ತಿವೆ. ಗುಜರಾತಿ ಗಾರ್ಬಾ ನೃತ್ಯ, ಸೀರೆ ಉಡುವ ಕಲೆಯ ಕುರಿತ ಒಂದು ಡೆಮೋ, ಭಾಂಗ್ರಾ, ಭರತನಾಟ್ಯ, ನವಿಲು ನೃತ್ಯ ಇವೆಲ್ಲವುಗಳ ತುಣುಕುಗಳ ಜೊತೆಗೆ ಭಾರತದ ವಿವಿಧ ರಾಜ್ಯಗಳ ತಿನಿಸುಗಳ ರುಚಿ ತೋರಿಸುವ ಸ್ಟಾಲುಗಳು ಚೌಕದ ಸುತ್ತ ಇರುತ್ತವಂತೆ. ಒಟ್ಟಿನಲ್ಲಿ ವಚನಭ್ರಷ್ಟ ರಾಜಕೀಯ, ಮೀಸಲಾತಿ ಗೊಂದಲ, ಇವುಗಳಿಲ್ಲದೇ ಭಾವೈಕ್ಯತೆಯ ಪರಿಮಳಯುಕ್ತ ದೀಪಾವಳಿಯನ್ನು ಆಚರಿಸುವ ಆಸೆಯಿದ್ದರೆ, ತಿಂಗಳ ಕೊನೆಗೆ ನೇರವಾಗಿ ಲಂಡನ್ನಿಗೆ ಬನ್ನಿ. ವಾಸ್ತವವಾಗಿ ನೀವು ಈ ಕಾಲಮ್ಮನ್ನು ಓದುವ ಹೊತ್ತಿಗಾಗಲೇ ಸಮಾರಂಭ ಮುಗಿದು ಸುಟ್ಟ ಪಟಾಕಿಗಳನ್ನೆಲ್ಲಾ ಗುಡಿಸಿ ಸಾರಿಸಿಬಿಟ್ಟಿರುತ್ತಾರೆ ಅಂತಿಟ್ಟುಕೊಳ್ಳಿ.

ಕಳೆದವಾರ ನಾನು ಇಲ್ಲಿಗೆ ಬಂದಾಗ ನಾಡಿನಾದ್ಯಂತ ಅಂಚೆ ಮುಷ್ಕರ ನಡೆಯುತ್ತಿತ್ತು. ಹತ್ತುದಿನಗಳಿಂದ ಒಂದು ಅಂಚೆಯೂ ಬಟವಾಡೆಯಾಗಿರಲಿಲ್ಲ. ಒಳ್ಳೆಯದೇ ಆಯಿತು, ಜಂಕ್‌ಮೇಯ್ಲ್ ಬರುವುದು ತಪ್ಪಿತು ಅಂತ ಕೆಲವರ ಅಂಬೋಣ. ಇಲ್ಲಿನ ಒಂದು ಪತ್ರಿಕೆಯಲ್ಲಿ ಈ ಕುರಿತು ಒಂದು ಕಾರ್ಟೂನ್ ಬೇರೆ. ಅದರಲ್ಲಿ ಒಂದು ಪೋಸ್ಟ್ ಆಫೀಸಿನ ಚಿತ್ರ. POST OFFICE ಎಂಬ ಫಲಕದಲ್ಲಿ ಯಾರೋ ಕಿಡಿಗೇಡಿಗಳು Pಯನ್ನು ಅಡ್ಡಗೆರೆಯಿಂದ ಹೊಡೆದು, L ಅಂತ ಬರೆದಿದ್ದಾರೆ. ಮುಷ್ಕರದ ಬವಣೆಯನ್ನು ಇಷ್ಟು ಅರ್ಥವತ್ತಾಗಿ ತಿಳಿಸಲು ವ್ಯಂಗ್ಯ ಚಿತ್ರಕ್ಕಲ್ಲದೇ ಬೇರಾವ ಮಾಧ್ಯಮಕ್ಕೆ ಸಾಧ್ಯ.

ಮಿಕ್ಕ ವಿಷಯಗಳು ಮುಂದಿನ ಪತ್ರದಲ್ಲಿ. ಟೇಕ್ ಕೇರ್.

- ಶಿವಕುಮಾರ್

ಅಮೇರಿಕನ್ ಮೆಯ್ಡ್

- ಅಶ್ವತ್ಥ್ ಎನ್. ರಾವ್

ಆ ದಿನ, ಅನುಪಮಾ ಕೆಲಸ ಮಾಡುವ ಡಿಪಾರ್ಟ್‌ಮೆಂಟ್ ಸ್ಟೋರ್‌ನಲ್ಲಿ ಜನ ಜಂಗುಳಿ. ಕ್ರಿಸ್‌ಮಸ್ ಹಬ್ಬದ ಉಡುಗೊರೆಗಳನ್ನು ಕೊಳ್ಳುವ ಜನಗಳ ಸಂಭ್ರಮ, ಸಡಗರಕ್ಕೆ ಮಿತಿಯೇ ಇಲ್ಲ. ಅನುಪಮಳಿಗೆ ಉಸಿರಾಡಲೂ ವಿರಾಮವಿಲ್ಲದಷ್ಟು ಕೆಲಸ. ಕೊನೆಗೂ ಕೆಲಸ ಮುಗಿಸಿ ಮನೆಗೆ ಬಂದಾಗ ಸಂಜೆ ಆರು ಗಂಟೆ. ಬಾಗಿಲು ತೆರೆದು ಮನೆ ಒಳಗೆ ಕಾಲಿಟ್ಟಿದ್ದೇ ತಡ, ತನ್ನ ಪರ್ಸ್ ಅಡಿಗೆ ಮನೆಯ ಕೌಂಟರ್ ಮೇಲೆಸೆದು ದಿವಾನೆಖಾನೆಯ ಸೋಫಾ ಮೇಲೆ ಕುಸಿದಳು.

ಬಿಸಿ ಬಿಸಿ ಕಾಫಿ ಕುಡಿಯಲು ನಾಲಿಗೆ ಬಯಸುತ್ತಿದ್ದರೂ, ಎದ್ದು ನೀರು ಕುದಿಸಿ ಕಾಫಿ ಮಾಡುವಷ್ಟು ಚೈತನ್ಯ ಮತ್ತು ಸಹನೆ ಅವಳಿಗಿರಲಿಲ್ಲ. ಗಂಡ ಸಂಜಯ ಇನ್ನೂ ಬಂದಿರಲಿಲ್ಲ. ಆತ ಸಂಜೆ ಏಳರ ಮೊದಲೇ ಮನೆಗೆ ಬರುವುದು ಅಪರೂಪ. ಅಡುಗೆ ಮನೆಯ ಸಿಂಕ್‌ನಲ್ಲಿ ಮುಸರೆ ಪಾತ್ರೆಗಳ ರಾಶಿ. ಹಸಿದು ಬರುವ ಸಂಜಯನಿಗೆ ರಾತ್ರಿಯೂಟ ತಯಾರಿಸುವ ವಿಚಾರ ಬಂದಾಗ ನಿರುಪಮಾಳಿಗೆ ಮತ್ತಷ್ಟು ಆಯಾಸ. ಆ ಆಯಾಸದ ಅರನಿದ್ರೆಯಲ್ಲಿ ಆಕೆಯ ಮನಸ್ಸು ತನ್ನ ಮದುವೆಗೆ ಮುಂಚಿನ ಕಾಲಕ್ಕೆ ಹಿಂದೋಡಿತು.

★★★

ಇಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಒಳ್ಳೆಯ ವರಮಾನ ಬರುವ ಸಂಜಯ ಇಲ್ಲಿ ಕೆಲಸದಲ್ಲಿದ್ದ. ಮದುವೆಯಾಗಲು ಹೆಣ್ಣನ್ನು ಹುಡುಕಿ ಭಾರತಕ್ಕೆ ಬಂದಿದ್ದ. ಅನುಪಮಾಳನ್ನು ನೋಡಿ ಒಪ್ಪಿಕೊಂಡ. ಆಗ ಆಕೆಯ ತಂದೆತಾಯಿಗಳ ಸಂತೋಷ ಹೇಳತೀರದು. ಅನುಪಮಾ ಕೂಡಾ, ಬೆಳೆಯುತ್ತಿರುವಾಗ ಅಮೇರಿಕಾದಲ್ಲಿನ ಜೀವನದ ಕನಸು ಕಂಡಿದ್ದಳು. ದೊಡ್ಡ ದೊಡ್ಡ ಕಾರುಗಳು, ಮನೆಗೆಲಸಗಳನ್ನು ಕ್ಷಣ ಮಾತ್ರದಲ್ಲಿ ನೆರವೇರಿಸುವ ಒತ್ತುಗುಂಡಿಯ ಯಾಂತ್ರಿಕ ಸಲಕರಣೆಗಳು - ಇವನ್ನೆಲ್ಲಾ ಟಿ.ವಿ. ನಲ್ಲಿ ನೋಡಿ. ಮ್ಯಾಗಜಿನ್‌ಗಳಲ್ಲಿ ಓದಿ ಸೋಜಿಗ ಪಟ್ಟಿದ್ದಳು. ಈ ರೀತಿಯ ಮಾಯಾಲೋಕದಲ್ಲಿ ಜೀವಿಸುವ ಭವಿಷ್ಯದ ಕನಸು ಕಂಡಿದ್ದಳು. ಆಕೆಯ ಗೆಳತಿಯರು ನೀನು ಎಷ್ಟು ಅದೃಷ್ಟವಂತೆ. ಕಂಗ್ರಾಜ್ಯುಲೇಷನ್ಸ್ ಎಂದು ಅಸೂಯೆಯ ಧ್ವನಿ ತೆಗೆದು ಹೇಳಿದಾಗ ಅವಳಿಗೆ ಒಂದು ರೀತಿ ಅವ್ಯಕ್ತ ಸಂತೋಷ, ತೃಪ್ತಿಯನ್ನು ಕೊಟ್ಟಿತ್ತು.

ಅನುಪಮಾ ಅಮೇರಿಕಾಕ್ಕೆ ಬಂದು ಆಗಲೇ ಎರಡು ವರ್ಷಗಳಾಯ್ತು. ಆಕೆಗೆ ನೆನ್ನೆ ತಾನೇ ಬಂದಂತೆನಿಸಿತು.

ಅಮೇರಿಕಾಕ್ಕೆ ಬಂದ ಕೆಲವೇ ದಿನಗಳಲ್ಲಿ ಇಲ್ಲಿಯ ನಿತ್ಯಜೀವನದ ನಿಜಸ್ಥಿತಿ ಅನುಪಮಾಳಿಗೆ ಅರಿವಾಯ್ತು. ಬೆಳಿಗ್ಗೆ ಎಂಟಕ್ಕೆ ಮನೆ ಬಿಟ್ಟರೆ ಸಂಜಯನಿಗೆ ಮನೆಗೆ ಬರಲು

ಸಂಜೆ ಏಳು ಗಂಟೆ ಆಗುತ್ತಿತ್ತು. ಇಲ್ಲಿ ಎಲ್ಲರೂ ತಮ್ಮ ತಮ್ಮ ಕೆಲಸದಲ್ಲಿ ಮಗ್ನರಾಗಿರುವುದರಿಂದ ಆಕೆಗೆ ಇನ್ನೂ ಬಹಳ ಜನಗಳ ಪರಿಚಯವಾಗಿರಲಿಲ್ಲ. ಬಂದ ಕೆಲವು ತಿಂಗಳಲ್ಲೇ ಸಂಜಯನನ್ನು ಒತ್ತಾಯ ಪಡಿಸಿ ಕಾರ್ ಡ್ರೈವಿಂಗ್ ಕಲಿತಿದ್ದಳು.

ಮನೆಯಿಂದ ಕೇವಲ ಹತ್ತು ನಿಮಿಷ ದೂರದಲ್ಲಿರುವ ಡಿಪಾರ್ಟ್‌ಮೆಂಟ್ ಸ್ಟೋರ್‌ನಲ್ಲಿ ಸೇಲ್ಸ್‌ಪರ್ಸನ್ ವಾಂಟೆಡ್ ಎನ್ನುವ ಜಾಹಿರಾತನ್ನು ಕಂಡು ಪ್ರಯತ್ನಿಸಿ ನೋಡೋಣ ಎಂದು ಅರ್ಜಿ ಭರ್ತಿ ಮಾಡಿದ್ದಳು. ಕೆಲಸಸಿಕ್ಕಾಗ ಖುಷಿಯೋ ಖುಷಿ. ಸಂಜಯ ಕೆಲಸದಲ್ಲಿದ್ದಾಗ ಬೆಳಗ್ಗೆ ಕಾಲ ಕಳೆಯಲು ಅವಕಾಶ ತನ್ನ ಖರ್ಚಿಗೆ ಹಣ ಸಿಕ್ಕಂತಾಗಿತ್ತು, ಅದಲ್ಲದೆ ಆ ಸ್ಟೋರಿನಲ್ಲಿ ಆಕೆ ಏನು ಕೊಂಡರೂ ಕೆಲಸಗಾರರಿಗೆ ಸಿಗುವ ಡಿಸ್ಕೌಂಟ್ ದರದಲ್ಲಿ ಸಾಮಾನುಗಳು ಸಿಗುತ್ತಿದ್ದವು.

ಬರುಬರುತ್ತಾ ಹೊರಗಿನ ಕೆಲಸದಿಂದ ದಣಿದು ಬರುತ್ತಿದ್ದ ಅನುಪಮಾಳಿಗೆ ಮನೆಗೆಲಸದಲ್ಲಿ ಆಸಕ್ತಿ ಕಡಿಮೆಯಾಯ್ತು. ಆಕೆ ಈ ಕೆಲಸಗಳಲ್ಲಿ ಹಿಂದುಳಿಯುತ್ತಿದುದನ್ನೂ ಸಂಜಯನೂ ಗಮನಿಸಿದ್ದ.

ಇಲ್ಲಿ ಎಲ್ಲಾ ಸೌಕರ್ಯಗಳಿದ್ದು ಒತ್ತು ಗುಂಡಿಯ ಜೀವನವಾಗಿದ್ದರೂ ಮುಸುರೆ ತಿಕ್ಕುವ, ಮನೆಗುಡಿಸುವ, ಬಟ್ಟೆಗಳನ್ನು ಒಗೆಯುವ ಅಡಿಗೆ ಮಾಡುವ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕಲ್ಲವೇ?-ಅಂದುಕೊಳ್ಳುತ್ತಿದ್ದಳು, ಅನುಪಮಾ.

ಮನೆ ಕೆಲಸಕ್ಕೆ ಕೆಲಸದವಳೊಬ್ಬಳನ್ನ, ಮೆಯ್ಡ್‌ನ್ನು ಇಟ್ಟುಕೊಳ್ಳುವ ವಿಚಾರದಲ್ಲಿ ಅನುಪಮಾ ಸಂಜಯನಿಗೆ ಸೂಕ್ಷ್ಮವಾಗಿ ಸಲಹೆಕೊಟ್ಟಿದ್ದಳು. ಚರ್ಚಿಸಿದ್ದಳು. ಗೋಗರೆದು ಕೇಳಿದ್ದಳು. ಕೋಪದಿಂದ ಮುನಿಸಿಕೊಂಡು ಕೆಲವು ದಿನ ಮಾತೂ ಬಿಟ್ಟಿದ್ದಳು. ಸಂಜಯ ಈ ವಿಚಾರದಲ್ಲಿ ಸಾಧ್ಯವಿಲ್ಲಾ ಎಂದು ಸ್ಥಿರವಾದ ನಿಲುವನ್ನೂ ತೋರಿದ್ದ.

ಸಂಜಯ ಮನೆಗೆ ಬಂದು ಸೋಫಾದಲ್ಲಿ ಕುಳಿತು ಕನಸು ಕಾಣುತ್ತಿರುವ ಅನುಪಮಾಳ ಹೆಗಲುಮುಟ್ಟಿ ಅಲುಗಿಸಿದಾಗ ಮಂಪರಿನಿಂದ ಎಚ್ಚೆತ್ತಳು.

ಮನೆಗೆ ಯಾವಾಗ ಬಂದೆ? ಕೆಲಸದಿಂದ ಬಹಳ ದಣಿದಂತೆ ಕಾಣುತ್ತದೆ? ತುಂಬಾ ಹಸಿವಾಗುತ್ತಿದೆ ಏಳು ಊಟಮಾಡೋಣ ಎಂದ.

ಎದ್ದು ಆಕಳಿಸುತ್ತಾ ನಾನು ಬಂದು ಒಂದು ಗಂಟೆ ಆಗಿರಬೇಕು. ಊಟ ತಯಾರಿಲ್ಲಾ ಎಂದಳು.

ಇದೇ ಸರಿಯಾದ ಸಂದರ್ಭ ಎಂದು ನಿರ್ಧರಿಸಿ,

ನೋಡಿ ಸಂಜಯ್, ಇನ್ನು ಈ ಮನೆಯಲ್ಲಿ ಮನೆಕೆಲಸಕ್ಕೆ ಮೆಯ್ಡ್ ಇಲ್ಲದೆ ನಾವು ಜೀವಿಸಲು ಸಾಧ್ಯವೇ ಇಲ್ಲಾ. ಊರಿನಲ್ಲಿ ರಾಜಕುವರಿಯಂತಿದ್ದ ನನ್ನನ್ನು ನೀವೇ ಇಲ್ಲಿ ಎಳೆದುಕೊಂಡು ಬಂದಿದ್ದು. ಇಲ್ಲಿಯ ಜೀವನ ನನಗೆ ಸಾಕಾಗಿ ಹೋಗಿದೆ ಎಂದು ಕೊನೆಯ ನಿರ್ಧಾರವನ್ನೂ ಸ್ಪಷ್ಟವಾಗಿ ತಿಳಿಸಿದಳು.

ಹಾಗೇ ಆಗಲಿ ಮಹಾರಾಯಿತಿ. ನಾಳೆಯೇ ಒಬ್ಬ ಮೇಯ್ಡ್‌ನ್ನು ಹುಡುಕೋಣ. ಈಗ ಊಟಕ್ಕೆ ಪಿಜ್ಜಾ ಆರ್ಡರ್ ಮಾಡಿ ತರಿಸಿದರೆ ಆಯ್ತು ಎಂದಾಗ ಅನುಪಮಾಳಿಗೆ ಆತ ಇಷ್ಟು ಸುಲಭವಾಗಿ ಒಪ್ಪಿದನಲ್ಲಾ ಎಂದು ಆಶ್ಚರ್ಯ ಮತ್ತು ಸಂತೋಷ.

ಟೆಲಿಫೋನ್ ಡೈರೆಕ್ಟರಿಯ ಯಲ್ಲೋ ಪೇಜ್‌ಸ್‌ಗಳಲ್ಲಿ ಮೇಯ್ಡ್ ಸರ್ವಿಸ್ ಭಾಗದಲ್ಲಿ ಜಾಹೀರಾತು ಓದುತಿದ್ದಳು ಅನುಪಮಾ. ದೊಡ್ಡ ಅಕ್ಷರಗಳಲ್ಲಿದ್ದ ಸನ್‌ಶೈನ್ ಮಿರಕಲ್ ಮೇಯ್ಡ್ ಸರ್ವಿಸ್ ಎಂಬ ತಲೆ ಬರಹ ಕಣ್ಣಿಗೆ ಬಿತ್ತು. ಓದಿದಳು. ಆಫ್ಟರ್ ವಿ ಫಿನಿಶ್ ಕ್ಲೀನಿಂಗ್ ಯುವರ್ ಹೌಸ್, ಇಟ್ ವಿಲ್ ಬಿ ಸೋ ಬ್ರೈಟ್, ಯು ಮೆ ನೀಡ್ ಸನ್ ಗ್ಲಾಸಸ್ ಇನ್ ಸೈಡ್ ದಿ ಹೌಸ್!, ಆ ನಂಬರ್‌ಗೆ ಫೋನ್ ಮಾಡಿ ಅಪಾಯಿಂಟ್‌ಮೆಂಟನ್ನು ಗಿಟ್ಟಿಸಿಕೊಂಡಳು.

ಮರುದಿನ, ಅತ್ಯಂತ ಆಧುನಿಕ ಮಾದರಿಯ ಲಿಮೋಸಿನ್‌ನಂತೆ ಕಾಣುವ ವಾಹನವೊಂದು ಅವಳ ಮನೆ ಮುಂದೆ ಬಂದು ನಿಂತಿತು. ಎತ್ತರವಾಗಿ ಕಾಣುವ, ನೀಲಿ ಸಮವಸ್ತ್ರ ಚೂಪು ಎತ್ತರದ ಹಿಮ್ಮಡಿ ಇರುವ ಪಾದರಕ್ಷೆಗಳನ್ನು ಧರಿಸಿರುವ, ವಿಮಾನದಲ್ಲಿನ ಗಗನಸಖಿ (ಅತಿಥ್ಯ ನೀಡುವ ಯುವತಿ)ಯಂತೆ ಕಾಣುವ ಮಹಿಳೆಯೊಬ್ಬಳು ಮನೆ ಬಾಗಿಲು ತಟ್ಟಿದಳು. ಇಂತಹ ವ್ಯಕ್ತಿಯನ್ನು ನಿರೀಕ್ಷಿಸದಿದ್ದ ಅನುಪಮಾ, ಬಾಗಿಲು ತೆರೆದು ಆಕೆಯನ್ನು ಮರ್ಯಾದೆಯಿಂದ ಬರಮಾಡಿಕೊಂಡಳು.

ತನ್ನ ಬಿಸಿನೆಸ್ ಕಾರ್ಡ್ ಅನ್ನು ಅನುಪಮಾ ಕೈಗಿಡುತ್ತಾ ಅವಳು, ತಾನು ಸನ್‌ಶೈನ್ ಮಿರಾಕಲ್ ಮೇಯ್ಡ್ ಸರ್ವಿಸ್ ನ ಮ್ಯಾನೇಜರ್ ಎಂದು ತನ್ನ ಪರಿಚಯ ಮಾಡಿಕೊಳ್ಳುತ್ತಾ ಕೈಕುಲುಕಿ ಕುಳಿತಳು.

ಇವಳ ನೌಕರಿಗೆ ವೇತನವೆಷ್ಟು ಎಂದು ತಿಳಿಯಲು ಅನುಪಮಾಳಿಗೆ ತವಕ. ಆದರೆ, ಆಕೆ ಈ ಪ್ರಶ್ನೆ ಕೇಳಲು ಬಾಯಿಬಿಡುವುದಕ್ಕೆ ಮುಂಚೆಯೇ ಈ ಯುವತಿ ತನ್ನ ಬ್ರೀಫ್ ಕೇಸ್‌ನಿಂದ ನೋಟ್ ಪ್ಯಾಡ್ ತೆಗೆದು, ತನ್ನದೇ ಪ್ರಶ್ನಾವಳಿಗಳನ್ನು ಕೇಳಲು ಪ್ರಾರಂಭಿಸಿದಳು.

ನಿಮ್ಮ ಮನೆಯಲ್ಲಿ ಎಷ್ಟು ಜನರಿದ್ದಾರೆ? ನೀವೇನು ಕೆಲಸ ಮಾಡುತ್ತಿದ್ದೀರಿ? ಅಂದ ಹಾಗೆ, ನಿಮ್ಮ ವಯಸ್ಸೆಷ್ಟು? ನಿಮಗೆಷ್ಟು ವರಮಾನ? ಮುಂತಾದ ವೈಯಕ್ತಿಕ ಪ್ರಶ್ನೆಗಳಲ್ಲದೆ ನಿಮ್ಮ ಮನೆಯೆಷ್ಟು ದೊಡ್ಡದು? ಎಷ್ಟು ಕೊಠಡಿಗಳಿವೆ? ಎಷ್ಟು ಬಚ್ಚಲ ಮನೆಗಳು? ನಿಮ್ಮ ಮನೆ ಎಷ್ಟು ಹಳೆಯದು? - ಎನ್ನುವ ಪ್ರಶ್ನೆಗಳು.

ಕ್ಯಾನ್ ಯು ಗಿವ್ ನೇಮ್ಸ್ ಆಫ್ ರೆಫ್ರೆನ್ಸಸ್ ಅಂಡ್ ಕ್ಯಾರೆಕ್ಟರ್ ವಿಟ್ನೆಸಸ್?- ಎಂದಾಗ ಈಕೆಯ ಪ್ರಶ್ನೆಗಳು ಮಿತಿ ಮೀರಿದವು ಎಂದು ಐ ಆ್ಯಮ್ ನೀದರ್ ಅಪ್ಲೈಯಿಂಗ್ ಫಾರ್ ಎ ಲೋನ್, ನಾರ್ ಫಾರ್ ದಿ ಸಿಟಿಜನ್‌ಶಿಪ್, ವಿ ಆರ್ ಜಸ್ಟ್ ಲುಕಿಂಗ್ ಫಾರ್ ಎ ಮೇಯ್ಡ್ ಹಿಯರ್ ಎಂದು ಗದರಿಸಿದೆ.

ಆ್ಯಮ್ ಸಾರಿ, ಇಫ್ ಯು ಆರ್ ಅಫೆಂಡೆಡ್. ವಿ ಚೂಸ್ ಅವರ್ ಕ್ಲೈಂಟ್ಸ್ ವೆರಿ ಕೇರ್‌ಫುಲಿ. ವಿ ವಿಲ್ ಡೆಲಿಬಿರೇಟ್ ಆನ್ ಯುವರ್ ಅಪ್ಲಿಕೇಷನ್, ಅಂಡ್ ಐ ವಿಲ್ ಲೆಟ್

ಯು ನೋ ಇನ್ ಫೈವ್ ಬಿಸಿನೆಸ್ ಡೇಸ್ ವೆದರ್ ಯು ಕ್ವಾಲಿಫೈ ಫಾರ್ ಅವರ್ ಸರ್ವೀಸಸ್. ಗುಡ್ ಡೇ ಎಂದು ಎದ್ದು ಹೊರಟಳು.

ಮನೆಯಲ್ಲಿರುವ ಒಡವೆ, ಸಾಮಾಗ್ರಿಗಳನ್ನು ಮಾರಿ ಮನೆ ಖಾಲಿ ಮಾಡಿ, ಈಕೆಯ ಸಂಬಳ ಕೊಟ್ಟನಂತರ ನಮ್ಮ ಮನೆ ಶುಭ್ರವಾಗಿ ಕಾಣಬಹುದೋ ಏನೋ, ಮತ್ತೇನು?- ಎಂದು ಮನಸ್ಸಿನಲ್ಲೇ ಅಂದುಕೊಳ್ಳುತ್ತಾ ಅನುಪಮಾ ಆಕೆಯನ್ನು ಬೀಳ್ಕೊಟ್ಟಳು.

ಮತ್ತೆ ಕೆಲವು ಅಭ್ಯರ್ಥಿಗಳ ಮುಖೇನ ಮಾತನಾಡಿ ತನ್ನ ಮನೆ ಕೆಲಸಕ್ಕೆ ಸೂಕ್ತವಾಗುವಂತಹ ಗುಣಗಳಿರುವುದೇ ಎಂದು ಪರಿಶೀಲಿಸಿದ್ದಳು:

ಸಂಜಯನ ಸಹಪಾಠಿಯ ಸಲಹೆಯಂತೆ ಬಂದಿದ್ದ ಯುವತಿಯನ್ನು ಪ್ರಶ್ನಿಸುತ್ತಿದ್ದಳು ಅನುಪಮಾ.

ತನಗೆ ಮನೆಕೆಲಸ ಮಾಡುವ ಅನುಭವವೇನೂ ಇಲ್ಲದಿದ್ದರೂ ಕಾಲೇಜ್ ವಿದ್ಯಾಭ್ಯಾಸದ ವೇತನಕ್ಕೆ ಸಹಾಯವಾಗಲು ಹಣ ಸಂಪಾದಿಸುವ ಉದ್ದೇಶದಿಂದ ತಾನು ಬಂದಿರುವುದೆಂದು ಮುಚ್ಚುಮರೆಯಿಲ್ಲದೆ ತಿಳಿಸಿದಳು ಈ ಯುವತಿ.

ತೆಳ್ಳಗೆ ಬೆಳ್ಳಗೆ ಇದ್ದ ಈ ಸುಮಾರು ಇಪ್ಪತ್ತು ವರ್ಷದ ನೀಲಗಣ್ಣಿನ ರೂಪದರ್ಶಿಯಂತೆ ಕಾಣುವ ಹೆಣ್ಣು, ತನ್ನ ಬಂಗಾರದಂತಹ ಕೇಶರಾಶಿಯನ್ನು ಹಿಂದೆ ತಳ್ಳುತ್ತಾ ಮಾತನಾಡುತ್ತಿರುವುದನ್ನು ಕಣ್ಣುಮಿಟಗಿಸದೆ, ಜೊಲ್ಲು ಸುರಿಸುತ್ತಾ ಬಾಯಿ ಬಿಟ್ಟು ನೋಡುತ್ತಿದ್ದ ಸಂಜಯ. ಇದು ಅನುಪಮಾಳ ಗಮನಕ್ಕೆ ಬರದೆ ಇರಲಿಲ್ಲ.

ಬೇಸಿಗೆ ರಜೆಯ ವೇಳೆಯಲ್ಲಿ ಬೇಕಾದರೆ ಮನೆಯಲ್ಲೇ ಇದ್ದು ದಿನಪೂರ್ತಿ ಅನುಪಮಾಳ ಮನೆಗೆಲಸಕ್ಕೆ ನೆರವಾಗಲು ಸಿದ್ಧ- ಎಂದೂ ಅವಳು ತಿಳಿಸಿದಳು. ಬೇಸಿಗೆಯಲ್ಲಿ ಅಪ್ಪ ಅಮ್ಮನನ್ನು ಭೇಟಿ ಮಾಡಲು ಸ್ವಲ್ಪ ದಿನ ಭಾರತಕ್ಕೆ ಸದ್ಯದಲ್ಲೇ ಹೋಗಬೇಕೆಂದು ಯೋಚಿಸುತ್ತಿದ್ದ ಅನುಪಮಾ, ಸಂಜಯನನ್ನು ಈ ಯುವತಿಯೊಂದಿಗೆ ಬಿಟ್ಟು ಹೊರಡುವಂತಹ ಸಂದರ್ಭ ಎಂದೂ ಆಗದು ಎಂದು ನಿರ್ಧರಿಸಿದಳು.

ಕ್ಷಮಿಸಿ, ನಾವು ಮನೆಗೆಲಸದ ಅನುಭವ ಇದ್ದವರನ್ನ ಹುಡುಕುತ್ತಿದ್ದೇವೆ. ನೀವು ಬೇರೆ ಎಲ್ಲಾದರೂ ಕೆಲಸ ಹುಡುಕಿಕೊಳ್ಳಿ, ಅಲ್ಲಿ ನಿಮಗೆ ಒಳ್ಳೆಯದಾಗಲಿ - (ಸಾರಿ, ವಿ ಆರ್ ಲುಕಿಂಗ್ ಫಾರ್ ಸಮ್‌ಒನ್ ವಿತ್ ಎಕ್ಸ್‌ಪೀರಿಯನ್ಸ್, ಟ್ರೈ ಯುವರ್ ಲಕ್ ಎಲ್ಸ್‌ವೇರ್ ಗುಡ್ ಲಕ್) ಎಂದು ಬಾಗಿಲು ತೋರಿಸಿದಳು.

ಮತ್ತೊಬ್ಬಳು ನಲವತ್ತು ವರ್ಷದ ಮಹಿಳೆ ಬಂದಳು. ಅವಳ ಗಂಡ ಕೆಲಸವಿಲ್ಲದ ಹೆಂಡಕುಡುಕ. ಸೇರಿನಿಂದ ಚಟಾಕಿನವರೆಗೆ ಆರು ಮಕ್ಕಳು. ಸಂಬಳ ಎಷ್ಟೋ ಕೊಡಿ ಪರವಾಗಿಲ್ಲಾ - ಎಂದಳು. ಹಾಗೆ ಯೋಚಿಸಿದಾಗ ಈಕೆಯೊಬ್ಬಳನ್ನೇ ಮನೆಯಲ್ಲಿ ಬಿಡಬೇಕಾಗಿ ಬಂದರೆ ಅದು ಒಂದು ತಮ್ಮ ಭದ್ರತೆಗೇ ಒಂದು ಅಪಾಯ (ಸೆಕ್ಯುರಿಟಿ ರಿಸ್ಕ್) ಎಂದು ಆಕೆಗೆ ಗುಡ್ ಬೈ ಎಂದಳು.

ಮತ್ತೊಬ್ಬಳು ಸುಮಾರು ಅರವತ್ತೈದು ವರ್ಷದವಳೊಬ್ಬಳು ಬಂದಳು. ಅವಳೋ ಕುಗ್ಗಿ

ಬಗ್ಗಿ ನಡೆಯುತ್ತಿದ್ದಳು. ಅವಳ ಕೈಗಳ ಆಕಾರ ನೋಡಿದರೇ ಗೊತ್ತಾಗುತ್ತಿತ್ತು, ಅವಳಿಗೆ ಆರ್ತ್‌ರೈಟೆಸ್ ಕಾಹಿಲೆ ಇದೆ ಎಂದು. ಸೊರಗಿ ಬಾಡಿ ಬೆಂಡಾಗಿ ಹೋಗಿರುವ ಈ ಹೆಂಗಸಿಗೆ ಏನಾದರೂ ಒಂದು ಸೀರೆ ಉಡಿಸಿ, ಹಣೆಗೆ ಒಂದು ಡೈಮ್ ಅಗಲ ಕುಂಕುಮ ಹಚ್ಚಿದರೆ ತನ್ನ ಅಜ್ಜಿಯಂತೆ ಕಾಣುವ ಹಾಗಿದ್ದಳು, ಆ ವೃದ್ಧೆ. ಇವಳಿಂದ ಮನೆಕೆಲಸ ಮಾಡಿಸಿಕೊಳ್ಳಲು ಅನುಪಮಾಳಿಗೆ ಸ್ವಲ್ಪವೂ ಮನಸ್ಸಾಗಲಿಲ್ಲಾ. ಏನು ಮಾಡಿದಳು ಗೊತ್ತೆ? ಮನೆಗೆ ವಾಪಸ್ ಹೋಗಲು ಟ್ಯಾಕ್ಸಿಗೆ ಅಂತ ಅವಳ ಕೈಗೆ ಹತ್ತು ಡಾಲರ್‌ಗಳನ್ನಿತ್ತು ಅವಳನ್ನು ಸಾಗಹಾಕಿದಳು.

ಬಹಳ ಅಭ್ಯರ್ಥಿಗಳು ಮತ್ತು ಕೆಲವು ದಿನಗಳ ಬಳಿಕ, ಕೊನೆಗೂ ಅನುಪಮಾ ನಿರೀಕ್ಷಿಸಿದಂತಹ ಮನೆಗೆಲಸಕ್ಕೆ ಮೇಯ್ಡ್ ಒಬ್ಬಳು ಸಿಕ್ಕಿದಳು.

ಡಿಪಾರ್ಟ್‌ಮೆಂಟ್ ಸ್ಟೋರ್‌ನಲ್ಲಿ ತನ್ನೊಡನೆ ಕೆಲಸ ಮಾಡುವಳೊಬ್ಬಳು ಈಕೆಯನ್ನು ಶಿಫಾರಸ್ ಮಾಡಿದ್ದಳು. ಸುಮಾರು ಐವತ್ತು ವರ್ಷ ವಯಸ್ಸಿನವಳಿರಬೇಕು. ಅಲ್ಲಲ್ಲಿ ತಲೆಯ ಬಿಳಿಕೂದಲು. ಸ್ವಲ್ಪ ಕುಳ್ಳಗಿದ್ದರೂ ಗಟ್ಟಿಮುಟ್ಟಾಗಿರುವಂತೆ ಕಾಣುತ್ತಿದ್ದಳು. ಮೆಕ್ಸಿಕೋ ದೇಶದವಳಾದ್ದರಿಂದ, ಅವಳ ಇಂಗ್ಲಿಷ್ ಹರುಕು, ಮುರುಕು. ಬಾಯಿ ಮಾತಿನಿಂದ ವ್ಯಕ್ತಪಡಿಸಲು ಕ್ಲಿಷ್ಟವಾದ ಭಾವನೆಗಳನ್ನು ಅವಳು ತನ್ನ ಹಲ್ಲು ಬಿಟ್ಟು ನಗುವುದರಲ್ಲಿ ವ್ಯಕ್ತಪಡಿಸುತ್ತಿದ್ದಳು. ಅವಳ ಮಜೂರಿ: ಬೆಳಿಗ್ಗೆ ಒಂಬತ್ತರಿಂದ ಮಧ್ಯಾಹ್ನ ಎರಡು ಗಂಟೆಯವರೆಗಿನ ಕೆಲಸಕ್ಕೆ ಮಿನಿಮಮ್ ವೇಜ್ ಅಂದರೆ, ಸರ್ಕಾರ ನಿಗದಿಪಡಿಸಿದ ಕನಿಷ್ಟ ವೇತನ.

ಮನೆಗೆಲಸಕ್ಕೆ ಬೇಕಾದ ಸೋಪು, ಬ್ಲೀಚಿಂಗ್ ಪೌಡರ್, ಡಿಟರ್‌ಜೆಂಟು, ಬ್ರಷ್‌ಉ- ಇತ್ಯಾದಿ ಅದೂ ಇದೂ ಸಾಮಗ್ರಿಗಳನ್ನು, ನಾವು ತಂದಿದ್ದು ಅವಳಿಗೆ ಸರಿಯಾಗದೆ ಹೋಗಬಹುದು ಆದ್ದರಿಂದ ಅವನ್ನೆಲ್ಲಾ ಆಕೆಯೇ ತೆಗೆದುಕೊಂಡು ಬರುವದರಿಂದ, ಅದಕ್ಕೆ ಪ್ರತ್ಯೇಕವಾಗಿ ಅನುಪಮಾ ಹಣಕೊಡಬೇಕು - ಎಂಬ ಒಪ್ಪಂದವಾಯಿತು. ಸಂಭಾವನೆಯನ್ನು ತಿಂಗಳ ಅಂತ್ಯದಲ್ಲಿ ಕೊಟ್ಟರೂ ಪರವಾಗಿಲ್ಲಾ. ದಯವಿಟ್ಟು ಚೆಕ್ ಬೇಡ. ಪೂರ್ತಿ ಕ್ಯಾಷ್ ನಲ್ಲಿ ಕೊಡುವುದು.

ಇರಲಿ, ಈ ಕೆಲಸದ ಕರಾರು ಇತ್ಯರ್ಥವಾದ ನಂತರ ಮರುದಿನವೇ ಮರಿಯಾ ಕೆಲಸ ಪ್ರಾರಂಭಿಸಿದಳು.

ಮರಿಯಾಳ ಮೊದಲ ದಿನ. ಅನುಪಮಾಳಿಗೆ ಸಂಭ್ರಮ. ಸಡಗರವೊ, ಸಡಗರ. ಬೇಗ ಎದ್ದು ಮನೆಯನ್ನು ಓರಣವಾಗಿರಿಸುವುದರಲ್ಲಿ ಮಗ್ನಳಾಗಿದ್ದಳು. ಮುಸರೆ ಪಾತ್ರೆಗಳನ್ನು ನೀರಿನಲ್ಲಿ ಕಲಕಿ ಜೋಡಿಸಿದ್ದಳು ಕುರ್ಚಿ, ಟೇಬಲ್ ಗಳ ಮೇಲಿನ ಧೂಳನ್ನು ಒರಸಿ, ದಿಂಬುಗಳನ್ನು ನೀಟಾಗಿ ಸಜ್ಜುಗೊಳಿಸಿದಳು. ಇನ್ನೂ ಹಾಸಿಗೆಯಲ್ಲಿ ಹೊರಳಾಡುತ್ತಿದ್ದ ಸಂಜಯನನ್ನು ಹೊರ ಎಬ್ಬಿಸಿ ಹೊದಿಕೆ, ಷೀಟುಗಳನ್ನು ನೇರ ಮಾಡಿದಳು.

ಸಂಜಯ ಆಶ್ಚರ್ಯದಿಂದ ಕೇಳಿದ, ಮನೆಗೆಲಸದವಳು ಈ ದಿನ ಕೆಲಸ ಪ್ರಾರಂಭ ಮಾಡುತ್ತಾಳೆಂದು ಹೇಳಿದ್ದೆಯಲ್ಲಾ, ಇದೇನು ನೀನೇ ಕೆಲಸ ಮಾಡುವಂತಿದೆಯಲ್ಲಾ?

ಇಂಥಾ ಬ್ರಿಲಿಯಂಟ್ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ಇಷ್ಟೂ ತಿಳಿಯುವುದಿಲ್ಲವೆ? ಎಂದು ಕೊಂಕಿನ ಕುಹಕ ಪ್ರಶ್ನೆಬಿಟ್ಟಳು ಅರ್ಧಾಂಗಿ.

ಗಲೀಜಾಗಿ ಕಾಣುವ ಮನೆಯನ್ನು ನೋಡಿದರೆ, ಅವಳಿಗೆ ನಮ್ಮ ವಿಚಾರದಲ್ಲಿ ಎಂಥಹ ಕೆಟ್ಟ ಅಭಿಪ್ರಾಯ ಬರಬಹುದು - ಎನ್ನುವುದನ್ನು ಯೋಚಿಸಿ ನೋಡಿ. ಮನೆ ನೀಟಾಗಿದ್ದರೆ, ಆವಳಿಗೆ ನಮ್ಮ ಬಗ್ಗೆ ಗೌರವ ಬರಲು ಸಾಧ್ಯ - ಎಂದಳು ಅನುಪಮಾ.

ಅವಳ ತರ್ಕ ಅವನಿಗೆ ಅರ್ಥವಾಗಲಿಲ್ಲಾ. ಮರಿಯಾ ನಮ್ಮ ಮನೆಯ ಅತಿಥಿಯೂ ಅಲ್ಲಾ, ಆಕೆ ಹೆಲ್ತ್ ಇನ್ಸ್‌ಪೆಕ್ಟರೂ ಅಲ್ಲಾ, ಕೇವಲ ಕೆಲಸದವಳು. ಮನೆಕೆಲಸಗಳನ್ನೆಲ್ಲಾ ನೀನೇ ಮಾಡುವುದಾದರೆ ಅವಳ ಅವಶ್ಯಕತೆ ಏಕೆ ಬೇಕು? ಎಂದು ಸಂಜಯ ಪ್ರಶ್ನಿಸಿದ.

ಜನಗಳು ನಮ್ಮ ವಿಚಾರ ಏನು ತಿಳಿದುಕೊಳ್ಳುವರೋ ಎನ್ನುವ ಆತ್ಮಗೌರವ ನಿಮಗೆ ಇದ್ದಂತಿಲ್ಲಾ ಎಂದಳು. ಈ ಅರ್ಥವಿಲ್ಲದ ವಾದಸರಣಿಗೆ ಶರಣು ಹೊಡೆದು, ತಲೆ ಆಡಿಸುತ್ತಾ ಎದ್ದು ಸ್ನಾನಕ್ಕೆ ಹೊರಟ ಸಂಜಯ.

ಅನುಪಮಾ, ಕೆಲವು ಸಾರಿ, ಕೆಲಸಕ್ಕೆ ಹೋಗುವ ಅವಸರದಲ್ಲಿ ಸಿದ್ಧಪಡಿಸದೆ ಮನೆ ಬಿಟ್ಟಾಗ, ಮರಿಯಾ, ಮನೆಗೆಲಸ ಜಾಸ್ತಿಯಾಯ್ತೆಂದು ಅಸಮಾಧಾನ ವ್ಯಕ್ತಪಡಿಸಿ ನಿಯಮಿತ ವೇಳೆ ಮೀರಿದರೆ ಓವರ್ ಟೈಂ ಕೆಲಸ ಮಾಡಿದರೆ ಡಬಲ್ ಛಾರ್ಜ್ ಆಗುವುದೆಂದು ಸೂಚಿಸಿದ್ದಳು.

ಅನುಪಮಾ ಕೆಲಸಕ್ಕೆ ಹೋಗದೇ ಮನೆಯಲ್ಲಿ ಇದ್ದ ದಿನಗಳಲ್ಲಿ ಮರಿಯಾ ಹಗಲು ನಿದ್ದೆ ಮಾಡುತ್ತಿದ್ದನ್ನು ಅವಳು ನೋಡಿದ್ದಳು. ಆಯಾಸದಿಂದ ವಿಶ್ರಾಂತಿ ಪಡೆಯುತ್ತಿರಬಹುದೆಂದು ಸುಮ್ಮನಾಗಿದ್ದಳು. ಸೆಲ್ ಫೋನ್ ನಲ್ಲಿ ಗಂಟೆಗಟ್ಟಲೆ ಮಾತನಾಡುವುದನ್ನು ಕೇಳಿ ಕೆಲಸಕ್ಕೆ ಸೆಲ್ ಫೋನ್ ತರಬಾರದೆಂದು ನಿಯಮಿಸಿದ್ದಳು. ಸಹಾಯ ಮಾಡಲು ಕರೆತಂದಿದ್ದ ಅಕ್ಕನ ಮಗಳ ಜೊತೆ ಹರಟೆ ಹೊಡೆಯುತ್ತಾ ಕಾಲಕಳೆಯುವುದನ್ನು ಕೇಳಿ ಅನುಪಮಾಳಿಗೆ ಮರಿಯಾ ಮೇಲೆ ಸಿಟ್ಟೂ ಬರುತ್ತಿತ್ತು.

ಬರುಬರುತ್ತಾ ಮರಿಯಾಳ ಸೋಶಿಯಲ್ ಟೈಂ ರೀತಿಯ ಬಿಡುವಿನ ವೇಳೆ ಜಾಸ್ತಿಯಾಗುತ್ತಾ ಬಂತು. ಅನುಪಮಾಳಿಗೆ ಕೆಲಸದವಳ ವೇಳೆಗಳು ಡಬಲ್ ಛಾರ್ಜಿನ ಓವರ್ ಟೈಮ್ ಆಗಿ ಪರಿಣಮಿಸಲು ಪ್ರಾರಂಭವಾಯ್ತು.

ತಿಂಗಳ ಕೊನೆಯಲ್ಲಿ ಮರಿಯಾ ತನ್ನ ಇಡೀ ತಿಂಗಳ ವೇತನಪಟ್ಟಿಯನ್ನು ಅನುಪಮಾಳ ಕೈಗಿಟ್ಟಳು. ಅದನ್ನು ನೋಡಿ ನಂಬಲಾಗದೆ ತಲೆ ಸುತ್ತಿದಂತಾಗಿ ಹತ್ತಿರದ ಸೋಫಾದ ಮೇಲೆ ಅನುಪಮಾ ತೊಪ್ಪನೆ ಕುಳಿತಳು.

ಕಣ್ಣುಮುಚ್ಚಿ ಮೆಲುಕುಹಾಕಿ, ಮರಿಯಾಳ ಸಂಬಳದ ಲೆಕ್ಕವನ್ನು ಜೀರ್ಣಿಸಿಕೊಂಡ ಮೇಲೆ ನಿಜಸ್ಥಿತಿ, ತಲೆಯ ಮೇಲೆ ಲೈಟ್ ಬಲ್ಬ್ ನಂತೆ ಆಕೆಗೆ ಹೊಳೆಯಿತು. ಮರಿಯಾಳ ರೆಗ್ಯುಲರ್ ಟೈಮ್, ಡಬಲ್ ಛಾರ್ಜಿನ ಓವರ್ ಟೈಮ್ ಮತ್ತು ಮನೆಗೆಲಸದ ಸಾಮಗ್ರಿಗಳ ಖರ್ಚುಗಳೆಲ್ಲಾ ಸೇರಿ ಒಟ್ಟು ಹಣ ತನ್ನ ಎರಡು ತಿಂಗಳ ಸಂಬಳಕ್ಕೂ ಮೀರಿತ್ತು. ಅದೂ, ತಾನು ಕೆಲಸಮಾಡುವ ಕಡೆ, ತನ್ನ ವರಮಾನದಲ್ಲಿ, ಸರ್ಕಾರ ವಿಧಿಸುತ್ತಿದ್ದ ಆದಾಯದ ತೆರಿಗೆ

ಮತ್ತು ಸೋಷಿಯಲ್ ಸೆಕ್ಯೂರಿಟಿ ಬಗ್ಗೆ ವಂತಿಗೆ, ಅದೂ ಇದೂ ಅಂತ ಮುಲಾಜು ಇಲ್ಲದೆ ಕಳೆದುಕೊಳ್ಳುತ್ತಿದ್ದರು. ಉಳಿದುದನ್ನು ಮಾತ್ರ ಕೈಗೆ ಕೊಡುತ್ತಿದ್ದರು. ಮರಿಯಾಳ ವೇತನ ಇಲ್ಲಿ ಟ್ಯಾಕ್ಸ್ ಫ್ರೀ, ತೆರಿಗೆಯಿಂದ ಮುಕ್ತ, ಒಟ್ಟು ಮೊತ್ತವೇ ನಿವ್ವಳ!

ಅನುಪಮಾಳಿಗೆ ಜ್ಞಾನೋದಯವಾಯ್ತು. ಅನುಮಾನವೇ ಇಲ್ಲಾ, ಇಲ್ಲಿ ಯಾರು ಯಾವ ಸೇವೆ ಯಾರಿಗೆ ಮಾಡುತ್ತಿದ್ದಾರೆ? ಹೋಗುವ ಮೊದಲು, ಮನೆ ಕೆಲಸದವಳಿಗೆ ಮನೆ ಸಿದ್ಧಮಾಡಿ, ಅಲ್ಲಿ ಮನೆ ಹೊರಗಿನ ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿ ಕತ್ತೆಯಂತೆ ಪರರಿಚ್ಚೆಯಂತೆ ದುಡಿದು ಬರುವ ತಾನು ಜವಾನಿ; ಮನಬಂದಂತೆ ಅರಾಮವಾಗಿ ತನ್ನಿಷ್ಟದಂತೆ ಮನೆಯೊಳಗಿನ ಕೆಲಸ ಮಾಡುವ ಮರಿಯಾ, ಯಜಮಾನಿ.

ಭಾನುವಾರ ಬೆಳಿಗ್ಗೆ ಸಂಜಯ ಇನ್ನೂ ಹಾಸಿಗೆಯಲ್ಲೇ ಇದ್ದ. ಅನುಪಮಾ ಆಗಲೇ ಎದ್ದು ಕೆಲಸದಲ್ಲಿ ನಿರತಳಾಗಿದ್ದಳು. ಅಡಿಗೆ ಮನೆಯಲ್ಲಿ ಪಾತ್ರೆಗಳ ಶಬ್ದ. ದಿವಾನಖಾನೆಯಲ್ಲಿ ತಲೆಕೊರೆಯುವಂತಹ ಮನೆಗುಡಿಸುವ ಯಂತ್ರದ ಗಲಾಟೆ. ಈ ನಿದ್ರಾಭಂಗದ ಚಟುವಟಿಕೆಯನ್ನೂ ತಾಳಲಾರದೆ ಎದ್ದು ಕಿರುಚಿದ-

ಏನು ಕೆಲಸದವಳಿಗೆ ಸಿದ್ಧಮಾಡುತ್ತಿರುವಂತೆ ಕಾಣಿಸುತ್ತಿದೆ. ಮರೆತೆಯಾ? ಇದು ಭಾನುವಾರ. ಮರಿಯಾಗೆ ಈದಿನ ರಜಾ

ಅನುಪಮಾ ಅವನಿಗೆ ಕಾಫಿ ತಂದುಕೊಡುತ್ತಾ,

ಗೊತ್ತು ಈ ದಿನ ಭಾನುವಾರ, ಮರಿಯಾ ಬರೋಲ್ಲಾ- ಎಂದಳು.

ಸಂಜಯ ಒಂದು ಗುಟುಕು ಕಾಫಿಯನ್ನು ಕುಡಿದ.

ಮತ್ತೊಂದು ವಿಷಯ. ಮರಿಯಾ ಮತ್ತೆ ಇನ್ಯಾವ ದಿನವೂ ಈ ಮನೆಗೆ ಕಾಲಿಡುವುದಿಲ್ಲಾ. ಅವಳನ್ನ ಈ ಮನೆಗೆಲಸದಿಂದ ವಜಾ ಮಾಡಿಬಿಟ್ಟೆ

ಸಂಜಯ ಕುಡಿದ ಕಾಫಿಯ ಗುಟುಕು ಇನ್ನೂ ಗಂಟಲಿನಲ್ಲೇ ಉಳಿದಿತ್ತು.

ಇನ್ನೊಂದು ವಿಚಾರ, ಅನುಪಮಾ ಸ್ಪಷ್ಟವಾಗಿ ಹೇಳಿದಳು: ಡಿಪಾರ್ಟ್ ಮೆಂಟಲ್ ಸ್ಟೋರ್ ಕೆಲಸಕ್ಕೆ ನಾನು ರಾಜಿನಾಮೆ ನೀಡಿದ್ದೇನೆ. ಈ ಮನೆಯ ಜವಾಬ್ದಾರಿ, ರಾಜ್ಯಭಾರ, ಪೂರ್ಣವಾಗಿ ವಾಪಸ್ ಪಡೆದಿದ್ದೇನೆ. ಕಾಫಿ ಕುಡಿದು ಎದ್ದು ಸ್ವಲ್ಪ ಅಡಿಗೆಮನೆಯಲ್ಲಿ ಸಹಾಯ ಮಾಡಬನ್ನಿ!- ಎಂದು ಗುಡುಗಿದಳು.

ಸಂಜಯನಿಗೆ ಆದ ಆಶ್ಚರ್ಯ ಮತ್ತು ಸಂತೋಷ ಹೇಳತೀರದು. ಕಾಫಿಯ ಬಟ್ಟಲನ್ನು ಅತ್ತ ಹಾಸಿಗೆಯ ಪಕ್ಕದ ಪುಟ್ಟ ಮೇಜಿನ ಮೇಲೆ ಇಟ್ಟು,

ಅಟ್ ಯುವರ್ ಸರ್ವಿಸ್, ಮಹಾರಾಣಿಯವರೇ. ಅಂದಹಾಗೆ ವೆಲ್‌ಕಮ್ ಬ್ಯಾಕ್ ಎಂದು ಸಂಜಯ ಅವಳನ್ನು ಬರಸೆಳೆದು ತಬ್ಬಿಕೊಂಡ.

ಬಟ್ಟಲಿನಲ್ಲಿದ್ದ ಕಾಫಿ ಚೆಲ್ಲಿಹೋದೀತೆಂದು ಅನುಪಮಾ ಅದನ್ನು ಅತ್ತ ತಳ್ಳಿದಳು. ಅಲ್ಲಾಡುತ್ತಾ, ಕಾಫಿ ನಗುತ್ತಿತ್ತು.

❖❖❖

ವಿದ್ಯಮಾನಗಳು

- ಕು.ಕ.

ಕಳೆದ ತಿಂಗಳು ಒಂದು ಕಡೆ ಹೀರೋಗಳು ಇನ್ನೊಂದು ಕಡೆ ಆಂಟೀ ಹೀರೋಗಳು ಪತ್ರಿಕೆಗಳ ಮುಖ್ಯಪುಟಗಳಲ್ಲಿ ರಾರಾಜಿಸಿದ ಕಾಲ. (ಹೀರೋ ಆಪೋಸಿಟ್ ವಿಲನ್ ಆಗಬೇಕಾಗಿಲ್ಲ ಹೀರೋ ಅರ್ಜುನ ಆದರೆ ಆಂಟೀ ಹೀರೋ ಉತ್ತರಕುಮಾರ ಎಂದು ಇಲ್ಲಿ ಬ್ರಾಕೆಟ್ಟಿನಲ್ಲಿ ಹೇಳಬೇಕು). ದಕ್ಷಿಣ ಆಫ್ರಿಕಾದಲ್ಲಿ ಟಿ-20 ಕ್ರಿಕೆಟ್ ವಿಶ್ವ ಕಪ್ ಗೆದ್ದ ಧೋನಿ, ಯುವರಾಜ್, ಉತ್ತಪ್ಪ, ಶ್ರೀಶಾಂತ್, ಗಂಭೀರ್ ಮೊದಲಾದ ವೀರರುಗಳಿಗೆ ಸಹಾರ್ ವಿಮಾನ ನಿಲ್ದಾಣದಿಂದ ವಾಂಖಡೆ ಸ್ಟೇಡಿಯಂವರೆಗೂ ಸಿಕ್ಕ ಸ್ವಾಗತವನ್ನು ನೀವೇ ನೋಡಿದ್ದೀರಿ. ಇನ್ನೊಂದು ವಿಶ್ವ ಪ್ರಶಸ್ತಿ ಪಡೆದ ವಿಶ್ವನಾಥನ್ ಆನಂದ್‌ಗೂ ಈ ಮಟ್ಟವಲ್ಲದಿದ್ದರೂ ವೀರೋಚಿತ ಸ್ವಾಗತವೇ ಸಿಕ್ಕಿದೆ. ತೀರಾ ಅನಿರೀಕ್ಷಿತವಾಗಿ ಭಾರತದ ಪಚೌರಿ ನಾಯಕತ್ವದ ಒಂದು ಸಂಸ್ಥೆಗೆ ವಿಶ್ವಶಾಂತಿಗಾಗಿ ಇರುವ ನೋಬಲ್ ಬಹುಮಾನದಲ್ಲಿ ಅರ್ಧ ಸಿಕ್ಕಿದೆ. ನಮ್ಮ ದೇಶದಲ್ಲಿ ಹೀರೋಗಳ ತೀವ್ರ ಕೊರತೆಯಿದೆ. ಅಪರೂಪಕ್ಕೆ ಇಷ್ಟೊಂದು ಜನ ಒಟ್ಟಿಗೆ ಸಿಕ್ಕಿದ್ದಾರೆ. ಇವರ ಸಾಧನೆಗಳನ್ನು ಜ್ಞಾಪಿಸಿಕೊಂಡು ಇನ್ನಷ್ಟು ದಿನ ಬಾಯಿ ಚಪ್ಪರಿಕೊಳ್ಳುತ್ತಿರೋಣ.

★★★

ಕ್ರಿಕೆಟ್ಟಿನಲ್ಲಿ ಇಂದಿನ ಹೀರೋ ನಾಳೆ ಜೀರೋ. ನಮ್ಮ ಧೋನಿ ಅಂಡ್ ಕಂಪೆನಿ ಹೀಗಾಗದೆ ಆಸ್ಟ್ರೇಲಿಯಾ ವಿರುದ್ಧವೂ ಎರಡು ಏಕ ದಿನ ಪಂದ್ಯ ಹಾಗೂ ಟಿ-20ಯ ಇನ್ನೊಂದು ಪಂದ್ಯದಲ್ಲಿ ಗೆದ್ದಿರುವುದಕ್ಕೆ ಅವರನ್ನು ಅಭಿನಂದಿಸಲೇಬೇಕು.

★★★

ಇದು ಹೀರೋಗಳ ವಿಷಯವಾಯಿತು. ಈಗ ಆಂಟೀ ಹೀರೋಗಳು ಮತ್ಲಬ್ ಉತ್ತರ ಕುಮಾರರುಗಳನ್ನು ನೋಡೋಣ. ಇದರಲ್ಲಿ ದುರದೃಷ್ಟವಶಾತ್, ಟಾಪ್ ಆಫ್ ದಿ ಹೀಪ್‌ನಲ್ಲಿ ನಮ್ಮ ಮಮೋಸಿಂಗ್ ಸಾಹೇಬರೇ ಇದಾರೆ. ಓಹೋ, ಎಡ ಪಕ್ಷಗಳವರು ಬೆಂಬಲ ವಾಪಸ್ ತೋಗೋತಾರಂತೋ? ತೊಗೋಳ್ಲಿ ನಾನೂ ನೋಡೇ ಬಿಡ್ತೀನಿ ಎಂದು ವೀರಾವೇಶದಿಂದ ಮಾತನಾಡಿದವರೇ ಈಗ ಒಪ್ಪಂದ ಆಗಿದ್ದರೆ ಚೆನ್ನಾಗಿತ್ತು ಆಗ್ಲಿಲ್ಲ ಏನು ಮಾಡೋದು ಎಂದು ಕೊರಗುತ್ತಿರುವುದನ್ನು ನೋಡಿದಾಗ ಕೋಪ ಬರಬೇಕು. ಆದರೆ ಅಯ್ಯೋ ಪಾಪ ಏಂದು ಕನಿಕರ ಪಡುವ ಹಾಗಾಗುತ್ತದೆ. ಆಫೀಸಿನಲ್ಲಿ ಬಾಸ್ ಕೈಲಿ ಬೈಗುಳ ತಿಂದವನು ಮನೆಗೆ ಬಂದು ಹೆಂಡತಿ ಮೇಲೆ ಹಾರಾಡುತ್ತಾನೆ. ನಮ್ಮ ಪಿಎಂ ತಮ್ಮ ಸಮರ್ಥಕರ ಮೇಲೆ ಕೋಪ ತೋರಿಸಿಕೊಳ್ಳಲಾಗದೆ ಬಿಜೆಪಿನ ಹಿಗ್ಗಾಮುಗ್ಗಾ ಬೈತಿದಾರೆ. ಅಯ್ಯೋ ಪಾಪ ಎಂದು ಇನ್ನೊಂದು ಬಾರಿ ಹೇಳೋಣ.

★★★

ಇಲ್ಲಿ ನಮ್ಮ ರಾಜ್ಯದ ಆಂಟಿಹೀರೋ ಕುಮಾರಸ್ವಾಮಿ, ಇಲ್ಲಿಯವರೆಗೂ ವಾರದಲ್ಲಿ

ಏಳು ದಿನ ನಾನು ನಂಬಿದವರಿಗೆ ದ್ರೋಹ ಮಾಡುವುದಿಲ್ಲ ಎಂದು ಹೇಳಿಕೊಳ್ಳುತ್ತಿದ್ದ ವ್ಯಕ್ತಿ ಈಗ ನಾನು ವಚನಭ್ರಷ್ಟನಾಗಲು ಸಿದ್ಧ ಎಂದು ಹೇಳುತ್ತಿದ್ದಾರೆ. ಅಧಿಕಾರ ಬೇಕಾಗಿದ್ದಾಗ ಅಪ್ಪನ ಜ್ಞಾಪಕ ಬರದಿದ್ದ ಕುಮಾರಣ್ಣ ಈಗ ಪಿತೃವಾಕ್ಯ ಪರಿಪಾಲಕ! ಮಮೋಸಿಂಗರಂತಹ ಆಂಟೀ ಹೀರೋಗಳ ಬಗೆಗೆ ಕನಿಕರವಾದರೆ ನಮ್ಮ ರಾಜ್ಯದ ಈ ಆಂಟೀ ಹೀರೋಗಳನ್ನು ನೋಡಿದಾಗ, ಅವರ ಮಾತುಗಳನ್ನು ಕೇಳಿದಾಗ ಅಸಹ್ಯವಾಗುತ್ತದೆ.

★★★

ಒಬ್ಬ ಇತಿಹಾಸಕಾರ ನೂರೋ ಸಾವಿರವೋ ವರ್ಷಗಳ ಹಿಂದೆ ಹಾಗಾಯಿತು ಎಂದು ಹೇಳುತ್ತಾನೆ. ಇನ್ನೊಬ್ಬ ಇತಿಹಾಸಕಾರ ಅಲ್ಲ, ಆಗ ಹಾಗಗಲಿಲ್ಲ ಹೀಗಾಯಿತು ಎಂದು ವಾದ ಮಾಡುತ್ತಾನೆ. ಈಗ 10-11 ವರ್ಷಗಳ ಹಿಂದೆ ಏನಾಯಿತು ನಿಮಗೂ ಜ್ಞಾಪಕವಿರಬೇಕು. 1996ರ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿತು, ಬಿಜೆಪಿ ಅತಿ ದೊಡ್ಡ ಪಕ್ಷವಾಗಿದ್ದರೂ ಬಹುಮತಕ್ಕೆ ಬೇಕಾದಷ್ಟು ಸದಸ್ಯ ಬಲ ಪಡೆಯಲಿಲ್ಲ. ಬಿಜೆಪಿ ವಿರುದ್ಧ ಉಳಿದ ಪಕ್ಷಗಳು ಥರ್ಡ್ ಫ್ರಂಟೆಂದು ಒಟ್ಟಿಗೆ ಸೇರಿ ಕಾಂಗ್ರೆಸ್ಸಿನ ಬೆಂಬಲ ಪಡೆದು ದೇವೇಗೌಡರನ್ನು ಪ್ರಧಾನಿಗಳಾಗಿ ಮಾಡಿದರು. ಮುಂದೆ ಕಾಂಗ್ರೆಸ್ಸಿನ ಅಧ್ಯಕ್ಷ ಸ್ಥಾನಕ್ಕೆ ಪಿವಿಎನ್ ಜಾಗದಲ್ಲಿ ಸೀತಾರಾಂ ಕೇಸರಿ ಬಂದರು. ಈ ಕೇಸರಿ ಗೌಡರನ್ನು ನಾಕಮ್ಮ (ನಾಲಾಯಕ್ಕು) ಎಂದು ಕರೆದು ಅವರಿಗೆ ಕೊಟ್ಟಿದ್ದ ಬೆಂಬಲ ವಾಪಸ್ ಪಡೆದರು. ಹೀಗೆ ಮಾಡಿದ ಮಾರನೆಯ ದಿನವೇ ಕೇಸರಿಯವರಿಗೆ ತಮ್ಮ ನೇತೃತ್ವದಲ್ಲಿ ಕಾಂಗ್ರೆಸ್ ಆಗ ಚುನಾವಣೆ ಎದುರಿಸಿದರೆ ಪಕ್ಷಕ್ಕೆ ಆಗಿದ್ದಷ್ಟು ಸ್ಥಾನಗಳೂ ಉಳಿಯುವುದಿಲ್ಲ ಎನ್ನುವ ಜ್ಞಾನೋದಯವಾಯಿತು. ಅವರು ಕೂಡಲೆ ತೃತೀಯ ರಂಗ ದೇವೇಗೌಡರ ಸ್ಥಾನದಲ್ಲಿ ಬೇರೆ ನಾಯಕನನ್ನು ಆರಿಸಿಕೊಂಡರೆ ಕಾಂಗ್ರೆಸ್ ತನ್ನ ಬೆಂಬಲ ಮುಂದುವರಿಸುವುದಾಗಿ ತಿಳಿಸಿದರು. ಇದಕ್ಕೆ ತೃತೀಯ ರಂಗದವರು ಒಪ್ಪಿದರು. ಇಲ್ಲಿ ಲೋಕಸಭೆಯಲ್ಲಿ ಫೀನೀಕ್ಸ್ ಪಕ್ಷಿಯಂತೆ ನನ್ನ ಸುಟ್ಟಬೂದಿಯಿಂದ ನಾನು ಮತ್ತೆ ಹುಟ್ಟಿ ಬರುತ್ತೇನೆ ಎಂದು ಗೌಡರು ಭಾಷಣ ಬಿಗಿಯುತ್ತಿದ್ದಾಗ ಬೇರೊಂದು ಕಡೆ ಇಂದರ್ ಕುಮಾರ್ ಗುಜ್ರಾಲರನ್ನು ಹೊಸ ನಾಯಕನನ್ನಾಗಿ ಆರಿಸಿ ಆಗಿತ್ತು.

ಗೌಡರಿಗೆ ಬಯಸದೇ ಬಂದ ಭಾಗ್ಯ ಬಯಸಿದರೂ ಉಳಿಯದಂತಾಯಿತು. ದೇವೇಗೌಡರನ್ನು ನಾಯಕನನ್ನಾಗಿ ಆರಿಸಿದ ತೃತೀಯ ರಂಗದ ಏಕಮೇವ ಉದ್ದೇಶ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡುವುದು. ಒಂದು ಪಕ್ಷ ಗೌಡರು ಬಿಜೆಪಿಯ ಬೆಂಬಲ ಪಡೆದಿದ್ದರೆ ತೃತೀಯ ರಂಗದ ಒಬ್ಬನೇ ಒಬ್ಬ ಎಂಪಿಯೂ ಗೌಡರ ಜೊತೆ ಉಳಿಯುತ್ತಿರಲಿಲ್ಲ. ಇದು ನಮಗೆ ಗೊತ್ತು ನಿಮಗೆ ಗೊತ್ತು ಆದರೆ ಗೌಡರ ಪಕ್ಷ ಈಗ ಏನು ಹೇಳುತ್ತಿದೆ ನೋಡಿ. ಪ್ರಧಾನಿಯಾಗಿದ್ದ ದೇವೇಗೌಡರ ತಲೆದಂಡವನ್ನು ಕಾಂಗ್ರೆಸ್ ಪಕ್ಷ ಕೇಳಿದಾಗ ಸಾಕ್ಷಾತ್ ಅಟಲ್ ಬಿಹಾರಿ ವಾಜಪೇಯಿ ಬೆಂಬಲ ಮುಂದೊಡ್ಡಿದ್ದರೂ ಬೇಡ ಎಂದು ಪ್ರಧಾನಿ ಪಟ್ಟವನ್ನು ಗೌಡರು ತ್ಯಾಗ ಮಾಡಿದರು! ಎಂತಹ ಮಹಾತ್ಯಾಗ!

❖❖❖

ಆಸ್ಪತ್ರೆಯಲ್ಲಿ

- ಓಂಪ್ರಕಾಶ್

ಮೊನ್ನೆ ಆಸ್ತಮದ ರೋಗಿಯೊಬ್ಬ ಬಂದಿದ್ದ. ಮೂವತ್ತು ವರ್ಷಗಳಿಂದ ಇದೆ ಡಾಕ್ಟ್ರೆ, ಐದಾರು ವರ್ಷ ಬೆಳಗಾಂನಲ್ಲಿ ರಾಜಾರಾವ್ ಅನ್ನೋ ಡಾಕ್ಟ್ರಿಗೆ ತೋರಿಸ್ತಾ ಇದ್ದೆ. ಪಾಪ ಅವರು ತೀರಿಕೊಂಡರು. ಆಮೇಲೆ ಹಾಸನದಲ್ಲಿ ಭಾಸ್ಕರ್ ಅವರಿಗೆ ಹತ್ತು ವರ್ಷ ತೋರಿಸ್ದೆ. ಪಾಪ ಅವರು ಹಾರ್ಟ್ ಅಟ್ಯಾಕ್ ಆಗಿ ಕಾಲವಾದರು. ಈಗ ಬೆಂಗಳೂರಿಗೆ ವರ್ಗ ಆಯಿತು. ನಿಂ ಹೆಸರು ಯಾರೋ ಹೇಳಿದರು ಬಂದಿದೀನಿ ಅಂದ. ಯಾಕೋ ನನಗೆ ಬೆವರಲು ಷುರು ಆಯಿತು.

★★★

ಸುಮಾರು ತೊಂಭತ್ತು ಕೇಜಿ ಆಸಾಮಿ. ಹೆಸರೇನ್ರೀ ಅಂತ ಕೇಳಿದೆ. ಕಲ್ಲಪ್ಪ ಅಂದ. ಏನು ತೊಂದರೆ ಅಂದರೆ ನನಗೆ ಕಲ್ಲಿನಲ್ಲಿ ಪಿತ್ತಕೋಶ ಇದೆ ಅಂದ. ನನಗೇ ಅಚ್ಚರಿ. ಎಲಾ ಇವನಿಗೆ ಏನಿದು ವಿಚಿತ್ರ. ಅಲ್ರೀ ನಿಮ್ಮ ತೊಂದರೆಗೆ ಸರ್ಜನ್ ಹತ್ರ ಹೋಗಬೇಕು ಅಂತ ಸಾಗ ಹಾಕಿದೆ. ಇಷ್ಟು ಹೊತ್ತಿಗೆ ಸರ್ಜನ್ ಅವನ ಪಿತ್ತ ಕೋಶದ ಭಾರವನ್ನು ಕಮ್ಮಿ ಮಾಡಿರುತ್ತಾರೆ.

★★★

ನನಗೆ ಬಿ.ಪಿ. ಇದೆ ಡಾಕ್ಟ್ರೆ

ಯಾವಾಗಿಂದ ?

ನಂ ಪುಟ್ಟಕ್ಕನ ಮಗಳ ಮದುವೆ ಆಯ್ತಲ್ಲ ಅವಾಗಿಂದ ಅಲ್ವೇನೇ?

ಅವರ ಧರ್ಮಪತ್ನಿ ಹೌದು ಅಂತ ತಲೆದೂಗಿದಳು

ಈ World Famous ಪುಟ್ಟಕ್ಕನ ಮದುವೆ ಯಾವಾಗ ಆಯ್ತು ಅಂತ ಕೇಳೋ ಧೈರ್ಯ ನನಗೆ ಬರಲಿಲ್ಲ. ಸುಮಾರು ಹತ್ತು ವರ್ಷ ಅಂತ ಕೇಸ್ ಷೀಟಿನಲ್ಲಿ ಕೊರೆದೆ

★★★

ಏನಮ್ಮಾ ಷುಗರ್ 280 ಆಗಿದೆಯಲ್ಲ

ಅಯ್ಯೋ, ಪಥ್ಯ ಮಾಡ್ತಾನೇ ಇದೀನಲ್ಲ ಡಾಕ್ಟ್ರೆ

ಅವರ ಮಗ : ಅಲ್ಲಮ್ಮ ನಿನ್ನೆ ತಾನೇ ಎರಡು ಜಾಮೂನು ನುಂಗಿದೆಯಲ್ಲ ಅಂದ

ಅದಕ್ಕೆ ಅವಳು ಸರಿ, ಸುಮ್ಮನೆ ಇರು. ಅದಕ್ಕೇ ಇನ್ನರ್ಧ ಡಯನಿಲ್ ನುಂಗಿಲ್ವೇ ಅಂದಳು

ಈ ಮೇಲ್ಕಂಡ ಸಂಭಾಷಣೆಯನ್ನು ಡಯಾಬಿಟೀಸ್ ಜರ್ನಲ್‌ಗೆ ಕಳಿಸಿ ನೋಡೋಣ ಅಂತ ಯೋಚಿಸ್ತಾ ಇದೀನಿ

★★★

ಮೂವತ್ತು ವರ್ಷದ ಯುವಕ ನಿಧಾನವಾಗಿ ಬಂದು ಕೂತ. ಏನ್ರೀ ತೊಂದರೆ ಅಂದೆ.

ನಸುನಗುತ್ತಾ ಏನೂ ಇಲ್ಲ ಡಾಕ್ಟ್ರೆ ಅಂದ. ಮತ್ಯಾಕೆ ಇಲ್ಲಿ ಬಂದಿದಾನೆ ಅಂತ ಚಕಿತನಾದೆ

(ಈ ಜಟಿಲ ಪ್ರಸಂಗದ ಉತ್ತರ ಸರಿಯಾಗಿ ಗೆಸ್ಸಿ ನೋಡೋಣ! ಉತ್ತರ ಮುಂದಿನ ತಿಂಗಳ ಅಪರಂಜೀಲಿ)

❖❖❖

ಧನುರ್ಭಂಗ

- ಮನು

ಅಂದು:

ಅಂದಿನ ಕಥೆ ನಿಮಗೆ ಗೊತ್ತೇ ಇದೆ. ಆದರೆ ಮತ್ತೊಮ್ಮೆ ಹೇಳುವುದರಲ್ಲಿ ಅಂತಹ ನಷ್ಟವೇನಿಲ್ಲ, ಅಲ್ಲವೇ?

ಹಳ್ಳಿಯ ಶಾಲೆ. ನಾಲ್ಕಾರು ತರಗತಿಗಳನ್ನು ಒಟ್ಟುಗೂಡಿಸಿ ಪಾಠ ಮಾಡುವ ಅಧ್ಯಾಪಕರು. ಒಮ್ಮೆ ಇಂತಹ ಶಾಲೆಗೆ ಶಾಲಾ ಇನ್‌ಸ್ಪೆಕ್ಟರ್ ಅವರ ಆಗಮನವಾಯಿತು. ಹೊಸ ಇನ್‌ಸ್ಪೆಕ್ಟರ್, ಹೊಸ ಉತ್ಸಾಹ ಅವರನ್ನು ಕಂಡು ಅಧ್ಯಾಪಕರು ಬೆದರುಗೊಂಬೆಯಂತೆ ನಿಂತರು. ವಿದ್ಯಾರ್ಥಿಗಳ ಸಮೂಹವನ್ನು ನೋಡಿ ಇನ್‌ಸ್ಪೆಕ್ಟರ್ ಅವರಿಗೆ ಕಷ್ಟ ಭುಜಬಲ ಇಮ್ಮಡಿಸಿದಂತೆ ಕಂಡಿತು.

'ಮೇಷ್ಟ್ರೇ, ಪಾಠ ಮಾಡಿದ್ದೀರೇನು? ಪ್ರಶ್ನೆ ಕೇಳಬಹುದೇ?'

'ಓಹೋ, ಖಂಡಿತ ಸ್ವಾಮಿ' ಹಲ್ಲುಕಿರಿಯುತ್ತಾ ಅಧ್ಯಾಪಕರ ಅಂಬೋಣ.

ಇನ್‌ಸ್ಪೆಕ್ಟರ್ ಒಂದು ಬಾರಿ ಸುತ್ತ ದೃಷ್ಟಿಹರಿಸಿದರು. ಒಬ್ಬ ಹುಡುಗನ ಕಡೆ ಕೈತೋರಿಸಿದರು. ಗಂಭೀರವಾಗಿ ಕೇಳಿದರು.

'ಹುಂ....ನೀನು..ನೀನು ಹೇಳು. ಶಿವನ ಧನುಸ್ಸನ್ನು ಮುರಿದವರು ಯಾರು?'

ಹುಡುಗ ಎದ್ದು ನಿಂತ... ಅವನ ಮುಖದ ಮೇಲೆ ಭಯಂಕರ ಗಾಭರಿ.

'ಇಲ್ರೀ ಸಾರ್........ ನಾನ್ ಮುರಿದಿಲ್ಲರ್ರೀ ಸಾರ್...'

ಇನ್‌ಸ್ಪೆಕ್ಟರ್ ಹುಬ್ಬು ಗಂಟಿಕ್ಕಿತು. ಅವರು ಮತ್ತೊಬ್ಬನ ಕಡೆ ಕೈತೋರಿಸಿದರು.

'ಹುಂ ....ನೀನ್ ಹೇಳು. ಯಾರು ಮುರಿದಿದ್ದು ಶಿವನ ಧನುಸ್ಸನ್ನ?'

'ಖಂಡಿತಾ ನಾನಲ್ರೀ ಸಾರ್ .....' ಬೆಚ್ಚಿಬಿದ್ದ ಅವನು ಹೇಳಿದ. ಮತ್ತೆ ಸೇರಿಸಿದ. 'ನನಗೊತ್ತಿಲ್ಲರೀ ಯಾರು ಮುರಿದರೂ ಅಂತ....'

ಇನ್‌ಸ್ಪೆಕ್ಟರ್ ಹುಬ್ಬು ಮತ್ತಷ್ಟು ಗಂಟಿಕ್ಕಿತು. ಹತ್ತಾರು ಹುಡುಗರನ್ನು ಎಬ್ಬಿಸಿ ಇದೇ ಪ್ರಶ್ನೆ ಕೇಳಿದರು. ಎಲ್ಲರದೂ ಅದೇ ಉತ್ತರ. 'ನಾನಲ್ರೀ ಸಾರ್...... ನನಗೊತ್ತಿಲ್ಲರೀ ಸಾರ್.....'

ಇನ್‌ಸ್ಪೆಕ್ಟರ್‌ಗೆ ಬೇಸರ ಬಂತು. ಅವರು ತೀಕ್ಷ್ಣನೋಟ ಬೀರುತ್ತಾ ಅಧ್ಯಾಪಕರ ಕಡೆ ನೋಡಿದರು.

'ಏನ್ರೀ ಮೇಷ್ಟ್ರೇ? ಇದೇನ್ರಿ ಅವ್ಯವಸ್ಥೆ?.....ಛೆ!'

ಅಧ್ಯಾಪಕರು ತಗ್ಗಿದ ದನಿಯಲ್ಲಿ, ಆದರೆ ದೃಢವಾಗಿ

'ಖಂಡಿತ ಸಾರ್, ನಾವ್ಯಾರು ಮುರಿದಿಲ್ಲ... ಬೇಕಾದರೆ ಲೆಡ್ಜರ್ ನೋಡಿ.... ನಮ್ಮ ಶಾಲೆಯಲ್ಲಿ ಅಂಥದೊಂದು ವಸ್ತು ಇಲ್ಲವೇ ಇಲ್ಲ' ಎಂದು ಹೇಳಿದರು!

ಇಂದು:

ಇಂದು ನೀವು ಅದೇ ಹಳ್ಳಿಯ ಶಾಲೆಗೆ ಹೋಗುತ್ತೀರಿ. ಹಿಂದಿನ ಕಥೆ ನಡೆದು ಐವತ್ತು ವರ್ಷವಾಗಿದೆ. ಸ್ವಲ್ಪ ಕಟ್ಟಡದಲ್ಲಿ ಆಧುನಿಕತೆ ಕಾಣಿಸುತ್ತೆ. ಅದರ ಗೋಡೆಯ ಮೇಲೆ 'ಸರ್ವಶಿಕ್ಷಾ ಅಭಿಯಾನ್' ಎಂಬ ದೊಡ್ಡ ಅಕ್ಷರದ ಮಾತುಗಳು ಕಾಣಿಸುತ್ತವೆ. 'ಕಲಿಯಿರಿ, ಕಲಿಸಿರಿ' ಎಂಬ ಘೋಷಣೆ ಕಾಣಿಸುತ್ತದೆ.

ಆದರೆ ಶಾಲೆಯೊಳಗೆ, ತರಗತಿಗಳು ಬೇರೆ ಬೇರೆ ಕೊಠಡಿಗಳಲ್ಲಿ ಇವೆ ಎಂದಾದರೂ, ವಿದ್ಯಾರ್ಥಿಗಳು ಅಧ್ಯಾಪಕರು ಬಹುಪಾಲು ಹಾಗೇ ಕಾಣಿಸುತ್ತಾರೆ. ಹಾಂ. ಸ್ವಲ್ಪ ಯೂನಿಫಾರಂ ಎಂಬ ಬಟ್ಟೆಯ ಶಿಸ್ತಿನಿಂದಾಗಿ ಕೊಳಕಾಗಿದ್ದರೂ ಸರಿಸಮಾನದ ರೂಪ ಕಾಣಿಸುತ್ತದೆ.

ಶಾಲಾ ಇನ್‌ಸ್ಪೆಕ್ಟರ್ ಅಂದು ದಾಳಿಯಿಟ್ಟರು. ಅವರು ಆಯಾ ತರಗತಿಯ ಪಾಠವನ್ನು ಓದಿಕೊಂಡು ಬಂದಿದ್ದರು. ಪ್ರಶ್ನೆಗಳ ಬಗ್ಗೆ ನೋಟ್ಸ್ ಮಾಡಿಕೊಂಡು ಬಂದಿದ್ದರು.

'ಮೇಷ್ಟ್ರೇ, ತಯಾರಿ ಹೇಗೆ ನಡೆದಿದೆ? ಪ್ರಶ್ನೆ ಕೇಳಬಹುದೇ?'

'ಓಹೋ ಧಾರಾಳವಾಗಿ ಸಾರ್' ಅಧ್ಯಾಪಕರ ಮುಖದ ಮೇಲೆ ಗತ್ತು-ಕೇಳಿಕೊಂಡು ಹೋಗಲಿ, ಅದೇನು ಕೇಳಿಕ್ಕೋತಾನೊ ನೋಡೇಬಿಡೋಣ ಎಂಬ ಬಿಮ್ಮು.

ಇನ್‌ಸ್ಪೆಕ್ಟರ್ ಸುತ್ತಾ ದೃಷ್ಟಿಹರಿಸಿದರು. ಹಿಂದಿನ ಬೆಂಚಿನಲ್ಲಿದ್ದ ಹುಡುಗನ ಕಡೆ ಕೈತೋರಿಸಿದರು.

'ಏನಪ್ಪಾ ನಿನ್ನ ಹೆಸರು?' ಕೇಳಿದರು.

'ಸಂಜಯ್' ಕುಳಿತೇ ಉತ್ತರ ಕೊಟ್ಟ

'ಸಂಜಯ್.... ಹುಂ....ನೀನು ಹೇಳು. ಶಿವನ ಧನುಸ್ಸನ್ನು ಮುರಿದವರು ಯಾರು?'

ಆ ಹುಡುಗ ಎದ್ದು ನಿಂತ. ಅವನ ಮುಖದ ಮೇಲೆ ರೋಷ ಕಾಣಿಸಿತು. ಎಂತಹ ಅಪ್ರಯೋಜಕ ಪ್ರಶ್ನೆ ಕೇಳುತ್ತಿದ್ದಾರೆ ಎಂಬಂತೆ.

'ಇನ್ಯಾರು ಸಾರ್, ... ಅವನೇ ರಾಮೇಗೌಡ' ಎಂದ ಗತ್ತಿನಿಂದ.

ಈ ಮಾತಿಗೆ ಥಟ್ಟನೆ ಪ್ರತಿಕ್ರಿಯಿಸುತ್ತಾ ಮತ್ತೊಬ್ಬ ಹುಡುಗ ಎದ್ದುನಿಂತ. 'ಸುಳ್ಳು ಸಾರ್...... ರಾಮೇಗೌಡರಲ್ಲ ಸಾರ್..... ಆ ಕೆಲಸ ಮಾಡಿದ್ದು ದೇವೇಗೌಡ.'

ಒಂದು ಕ್ಷಣದಲ್ಲಿ ತರಗತಿ ಕುರುಕ್ಷೇತ್ರವಾಗಿ ಮಾರ್ಪಟ್ಟಿತು. ಕೆಲವು ಹುಡುಗರು ರಾಮೇಗೌಡ ಎಂದುಕೂಗಿದರೆ, ಇಂಕೆಲವರು ದೇವೇಗೌಡ ಎಂದು ಕೂಗಿದರು. ಕೆಲವು ಹುಡುಗರು ರೋಷದಿಂದ ಎದ್ದುನಿಂತ ಬೇರೆ ಹೆಸರು ಹೇಳಿದ ಹುಡುಗರ ಮೇಲೆ ಮುಗಿಬಿದ್ದರು. ಕೈಕೈ ಮಿಲಾಯಿಸಿತು. ಪುಸ್ತಕಗಳು ಚೆಲ್ಲಾಪಿಲ್ಲಿಯಾದವು. ಇನ್‌ಸ್ಪೆಕ್ಟರ್ ಗಾಭರಿಗೊಂಡರು. ಜೋರಾಗಿ ಕೂಗಿದರು. 'ನಿಲ್ಲಿಸಿ....ನಿಲ್ಲಿಸಿ.....'

ಗಲಾಟೆಯ ತಲೆಗೆ ಹೊಡೆದಂತೆ ಇನ್‌ಸ್ಪೆಕ್ಟರ್ ಕೂಗಿದ್ದರಿಂದ, ಹುಡುಗರು ಹೊಡೆದಾಡುವುದನ್ನು ನಿಲ್ಲಿಸಿ ಇನ್‌ಸ್ಪೆಕ್ಟರ್ ಅವರ ಕಡೆ ತಿರುಗಿದರು. ಇನ್‌ಸ್ಪೆಕ್ಟರ್ ಅವರಿಗೆ ಮುಖಭಂಗವಾದಂತಾಗಿತ್ತು. ಅವರು ಅಧ್ಯಾಪಕರ ಕಡೆ ತಿರುಗಿದರು. ಅಧ್ಯಾಪಕರಾದರೊ ನಿರ್ಲಿಪ್ತರಾಗಿ ತಮಗೂ ಈ ವಿವಾದಕ್ಕೂ ಯಾವುದೇ ಸಂಬಂಧವಿಲ್ಲ ಎಂಬಂತೆ ನಿಂತಿದ್ದರು.

ಇನ್‌ಸ್ಪೆಕ್ಟರು ಈಗ ಅವರನ್ನು ಉದ್ದೇಶಿಸಿ,

'ಏನ್ರೀ ಮೇಷ್ಟ್ರೇ ಇದು? ನಾನು ಕೇಳ್ತಿರೋದೇನು - ಇವರು ಹೇಳ್ತಿರೋದೇನು?

ಹಾಂ... ಶಿವಧನುಸ್ಸನ್ನು ಯಾರು ಮುರಿದರು ಅಂತ ಕೇಳಿದರೆ....' ಅವರು ಮಾತನ್ನು ಪೂರ್ತಿ ಮಾಡಲೂ ಬಿಡದೆ ಅಧ್ಯಾಪಕರು,

'ನೋಡಿ ಇನ್‌ಸ್ಪೆಕ್ಟರೇ, ಇಂತಹ ಪ್ರಶ್ನೆ ನೀವು ಕೇಳಬಾರದಾಗಿತ್ತು. ರಾಮೇಗೌಡರು ಪಂಚಾಯಿತಿ ಅಧ್ಯಕ್ಷರು, ದೇವೇಗೌಡರು ಪಂಚಾಯಿತಿ ಸೆಕ್ರೆಟರಿ. ಅವರಿಬ್ಬರ ನಡುವೆ ಒಡುಕು ತರೋ ಪ್ರಶ್ನೆ ನೀವು ಕೇಳಿದಿರಿ ಅಂತ ವಿದ್ಯಾ ಇಲಾಖೆಗೆ ಬರೀ ಬೇಕಾಗುತ್ತೆ' ಎಂದು ಕಣ್ಣುಹಾರಿಸಿದ!

❖❖❖

ತುಂತುರು

- ಭಾರತೀಯ ವಿದ್ಯಾಭವನದಲ್ಲಿ ಒಳ್ಳೆ ದೋಸೆ ಸಿಗುವಂತಾದರೆ ಅದನ್ನು ಭಾರತೀಯ ವಿದ್ಯಾರ್ಥಿ ಭವನ ಎಂದೂ ಕರೆಯಬಹುದೆ?
- ಏಕತಾ ಕಪೂರಳನ್ನು ಮದುವೆಯಾದರೆ ಅವಳ ಸೀರಿಯಲ್‌ನ ಕತೆಗಳನ್ನೆಲ್ಲ ಮೊದಲೇ ತಿಳಿದುಕೊಳ್ಳುವ ಅವಕಾಶವಿರುತ್ತದೆ!
- ಸತ್ಯದ ಜಾಗವನ್ನು ನಿಶ್ಯಬ್ಧ ಆಕ್ರಮಿಸಿದರೆ ಆ ನಿಶ್ಯಬ್ಧ ಸುಳ್ಳು ಎಂದಾಗುತ್ತದೆ.
- 18 ವರ್ಷ ಆಯಿತೆಂದರೆ 'ವಯಸ್ಕ' ಎಂದು ಬೀಗದಿರಿ: ಏಕೆಂದರೆ, ಈಗ ನಿಮ್ಮನ್ನು ಜೈಲಿಗೆ ಕಳಿಸಬಹುದು - ರಿಮಾಂಡ್ ಹೋಂಗಲ್ಲ!
- ಸಿನಿಮಾ ಒಂದು ಮಾಯಾಲೋಕ ಆಗಿರಬಹುದು. ಆದರೆ ಸಿನಿಮಾ ವ್ಯವಹಾರ ಮಾತ್ರ ನೈಜವಾಗಿರಬೇಕು.
- ಪತ್ರ ಉದ್ದವಾಯಿತು ಕ್ಷಮಿಸಿ. ಚಿಕ್ಕದಾಗಿ ಬರೆಯಲು ಸಮಯವಿರಲಿಲ್ಲ.
- ಹಜ಼ಾರ್ ಹುಡುಗಿಯರಿರ್ತಾರೆ. ಹಜ಼ಾರ್ ಹುಡುಗರಿರುತ್ತಾರೆ. ಆದರೂ 'ಆ' ಹುಡುಗಿ 'ಈ' ಹುಡುಗನನ್ನೇ ಏಕೆ ಪ್ರೀತಿಸ್ತಾಳೆ ಹೇಳ್ರಿ!
- ಕಡಿಮೆ ಅಂಕ ತೋರಿಸುವ ಮಾರ್ಕ್ಸ್ ಕಾರ್ಡ್ ಹೇಳುವ ಸತ್ಯ: ವಿದ್ಯಾರ್ಥಿ ಪರೀಕ್ಷೆಯಲ್ಲಿ ಮೋಸ ಮಾಡಿಲ್ಲ.
- ನೀವೇಕೆ ಮುಖ್ಯಮಂತ್ರಿ ಆಗಲು ಬಯಸುವುದಿಲ್ಲ? ಏಕೆಂದರೆ ನಾನು ಬೇರೊಬ್ಬರ ಮನೆಯಲ್ಲಿ ಮಲಗಲು ಇಷ್ಟಪಡುವುದಿಲ್ಲ.
- ದೊಡ್ಡವರಿಗೆ ದೂರದಿಂದಲೇ ನಮಸ್ಕಾರ ಮಾಡು; ಹತ್ತಿರ ಹೋದರೆ ಅವರೂ ಸಣ್ಣವರಾಗಿ ಕಾಣುತ್ತಾರೆ.
- ಅನುಭವ ತಂದೆ ತಾಯಿಗಳಲ್ಲಿ ಮಾತ್ರ ಇರುತ್ತದೆ; ಮಕ್ಕಳನ್ನು ತಿದ್ದಲು ಅದನ್ನವರು ಬಳಸಬೇಕು.
- ಮೂರು ತರಹದ ಜನರಿದ್ದಾರೆ - ಎಣಿಸಲು ಬರುವವರು, ಎಣಿಸಲು ಬಾರದಿರುವವರು.
- ಸುನಿತಾ ವಿಲಿಯಮ್ಸ್: The real Ms. Universe
- ಸದಾ ಚಿಂತಿಸುವವನ ಎಲ್ಲ ಸಮಸ್ಯೆಗಳು ಬಗೆ ಹರಿದ ಮೇಲೂ 'ಏನೂ ಸಮಸ್ಯೇ ಇಲ್ಲವಲ್ಲ' ಎಂಬ ಚಿಂತೆ ಕಾಡುತ್ತದೆ.

- ದಂನಳ

ಉಕ್ತಿ ಚಾಟೂಕ್ತಿ

- ಎನ್. ರಾಮನಾಥ್

ಸಂಸದ ಪುತ್ರನ ರಾಸಲೀಲೆ - ಸುದ್ದಿ

ಪಿರಿ॥ ಸಂಸದ ಪುತ್ರನೆ ಇಂತಹ ಕಾರ್ಯವ ಮಾಳ್ಪುದು ನೂತನವಲ್ಲವಿದುಂ
ಧ್ವಂಸದ ಬುದ್ಧಿಯು ರಕ್ತದಿ ಹರಿಯುವ ವಂಶದ ಗೌರವ ಪ್ರಶ್ನೆಯಿದುಂ
ಒಲಿದೋ ನುಲಿದೋ ಸುಳಿಯುವ ಪೆಣ್ಣನು ಹಿಂಡುವ ರಕ್ಕಸವಿಂಡುಮಿದುಂ
ತಲೆಕಾ ವುವವರ ಸಂತತಿಯಿಂದಲೆ ದೇಶಕೆ ದುರ್ಗತಿ ಸತ್ಯಮಿದುಂ

★★★

'ಪ್ರತ್ಯೇಕ ರೈಲ್ವೇ ವಿಭಾಗವಾಗದೆ ಕನ್ನಡಿಗರ ದನಿ ಕೇಳದು' - ವಿ.ಕ. ತಲೆಬರಹ

ಕಿರಿ॥ ಕನ್ನಡ ಜನಗಳು ಮಂದಜನ ದನಿಯದು ಪರರಿಗೆ ತಲುಪದಣ್ಣ
ಎನಿತು ಪ್ರತ್ಯೇಕಂ ಗೈದೊಡೆಯುಂ ಪಿಸುದನಿ ತಾರಕಕೆರಗದಣ್ಣ

★★★

ರೌಡಿಸಂ ಚಿತ್ರಗಳ ನಿರ್ಮಾಣದಲ್ಲಿ ಕನ್ನಡವೇ ನಂ.1 - ಸುದ್ದಿ

ಶರ ಷಟ್ಪದಿ॥ ಪ್ಲೀಡರು ಲೀಡರು ಸಚಿವರು ಎಲ್ಲರು
ರೌಡಿಯ ಪಟ್ಟಿಗೆ ಸೇರ್ದವರು
ಪಿಕ್ಚರು ಸಮಾಜ ಬಿಂಬಿಪ ಕನ್ನಡಿ
ತತ್ಕಾರಣವೀ **Pulp**ಉ ತರು!
(**Pulp;** ಕಚಡಾ ಸಾಹಿತ್ಯ)

★★★

ಭಾಜಪಕ್ಕೆ ಕೈಕೊಟ್ಟ ಜೆಡಿಎಸ್ - ಸುದ್ದಿ

ಸುಪ್ರಭಾತದ ಧಾಟಿ:

ಅತಿ ಸ್ವಾರ್ಥದ ಮಂದಿಯ ನಂಬುತ ಕೂತರೆ ಸಾಗ್ವುದು ಎಂದಿಗು ಕೇಡ ಪರಂಪರೆಯೇ
ನರಿ ನಾಯಿಗೆ ವ್ಯತ್ಯಯವಿರ್ಪುದ ನೋಡದಿರಲ್ ಕರಕಷ್ಟವ ದೂರಕೆ ಅಟ್ಟುದು ಸಾಧಿಪುದೇ?

★★★

ಅಪ್ಪ ಕಳ್ಳ; ಮಗ ಸುಳ್ಳ - ಹಾಯ್ ಬೆಂಗಳೂರ್

ಅರ್ಧ ಭೋಗ ॥ ನರಿಯ ಮರಿಯು ನರಿಯೆ ಎಂದು ಆಗದದುವು ಕಿನ್ನರ
ಕ್ಷೀರವನ್ನೆ ಊಡಿಸಿದರು ವಿಷದ ಆಗರ ನಾಗರ

★★★

ರಾಜ್ಯಪ್ರಶಸ್ತಿ ಕೋರಿ 700 ಜನರ ಅರ್ಜಿ - ಸುದ್ದಿ

ಶರ ಷಟ್ಪದಿ॥ ಅಶಕ್ತರಾದೊಡೆ ಭಿಕ್ಷಾಪಥವನು ಪಿಡಿಯದೆ ಅನ್ಯವಿಧಿಯುಮಿಲ್ಲ
ಸಶಕ್ತನಾದವ ಜಗಕೇ ಸೂರ್ಯನು ಜೀಯಾ ಎಂಬುದು ತರವಲ್ಲ

★★★

ಪ್ರಭಾ ಕಣ್ಣಿನ ಆಸ್ಪತ್ರೆ
ಮತ್ತು
ಸಂಶೋಧನಾ ಕೇಂದ್ರ

504, 40ನೇ ಅಡ್ಡ ರಸ್ತೆ, 7ನೇ ಬ್ಲಾಕ್, ಜಯನಗರ,

ಬೆಂಗಳೂರು - 560 070

ದೂರವಾಣಿ : 2634 4131, 41 / 2663 7041

ಮತ್ತು

ವಿಠಲ ಅಂತರರಾಷ್ಟ್ರೀಯ
ನೇತ್ರಶಾಸ್ತ್ರ ಸಂಸ್ಥೆ

ನಂ. 1, 2ನೇ ಅಡ್ಡರಸ್ತೆ, 2ನೇ ಮುಖ್ಯ ರಸ್ತೆ, 7ನೇ ಬ್ಲಾಕ್,

ಬನಶಂಕರಿ 3ನೇ ಹಂತ,

ಹೊಸಕೆರೆಹಳ್ಳಿ, ಬೆಂಗಳೂರು - 560 085

ದೂರವಾಣಿ : 2672 2213 /14 / 15/19

Mailing Date
5th of every month
Mailed at: Rajajinagar - PO

CPMG/KA/BGW-544/2006-2008
RNI-KAR-KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor: M. SHIVAKUMAR